ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ

ಡಾ. ನಿರಂಜನ ವಾನಳ್ಳಿ



ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ

ಡಾ. ನಿರಂಜನ ವಾನಳ್ಳಿ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ
ಲೇಖಕರು : ಡಾ. ನಿರಂಜನ ವಾನಳ್ಳಿ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560001, ದೂರವಾಣಿ : 080-22261967

ಪುಟಗಳು	:	XX + 100
ಬೆಲೆ	:	ರು. 68/-
ಪ್ರತಿಗಳು	:	1000
ಮೊದಲ ಮುದ್ರಣ	:	2020
©	:	ಲೇಖಕರು
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಫ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ISBN No	:	978-81-942226-8-2
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು-560001 ದೂರವಾಣಿ : 080 40927049



ಅರ್ಪಣೆ

ಭಾರತದ ಸ್ವಾತಂತ್ರ್ಯ ಹೋರಾಟ, ರಾಷ್ಟ್ರೀಯತೆ ಹಾಗೂ
ಸರ್ವರಿಗೂ ಶಿಕ್ಷಣ ನೀಡಲು ಅಪಾರವಾಗಿ ಶ್ರಮಿಸಿದ

ಶ್ರೀ ಬಾಲಗಂಗಾಧರ ತಿಲಕ್

ಅವರಿಗೆ ಗೌರವಪೂರ್ವಕವಾಗಿ



ಸತ್ಯವಾದ ಪ್ರಜಾಸತ್ತೆಯು ಅಹಿಂಸೆಯಿಂದಲೇ ಹುಟ್ಟುವುದು. ಜಾಗತಿಕ ಸಂಯುಕ್ತ ರಾಜ್ಯದ ಕಟ್ಟಡಕ್ಕೆ ಅಹಿಂಸೆಯೊಂದೇ ತಳಹದಿ ಹಾಗೂ ಜಾಗತಿಕ ವ್ಯವಹಾರದಲ್ಲಿ ಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕಾಗುವುದು.

– ಮಹಾತ್ಮ ಗಾಂಧಿ

ಮುನ್ನುಡಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ "ಗಾಂಧಿಯೊಳಗಿನ ಪತ್ರಕರ್ತ : ಮರು ವೀಕ್ಷಣೆ" ಕೃತಿಯನ್ನು ನನ್ನ ಓದಿಗೆ ಕೊಟ್ಟು, ತದನಂತರ ಗಾಂಧಿ ಭವನದಿಂದ ಪ್ರಕಟಣೆಗೆ ಪ್ರೀತಿ ಪೂರ್ವಕವಾಗಿ ಕೊಟ್ಟ ಸಾಹಿತಿಗಳು, ಪ್ರಾಧ್ಯಾಪಕರು ಆಗಿರುವ ಡಾ. ನಿರಂಜನ ವಾನಳ್ಳಿ ಅವರಿಗೆ ನಾನು ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ. ಅದರೊಂದಿಗೆ ಈ ಕೃತಿಗೆ ಮುನ್ನುಡಿ ಬರೆಯುವ ಗುರುತರ ಹೊಣೆಯನ್ನು ಕೊಟ್ಟು ನಾನು ಆಳ ಅಧ್ಯಯನಕ್ಕೆ ತೊಡಗುವಂತೆ ಮಾಡಿದ್ದಾರೆ.

ಮಹಾತ್ಮಾಜೀ ಅವರನ್ನು ಸುಮಾರು 35 ವರ್ಷಗಳಿಂದ ಓದುತ್ತಾ, ಓದಿಸುತ್ತಾ, ಕೇಳುತ್ತಾ, ಕೇಳಿಸುತ್ತಾ, ಅರ್ಥೈಸಿಕೊಳ್ಳುತ್ತಾ, ಅರ್ಥ ಮಾಡಿಸುತ್ತಾ, ಸಾಗುತ್ತಿರುವ ನನಗೆ ಗಾಂಧೀಜಿ ಪ್ರತಿಬಾರಿಯೂ ನೂತನವಾಗಿ ಅರಿವಿಗೆ ಬರುತ್ತಾರೆ. ಆ ದೃಷ್ಟಿಯಲ್ಲಿ ಡಾ. ನಿರಂಜನ ವಾನಳ್ಳಿ ಅವರ ಈ ಕೃತಿ ಓದುವಾಗಲೂ ಸ್ವತಂತ್ರ ಭಾರತದ ಪತ್ರಿಕೋದ್ಯಮ ಮತ್ತು ಗಾಂಧೀಜಿ ಅವರ ಪತ್ರಿಕಾ ಮಾಧ್ಯಮದ ಧೃಷ್ಟಿಕೋನದ ತುಲನಾತ್ಮಕ ಅಧ್ಯಯನದ ಹೊಸರೂಪ ಗೋಚರಿಸಲಾರಂಭಿಸಿತು. ಡಾ. ವಾನಳ್ಳಿ ಅವರು ಆಕಾಶವಾಣಿಗಾಗಿ ಸಿದ್ಧಗೊಳಿಸಿದ ಕಾಲಮಿತಿಯ ಲೇಖನಗಳು, ಅವರು ಗಾಂಧಿ ಅವರನ್ನು ಮತ್ತಷ್ಟು ಓದಲು, ಅರಿಯಲು ಪ್ರಚೋದಿಸಿ, ಇನ್ನಷ್ಟು ಬರೆಯಲು ಪ್ರೇರೇಪಿಸಿರುವುದು, ಅವರಿಗೂ, ಗಾಂಧಿ ಅನುಯಾಯಿಗಳಿಗೂ, ಓದುಗರಿಗೂ ಹೊಸ ಅರಿವಿನ

ಬಾಗಿಲನ್ನು ತೆರದಿಟ್ಟಂತಾಗಿದೆ. ಈ ಓದಿನ ಫಲಶೃತಿಯೇ ಈ ಕೃತಿಯಾಗಿ ಹೊರಹೊಮ್ಮಿದೆ.

ಗಾಂಧಿ ಅವರ ನಾಲ್ಕು ದಶಕಗಳ ಪತ್ರಕರ್ತನ ಬದುಕು ಆರು ಪತ್ರಿಕೆಗಳ ಮೂಲಕ ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ, ವಸಾಹತುಶಾಹಿ, ಸಾಮ್ರಾಜ್ಯಶಾಹಿ ವಿರುದ್ಧ ನಡೆಸಿದ ಹೋರಾಟ ಮತ್ತು ಸ್ವತಂತ್ರ ದೇಶಗಳಾಗಿ ಹೊರಹೊಮ್ಮಿದ ಇತಿಹಾಸವನ್ನು ಹೇಳುತ್ತದೆ. ಪತ್ರಿಕೆಗಳು ಜನರಲ್ಲಿ ಸ್ವರಾಜ್ಯ, ಸ್ವಾತಂತ್ರ್ಯ, ದೇಶಪ್ರೇಮ, ಏಕತೆ ಮತ್ತು ರಾಷ್ಟ್ರೀಯತೆಯನ್ನು ಬೆಳೆಸುವ ಸಾಧನವಾಗಿ ಪ್ರಯೋಗಿಸಿ ಯಶಸ್ಸು ಕಂಡವರು ಕರಮಚಂದ ಗಾಂಧಿ ಅವರಾಗಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಇಂಡಿಯನ್ ಓಪಿನಿಯನ್ ಪತ್ರಿಕೆ 1903ರಲ್ಲಿ ಆರಂಭಿಸಿದಾಗ, ಮೋಹನದಾಸರ ವಯಸ್ಸು 36 ವರ್ಷ ಮಾತ್ರ ಆಗಿತ್ತು. ಪರದೇಶದಲ್ಲಿ, ಪರಕೀಯರ ನಡುವೆ, ಪ್ರಭುತ್ವದ ವಿರುದ್ಧ ಪ್ರತಿಭಟನೆಗಾಗಿಯೇ ಪತ್ರಿಕೆಯನ್ನು ಕರಮಚಂದರು ಆರಂಭಿಸಿದ್ದರು. ನಂತರದಲ್ಲಿ ಭಾರತಕ್ಕೆ ಆಗಮಿಸಿ, ಯಂಗ್ ಇಂಡಿಯಾ, ನವ್‌ಜೀವನ್ ಗುಜರಾತಿ ಮಾಸಪತ್ರಿಕೆ, ತದನಂತರ ಹಿಂದಿ ಆವೃತ್ತಿಯನ್ನು ಆರಂಭಿಸಿ, ಜನಾಭಿಪ್ರಾಯ ಮೂಡಿಸುವ ಪತ್ರಿಕೆಗಳನ್ನಾಗಿಸಿದ ಕೀರ್ತಿ ಗಾಂಧಿ ಅವರಿಗೆ ಸಲ್ಲುತ್ತದೆ. ದೇಶದ ದಲಿತ ಬಂಧುಗಳಿಗಾಗಿ, ಹರಿಜನ್, ಹರಿಜನ್ ಸೇವಕ್, ಹರಿಜನ್ ಬಂಧು ಪತ್ರಿಕೆಗಳನ್ನು ದೇಶದ ಎಲ್ಲಾ ಸಮುದಾಯದವರ ಮನಸ್ಸನ್ನು, ದೇಶಕಟ್ಟುವ ಕಡೆಗೆ ಹರಿಸಲು ಆರಂಭಿಸಿದ್ದರು ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಗಾಂಧಿ ಅವರು ಪತ್ರಿಕೆಗಳನ್ನು ಆರಂಭಿಸಿದ ಗುರಿ, ಉದ್ದೇಶ, ಧ್ಯೇಯ, ಮಾರ್ಗ, ವಿಶೇಷತೆಗಳನ್ನು ಡಾ. ವಾನಳ್ಳಿ ಅವರು, ಸವಿವವರವಾಗಿ ಇಲ್ಲಿ ತಿಳಿಸಿದ್ದಾರೆ.

ಇಂದಿನ ಪತ್ರಿಕೆಗಳು, ಉದ್ಯಮವಾಗಿ ಬೆಳೆದಿದ್ದು, ಲಾಭವೇ ಮುಖ್ಯ ಆಶಯವಾಗಿರುವ ಸಂದರ್ಭದಲ್ಲಿ ಗಾಂಧಿ ಅವರು ಪತ್ರಿಕೆಗಳನ್ನು ಸತ್ಯ, ನ್ಯಾಯ, ಪಾರದರ್ಶಕತೆ, ಕನಿಷ್ಠ ಬೆಲೆಯೊಂದಿಗೆ ನಡೆಸಿದ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. 'ಇಂಡಿಯನ್ ಒಪಿನಿಯನ್' ಪತ್ರಿಕೆ, "ಫೀನಿಕ್ಸ್

ಆಶ್ರಮದ ಪತ್ರಿಕೆಯೇ" ಆಗುವಷ್ಟರ ಮಟ್ಟಿಗೆ ಆಶ್ರಮವಾಸಿಗಳ ಶ್ರಮದಿಂದಲೇ ಪ್ರಕಟಗೊಳ್ಳುತ್ತಿತ್ತು. ಇದರಲ್ಲಿ ಕಸ್ತೂರ್‌ಬಾ ಮತ್ತು ಮಹಿಳೆಯರ ಶ್ರಮದ ಫಲವು ಇದೆಯೆಂಬುದನ್ನು ಗಮನಿಸಬಹುದಾಗಿದೆ. ಇದು ಸಹಕಾರಿ ಪ್ರಕಾಶನಕ್ಕೆ ಬುನಾದಿ ಎಂದೂ ಹೇಳಬಹುದಾಗಿದೆ. ಎಲ್ಲರಿಗೂ ಅರ್ಥವಾಗುವ ಸರಳ, ನಿರಾಡಂಬರ ಭಾಷಾ ಪ್ರಯೋಗಕರ್ತರಾಗಿದ್ದ ಗಾಂಧಿ ಅವರನ್ನು ಕುರಿತು ಖ್ಯಾತ ಪತ್ರಕರ್ತ ವಿ.ಎನ್. ನಾರಾಯಣನ್ ಅವರು "ಒಬ್ಬ ಪತ್ರಕರ್ತನಾಗಿ ಗಾಂಧಿ ಪತ್ರಿಕೋದ್ಯಮದ ಪಾಠ ಮಾಡಬಹುದಿತ್ತು. ಅವರೊಬ್ಬ ಪರಿಣಾಮಕಾರಿ ಸಂವಹನಕಾರ. ಅವರ ನೇರ, ದಿಟ್ಟ ಬರಹಗಳು ಕೋಟ್ಯಾಂತರ ದೇಶವಾಸಿಗಳಿಗೆ ತಲುಪುತ್ತಿತ್ತು. ದೇಶದಲ್ಲಿ ಸಾಕ್ಷರತೆ ಇರಲಿಲ್ಲ. ಆದರೂ ಗಾಂಧಿ ಬರೆದಿದ್ದು, ಇಡೀ ದೇಶಕ್ಕೆ ಗೊತ್ತಾಗುತ್ತಿತ್ತು" ಎಂದಿದ್ದಾರೆ. ಇಂಡಿಯನ್ ಒಪಿನಿಯನ್ ಪತ್ರಿಕೆ, ಆಶ್ರಮವಾಸಿಗಳ ಪತ್ರಿಕೆಯಾದಂತೆ, ನವ್‌ಜೀವನ್ ಮುದ್ರಣಾಲಯವನ್ನು ಒಂದು ವಿಶ್ವಸ್ಥ ಮಂಡಳಿ ವತಿಯಿಂದ ನಡೆಯುವಂತೆ ಮಾಡಿದ್ದರು. ಅವರ ಕೆಲವು ಪತ್ರಿಕೆಗಳಿಂದ ಬಂದ ಲಾಭಾಂಶವನ್ನು ಚರಕ – ಖಾದಿಗಾಗಿ ಮತ್ತು ಆಶ್ರಮದ ಕಷ್ಟಗಳಿಗಾಗಿ ಬಳಸಿದ್ದನ್ನು ಅನೇಕ ಕಡೆಗಳಲ್ಲಿ ಉಲ್ಲೇಖವಾಗಿದೆ. ಹರಿಜನ ನಿಧಿಗಾಗಿ ಸಂಗ್ರಹವಾದ ಹಣ ಮತ್ತು ಖರ್ಚು ವೆಚ್ಚಗಳನ್ನು ಹರಿಜನ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಮತ್ತು ಹರಿಜನ ನಿಧಿ ವಿಚಾರಣೆಯ, ನೀತಿ ನಡಾವಳಿ ಸೂತ್ರಗಳನ್ನು 1934ರ ಮಾರ್ಚ್ 2ರ ಸಂಚಿಕೆಯಲ್ಲಿ ಪ್ರಕಟಿಸಿದ್ದನ್ನು ಗಮನಿಸಿದರೆ, ಗಾಂಧಿ ಪ್ರಾಮಾಣಿಕತೆಯ ಅತ್ಯುತ್ತಮ ನಿದರ್ಶನವಾಗಿ ನಿಲ್ಲುತ್ತಾರೆ.

ಗಾಂಧಿ ಅವರಿಗಿದ್ದ ನಾಲ್ಕಾರು ಭಾಷೆಗಳ ಜ್ಞಾನ ಮತ್ತು ಭಾಷಾ ಪ್ರೌಢಿಮೆ ಅವರಲ್ಲಿ ಆರು ಪತ್ರಿಕೆಗಳನ್ನು ಪ್ರಕಟಿಸುವ ಸ್ಥೈರ್ಯವನ್ನು ಬೆಳೆಸಿತ್ತು. ಅದರೊಂದಿಗೆ, ಪ್ರಭುತ್ವದ ಆಡಳಿತದವಿಧಾನ ಮತ್ತು ಅದರ ವಿರುದ್ಧ ಜನಚಳುವಳಿ ಸಂಘಟಿಸಿದ ನಾಯಕತ್ವ ಗಾಂಧಿ ಅವರದ್ದಾಗಿದ್ದರಿಂದ, ಪತ್ರಿಕೆಗಳಿಗೆ ಅಗತ್ಯವಿದ್ದ, ಸುದ್ದಿ ಸಮಾಚಾರ, ನೀತಿ ನಡಾವಳಿ,

ಜನಾಭಿಪ್ರಾಯಗಳನ್ನು ಕ್ರೋಢೀಕರಿಸುವ ವಿವೇಕ ಹಾಗೂ ಪರಿಜ್ಞಾನ ಅವರಲ್ಲಿ ಅಪಾರವಾಗಿದ್ದಿತು. ಆದ್ದರಿಂದಲೇ ಅಂದಿನ ಬ್ರಿಟಿಷ್ ಸರ್ಕಾರ, ಹಲವು ಕ್ಲಿಷ್ಟಕರ ಸಂದರ್ಭದಲ್ಲಿ ಪತ್ರಿಕೆಗಳನ್ನು ನಿರ್ಬಂಧಿಸಿತ್ತು. ಹರಿಜನ ಸೇವಕ್, ಹರಿಜನ ಬಂಧು ಪತ್ರಿಕೆಗಳ ಮೇಲೆ ನಿಷೇಧ ವಿಧಿಸಿದ್ದರ ಬಗ್ಗೆ ಡಾ. ನಿರಂಜನ್ ಅವರು ಲೇಖನದಲ್ಲಿ ಸಮಂಜಸವಾಗಿ ಚರ್ಚಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಸರಳವಾಗಿ, ನೇರವಾಗಿ ಆಸಕ್ತಿದಾಯಕವಾಗಿ ಓದುಗನನ್ನೂ ಸೆಳೆಯುವ ಈ ಕೃತಿಯನ್ನು ಅದೇ ವೃತ್ತಿಯಲ್ಲಿರುವ ಡಾ. ನಿರಂಜನ ವಾನಳ್ಳಿ ಅವರು ಮಾತ್ರ ಬರೆಯಲು ಸಾಧ್ಯ. ಗಾಂಧೀಜಿ ಅವರನ್ನು ಓದುತ್ತಾ ವಾನಳ್ಳಿ ಅವರೂ ಸಹ ಸರಳ, ನಿರಾಡಂಭರ, ನೇರ ದಿಟ್ಟ ಭಾಷಾಶೈಲಿಯಿಂದ ಲೇಖನಗಳನ್ನು ಬರೆದು ವಾಚಿಸಿ, ಕೇಳುಗನನ್ನೂ, ಮತ್ತೀಗ ಓದುಗನನ್ನೂ ಪತ್ರಿಕೋದ್ಯಮದ ಇತಿಹಾಸ, ವಿಕಾಸ, ಹಿನ್ನೆಲೆ, ವ್ಯವಸ್ಥಾಪನೆ, ಪತ್ರಕರ್ತರ ಶ್ರಮ, ಪತ್ರಿಕೆಯ ವಿವಿಧ ಆಯಾಮಗಳು, ಲೇಖಕರು, ಮುದ್ರಣ ಇತ್ಯಾದಿಗಳ ಕುರಿತು ವಿಶೇಷ ಆಸಕ್ತಿ ಬೆಳೆಯುವಂತೆ ಮಾಡಿದ್ದಾರೆ. ಹಾಗಾಗಿ ಇವರೊಬ್ಬರು ವಿಶಿಷ್ಟ ಲೇಖಕರಾಗಿ ಹೊರಹೊಮ್ಮಿದ್ದಾರೆ. ಇವರಿಂದ ಇಂಥಹ ಅನುಪಮ ಕೃತಿಗಳು ರಚನೆಯಾಗಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಲಿ ಎಂದು ಆಶಿಸುತ್ತೇನೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಗಾಂಧೀಜಿ ಅವರ ಬರವಣಿಗೆ, ಪತ್ರಿಕೋದ್ಯಮದ ಆಶಯದ ಕುರಿತಾದ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಗಾಂಧೀಜಿ ಚಿಂತನೆ, ಸಂದೇಶ ಹಾಗೂ ಆದರ್ಶಗಳಿಗೆ ಪೂರಕವಾದ ಕೃತಿಯನ್ನು ಡಾ. ನಿರಂಜನ ವಾನಳ್ಳಿ ಅವರು ರಚಿಸಿ ನಮ್ಮ ಅರಿವಿಗೆ ಇಲ್ಲಿ ತೆರೆದಿಟ್ಟಿದ್ದಾರೆ.

ಮಹಾತ್ಮಾಜೀ ಅವರನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದವರೆಲ್ಲರೂ, ಗಾಂಧಿ ಅವರನ್ನು ಒಂದಿಲ್ಲೊಂದು ಆಯಾಮದಲ್ಲಿ ತಮ್ಮೊಳಗೆ, ಬಿಟ್ಟುಕೊಂಡವರೇ ಆಗಿದ್ದಾರೆ. ಹಾಗೆ ಕಾರ್ಯಕಾರಣ ಸಂಬಂಧದಿಂದ ಗಾಂಧಿ ಅವರನ್ನು ಡಾ. ನಿರಂಜನ ವಾನಳ್ಳಿ ಅವರು ಓದಲು ಪ್ರಯತ್ನಿಸಿದ ಫಲವೇ ಈ ಕೃತಿ ಆಗಿದೆ. 'ಪತ್ರಕರ್ತರಾಗಿ ಗಾಂಧೀಜಿ' ಕುರಿತು ಹಲವಾರು ಕೃತಿಗಳು ಬಂದಿವೆ. ಆದರೆ ವಾನಳ್ಳಿ ಅವರು, ಇಂದಿನ ಪತ್ರಕರ್ತ ಜಗತ್ತಿನ ಅನುಸಂಧಾನದೊಂದಿಗೆ ಪತ್ರಕಾರ ಗಾಂಧಿ ಅವರನ್ನು ವಿಶ್ಲೇಷಿಸುತ್ತಾ ಸಾಗಿದ್ದಾರೆ. ಚಿಕ್ಕ ಚೊಕ್ಕ ಲೇಖನಗಳೊಂದಿಗೆ ಓದುಗನನ್ನು ತಕ್ಷಣ ಓದಿಸಲು ಹಚ್ಚುತ್ತದೆ, ಈ ಕೃತಿ. ಗಾಂಧಿ ಅವರು ಭಾರತದ ಸಾರ್ವಜನಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಅಡಿಯಿಡುವ ಸಂದರ್ಭದಲ್ಲಾಗಲೇ ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್, ಲಾಲಾ ಲಜಪತರಾಯ್, ಮಹಾತ್ಮ ಫುಲೆ ಅವರು ವಸಾಹತುಶಾಹಿ ಆಡಳಿತವನ್ನು ಎದುರಿಸುವ ಬಹು ದೊಡ್ಡ ಭೂಮಿಕೆಯನ್ನೇ ಸಿದ್ಧಗೊಳಿಸಿದ್ದರು. ಶಿಕ್ಷಣ, ಸಂಘಟನೆ, ಜಾಗೃತಿ, ಪತ್ರಿಕೆ, ಸಭೆ–ಚರ್ಚೆ, ಚಳವಳಿ, ಸ್ವದೇಶಿಯತೆ, ಸ್ವರಾಜ್ಯ ಹೀಗೆ ಬಹು ಆಯಾಮಗಳಲ್ಲಿ ಭಾರತೀಯರನ್ನು "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂಬ ದಿಟ್ಟ ಹಾಗೂ ಸ್ಪಷ್ಟ ನಿಲುವಿನೆಡೆಗೆ ಸಜ್ಜುಗೊಳಿಸಿದ್ದರು. ಆ ದಿನಗಳಲ್ಲಿ ಬ್ರಿಟಿಷರ ವಿರುದ್ಧ, ಕ್ರಾಂತಿಕಾರಿಗಳು, ಸಮಾಜವಾದಿಗಳು, ಸೌಮ್ಯವಾದಿಗಳು, ಶಸ್ತ್ರಾಸ್ತ್ರ ಹೋರಾಟಗಾರರು, ಸಂಸ್ಥಾನಿಕರು, ಹೀಗೆ ಭಾರತದಾದ್ಯಂತ ಬಹುಮುಖಿ ಹೋರಾಟಗಳು ನಡೆಯುತ್ತಿದ್ದವು.

ಈ ಎಲ್ಲಾ ಹೋರಾಟಗಳನ್ನು ಏಕತ್ರಗೊಳಿಸಿದ್ದು ಮತ್ತು ಸತ್ಯ ಅಹಿಂಸೆ, ಸಮತೆ, ನ್ಯಾಯದ ಮಾರ್ಗದಿಂದ ಸ್ವಾತಂತ್ರ್ಯ ಆಂದೋಲನವನ್ನು ರೂಪಿಸಿದ ಶ್ರೇಯಸ್ಸು ಮಾಹಾತ್ಮಾಜಿ ಅವರಿಗೆ ಸಲ್ಲುತ್ತದೆ. ಈ ಮಾರ್ಗದಲ್ಲಿ ಕ್ರಮಿಸುವಾಗ, ಗಾಂಧಿ ಅವರು ಸತ್ಯಾಗ್ರಹ, ಲೇಖನಿ, ಚರಕ, ಸ್ವದೇಶಿಯತೆಯ ಸಾಧನಗಳನ್ನು ಪ್ರಯೋಗಿಸಿದರು. ಪತ್ರಿಕೆಗಳ ಆರಂಭ, ಪದ್ಯ-ಭಜನೆ, ಗೀತೆಗಳ ರಚನೆ, ಸ್ವದೇಶಿಯರು-ವಿದೇಶಿಯರಿಗೆ ಸಾವಿರಾರು ಪತ್ರಗಳು - ಹೀಗೆ ಲೇಖನಿಯನ್ನು ಹಲವು ಆಯಾಮಗಳಲ್ಲಿ ವಸಾಹತುಶಾಹಿಯ ವಿರುದ್ಧ ಅಹರ್ನಿಶಿ ಬಳಸಿದರು. ಪತ್ರಿಕೆಗಳ ಮುಖಾಂತರ ಗಾಂಧಿ ಅವರು ಜನರನ್ನು ಸ್ವಾತಂತ್ರ ಹೋರಾಟಕ್ಕೆ ಸಜ್ಜುಗೊಳಿಸಿದ ಪರಿಯನ್ನು ಡಾ. ನಿರಂಜನ ಅವರು, ಈ ಲೇಖನಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಗಾಂಧಿ ಅವರು ಆರಂಭಿಸಿದ ಆರು ಪತ್ರಿಕೆಗಳಾದ ಇಂಡಿಯನ್ ಒಪಿನಿಯನ್, ಯಂಗ್ ಇಂಡಿಯಾ, ನವ್‌ಜೀವನ್, ಹರಿಜನ್, ಹರಿಜನ್ ಬಂಧು, ಹರಿಜನ್ ಸೇವಕ್, ಪತ್ರಿಕೆಗಳು ಇಂಗ್ಲಿಷ್, ಹಿಂದಿ, ಗುಜರಾತಿ, ತಮಿಳು ಭಾಷೆಗಳಲ್ಲಿ ಅಚ್ಚುಮೊಳೆ ಮುದ್ರಣದ ಕ್ಲಿಷ್ಟಕರ ಕಾಲದಲ್ಲಿ ಮುದ್ರಣವಾಗುತ್ತಿದ್ದುದನ್ನು ಗಮನಿಸಿದರೆ ಹತ್ತು ತಲೆ, ಇಪ್ಪತ್ತು ಕೈಗಳ ಬಹುರೂಪಿ ಗಾಂಧಿಯ ಚಿತ್ರಣ ಒಡಮೂಡುತ್ತದೆ. ಗಾಂಧಿ ಅವರು ಪ್ರಮುಖ ಕಾಲಘಟ್ಟದಲ್ಲಿ ಪತ್ರಿಕೆಗಳಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಸ್ವರಾಜ್ಯ ಸ್ಥಾಪನೆಗಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಒಡಮೂಡಿಸುವ, ಲೇಖನ, ಸುದ್ದಿ, ಸಮಾಚಾರ, ವಿಶ್ಲೇಷಣೆ ವಿಮರ್ಶೆಗಳನ್ನು ಬರೆದಿರುವುದನ್ನು ಗಮನಿಸಬಹುದು. ಹಾಗೂ ವಸಾಹತು ವಿರುದ್ಧ ಅವರು ಕೈಗೊಳ್ಳುವ, ಚಳವಳಿ, ಸತ್ಯಾಗ್ರಹ ಪಾದಯಾತ್ರೆಯ ಸೂಚನೆಗಳನ್ನು, ನಿಯಮಗಳನ್ನು, ಕರೆಗಳನ್ನು ಪತ್ರಿಕೆಗಳ ಮುಖಾಂತರವೇ ಜನರಿಗೆ ತಲುಪಿಸುತ್ತಿದ್ದರು. ಯಂಗ್ ಇಂಡಿಯಾದಲ್ಲಿ ಇಂಗ್ಲಿಷ್ ಮಾಧ್ಯಮ ಕುರಿತಾದ ಲೇಖನದಿಂದಾಗಿ ಠಾಗೂರ್ ಮತ್ತು ಗಾಂಧಿ ಅವರ ನಡುವೆ ಪತ್ರಿಕೆಗಳಲ್ಲೇ ಚರ್ಚೆ ನಡೆಯಿತು. ಮುಂದೆ, ಅಹಿಂಸೆಯ ಕುರಿತಾದ ಲೇಖನ, ನಾರಾಯಣಗುರುಗಳ ವೈಕಂ ಚಳುಳಿಯ ಉಲ್ಲೇಖ, ಚೌರಿಚೌರ ಘಟನೆ ಕುರಿತು ಹಿಂಸೆ-ಅಹಿಂಸೆ ವಿಚಾರದ ಚರ್ಚೆ, ದಂಡಿ ಯಾತ್ರೆಯ ಪೂರ್ವ ಪೀಠಿಕೆಯಾಗಿ ಸರ್ಕಾರ ವಿಧಿಸಿದ್ದ ಅಧಿಕ ಹೊರೆಯಾಗಿರುವ, ಉಪ್ಪು ತೆರಿಗೆ, ಕಂದಾಯ, ಪಾನನಿರೋಧ ಇತ್ಯಾದಿ ಕುರಿತಾದ 11 ಬೇಡಿಕೆಯ ಲೇಖನ, ನಂತರ,

'ನಾನು ದಸ್ತಗಿರಿಯಾದರೆ' ಮುಂದೇನು ಎಂಬ ಬಗ್ಗೆ ಲೇಖನ ಬರೆದರು. "ಹರಿಜನ ಬಂಧು" – ಹಿಂದಿ ಆವೃತ್ತಿಯು ಗ್ರಾಮೀಣ ಬದುಕು, ಸರಳ ಜೀವನ, ಯಾಂತ್ರೀಕರಣ ಮುಕ್ತ ಜೀವನ ಶೈಲಿ, ಶಾಂತಿ–ನೆಮ್ಮದಿ, ಕಾಯಕದ ದುಡಿಮೆ, ಇತ್ಯಾದಿ ಕುರಿತಾಗಿ ಗ್ರಾಮ–ದೇಶ–ರಾಷ್ಟ್ರ ನಿರ್ಮಾಣದ ಮುಖ್ಯ ವೇದಿಕೆಯಾಗಿ, 10 ವರ್ಷಗಳ ಕಾಲ ನಡೆಯಿತು. ಕೋಮುವಾದದ ಪ್ರಶ್ನೆಗಳು ಮುನ್ನಲೆಗೆ ಬಂದಾಗ ಹರಿಜನ ಪತ್ರಿಕೆಯಲ್ಲಿ "ಪ್ರತ್ಯೇಕ ರಾಷ್ಟ್ರದ ಕೂಗಿಗೆ ಉತ್ತರ"– ಎಂದು ಲೇಖನ ಬರೆದು, "ಕುರಾನ್, ಬೈಬಲ್, ಗೀತೆ, ಜೆಂದಾವೆಸ್ತಾಗಳಿಂದ ಎಲ್ಲರೂ ಪ್ರೇರಿತರಾಗಿ, ದೇಶ ಕಟ್ಟುವ ಕೆಲಸ ಮಾಡಬೇಕೆಂದು ಕರೆಯಿತ್ತರು. "ಜಾತಿ ತೊಲಗಬೇಕು" ಎಂದು ಲೇಖನ ಬರೆದು, ಅಂತರ್ಜಾತಿಯ ವಿವಾಹ ಹಾಗೂ ಸಾಮೂಹಿಕ ಭೋಜನಕ್ಕೆ ಬೆಂಬಲ ಸೂಚಿಸಿದರು. 1936ರ ಜುಲೈ 11ರ ಪತ್ರಿಕೆಯಲ್ಲಿ, ಡಾ. ಬಿ.ಆರ್. ಅಂಬೇಡ್ಕರ್ ಅವರ "ಜಾತಿವಿನಾಶ" ಲೇಖನವನ್ನು ಪ್ರಕಟಿಸಿ, ಅಡಿಟಿಪ್ಪಣಿ ಬರೆದು ಶ್ಲಾಘಿಸಿ, ಹಿಂದೂ ಧರ್ಮದ ಸುಧಾರಣಾ ಮಾರ್ಗಗಳನ್ನು ಪ್ರಸ್ತಾಪಿಸಿದರು. ದೇಶ ವಿಭಜನೆಯ ಸಂದರ್ಭದಲ್ಲಿ "ಮೊದಲು ನನ್ನನ್ನು ತುಂಡುಮಾಡಿ, ಅನಂತರ ದೇಶವನ್ನು ತುಂಡು ಮಾಡಲಿ" ಎಂದು ಭಾವೋದ್ವೇಗದಿಂದ ಬರೆದರು. 2ನೇ ಮಹಾಯುದ್ಧದ ಸಂದರ್ಭದಲ್ಲಿ, ಭಾರತ ಪಾಲ್ಗೊಳ್ಳುವಿಕೆಯ ಪ್ರಶ್ನೆ ಬಂದಾಗ, 'ನಾಝಿ, ಫ್ಯಾಸಿಸ್ಟರ ಸಹಾಯವೆಂದರೆ ಅಪಾಯ ಎಂದು ಮುನ್ನೆಚ್ಚರಿಕೆಯ ಗಂಟೆ ಬಾರಿಸಿದರು. ಹೀಗೆ ಮಹಾತ್ಮಾಜಿ ಅವರು ಆಜೀವ ಪರ್ಯಂತ, ಭಾರತದ ವಿಮೋಚನೆಯನ್ನೇ ಉಸಿರಾಗಿಸಿಕೊಂಡು ಪತ್ರಿಕೆಯ ಮೂಲಕ ದೇಶವಿದೇಶಗಳನ್ನು ಮತ್ತು ಪ್ರಭುತ್ವವನ್ನು ಚಿಂತನೆಗೆ ಹಾಗೂ ಬದಲಾವಣೆಗಾಗಿ ಪ್ರೇರೇಪಿಸಿದ್ದರು.

ಗಾಂಧಿ ಅವರು ಪ್ರತಿಕಾ ವ್ಯವಸಾಯದಲ್ಲಿ ಎದುರಿಸಿದ ಟೀಕೆ ಟಿಪ್ಪಣಿಗಳು, ಪತ್ರಿಕೆಯ ನಿರ್ಬಂಧ, ಪತ್ರಿಕಾ ಲೇಖನದಿಂದಾಗಿ ಆರು ವರ್ಷಗಳ ಜೈಲುವಾಸ, ಮುಂತಾದುವುಗಳನ್ನು ಡಾ. ವಾನಳ್ಳಿ ಅವರು ಈ ಕೃತಿಯಲ್ಲಿ ಸಕಾರಾತ್ಮಕವಾಗಿ ಚರ್ಚಿಸಿದ್ದಾರೆ. ಹಾಗೂ ಗಾಂಧೀಜಿ ಅವರ ಸ್ವಾತಂತ್ರ್ಯ ಹೋರಾಟ ಹಾಗೂ ರಚನಾತ್ಮಕ ಕಾರ್ಯಗಳ ಮುಖವಾಣಿಯಾಗಿ ಪತ್ರಿಕೆಗಳನ್ನು ಬಳಸಿದ್ದನ್ನೂ, ನಿರಂಜನ ಅವರು ವಿಶ್ಲೇಷಿಸಿದ್ದಾರೆ.

ಲೋಕಮಾನ್ಯ ಬಾಲಗಂಗಾಧರ ತಿಲಕರ ಕೇಸರಿ ಹಾಗೂ ಮರಾಠಾ ಪತ್ರಿಕೆಗಳು ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವ, ದಿ ಹಿಂದೂ, ಇಂಡಿಯನ್ ಪೇಟ್ರಿಯಾಟ್, ಬಾಂಬೆ ಸಮಾಚಾರ್, ನ್ಯೂ ಇಂಡಿಯಾ, ಅಮೃತ್ ಬಜಾರ್, ವಂಗದರ್ಶನ ಪತ್ರಿಕೆಗಳು ಹಾಗೂ ಡಾ. ಅಂಬೇಡ್ಕರ್ ಅವರ ಮೂಕನಾಯಕ, ಬಹಿಷ್ಕೃತ ಭಾರತ, ಜನತಾ ಮತ್ತು ಸಮತಾ ಪತ್ರಿಕೆಗಳು ಸ್ವಾತಂತ್ರ್ಯ, ಜಾತ್ಯಾತೀತತೆ, ಸಮಾನತೆ, ಭ್ರಾತೃತ್ವದಂತಹ, ಸಾರ್ವಕಾಲಿಕ ಮೌಲ್ಯಗಳೊಂದಿಗೆ, ಭಾರತದ ರಾಷ್ಟ್ರೀಯತೆಯ ಸೃಜನೆಗೆ ಕಾರಣವಾದದ್ದನ್ನು ಇದೇ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಪತ್ರಿಕಾ ಮಾಧ್ಯಮವನ್ನು ಜನಸಾಮಾನ್ಯರಲ್ಲಿ ಸ್ವದೇಶಿಯತೆ, ರಾಷ್ಟ್ರೀಯತೆಯನ್ನು ಒಡಮೂಡಿಸಲು ಗಾಂಧೀಜಿ ಅವರು ಪ್ರಯೋಗಿಸಿದ ಬಗೆಯನ್ನು "ಗಾಂಧಿಯೊಳಗಿನ ಪತ್ರಕರ್ತ" ಕೃತಿ ಬಹುವಿಧದಲ್ಲಿ ಅನಾವರಣಗೊಳಿಸುತ್ತದೆ. ಇಂಥಹ ಮೌಲಿಕ ಕೃತಿಯನ್ನು ರಚಿಸಿ ಅದನ್ನು ಗಾಂಧಿ ಭವನದ ಮೂಲಕ ಪ್ರಕಟಣೆಗೆ ಒದಗಿಸಿದ್ದಕ್ಕಾಗಿ ಡಾ. ನಿರಂಜನ ವಾನಳ್ಳಿ ಅವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರು ಮುನ್ನುಡಿಯನ್ನು ಬರೆದು ಪುಸ್ತಕಕ್ಕೆ ಹೊನ್ನಕಳಶವನ್ನೇ ತೊಡಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಕರಡು ತಿದ್ದುಪಡಿಯನ್ನು ಸ್ವಯಂ ಲೇಖಕರೇ ಉತ್ಸಾಹದಿಂದ ಮಾಡುತ್ತಾ, ಗಾಂಧೀಜಿ ಅವರಂತೆ ಕುಶಲಕರ್ಮಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ

ಗೌ॥ ಕಾರ್ಯದರ್ಶಿ, ಕ.ಗಾಂ.ಸ್ಮಾ.ನಿಧಿ

ಲೇಖಕರ ಮಾತು

ಮತ್ತೆ ಕಾಡಿದ ಗಾಂಧಿ

ಎರಡು ವರ್ಷಗಳ ಹಿಂದೆ ಭಾರತೀಯ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕನಾಗಿ ತಜಕಿಸ್ತಾನಕ್ಕೆ ಹೊರಟು ನಿಂತಾಗ, ಶ್ರೀರಂಗಪಟ್ಟಣದ ಹಿರಿಯ ಗೆಳೆಯ ಡಾ ಸುಜಯ್‌ಕುಮಾರ್ ಅವರು 2019–20ರಲ್ಲಿ ಮಹಾತ್ಮಾ ಗಾಂಧಿಯವರ 150ನೇ ಜನ್ಮ ವರ್ಷಾಚರಣೆ ಜಗತ್ತಿನಾದ್ಯಂತ ನಡೆಯಲಿದೆ. ನೀವು ತಜಕಿಸ್ತಾನದಲ್ಲಿ ಗಾಂಧಿಯವರ ಕೀರ್ತಿ ಪತಾಕೆ ಹಾರಿಸಬೇಕು ಎಂಬುದಾಗಿ ಸಲಹೆ ನೀಡಿದ್ದರು. ತಜಕಿಸ್ತಾನಕ್ಕೆ ಬಂದಮೇಲೆ ಗಾಂಧಿ ಕುರಿತು ಪ್ರದರ್ಶನ, ಕಿರುನಾಟಕಗಳು, ವಿಚಾರ ಸಂಕಿರಣಗಳನ್ನೂ ನಡೆಸಿದ್ದೆವು. ಆ ವರ್ಷ ಮುಗಿಯುವುದರೊಳಗೆ ನಾನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಾಪಸ್ಸು ಬರಬೇಕಾಯ್ತು.

ಇಲ್ಲಿಗೆ ಬಂದಮೇಲೆ ಮೈಸೂರು ಆಕಾಶವಾಣಿಯವರು 'ಪತ್ರಕರ್ತರಾಗಿ ಗಾಂಧಿ' ಕುರಿತು ಆರು ದಿನ ಆರು ಚಿಂತನ ಮಾಡಿಕೊಡಲು ಸಾಧ್ಯವೇ ಎಂದು ಕೇಳಿದರು. ಆಕಾಶವಾಣಿಯ ಬೆಳಗಿನ ಚಿಂತನ ಮಾಲಿಕೆ ಬಹಳ ಪ್ರಸಿದ್ಧವಾದುದು. ಅದಕ್ಕೆ ಬಹಳ ಜನ

ಕೇಳುಗರಿದ್ದಾರೆ ಎಂಬುದು ಈ ಹಿಂದೆ ನನಗೆ ಅನುಭವಕ್ಕೆ ಬಂದಿದೆ. ಆಗಲಿ ಎಂದು ಕೆಲಸ ಶುರುಮಾಡಿದೆ. ಸೋಮವಾರದಿಂದ ಶನಿವಾರದವರೆಗೆ ಹರಿದು ಬಂದ ಈ ಚಿಂತನ ಮಾಲೆ, ಗಾಂಧಿಯಲ್ಲಿದ್ದ ಪತ್ರಕರ್ತನ ಬಗ್ಗೆ ಮತ್ತೊಮ್ಮೆ ನಾನು ಓದಲಿಕ್ಕೆ, ಮನನ ಮಾಡಲಿಕ್ಕೆ ಸಿಕ್ಕ ಅವಕಾಶವಾಯ್ತು.ಗಾಂಧಿಯವರ ಬಗ್ಗೆ ಆಳಕ್ಕಿಳಿದಷ್ಟೂ ಹೊಸ ಹೊಸ ವಿಷಯಗಳು ಹೊಳೆಯತೊಡಗಿದವು. ಈ ಸರಣಿ ಭಾಷಣಕ್ಕೆ ಬಹಳ ಒಳ್ಳೆಯ ಪ್ರತಿಕ್ರಿಯೆ ಬಂತು. ಮತ್ತೆ ಡಾ. ಸುಜಯ್‌ಕುಮಾರ್ 'ಇಷ್ಟಕ್ಕೇ ಇದನ್ನು ಬಿಡಬೇಡಿ. ಈ ಆರು ಚಿಂತನಗಳನ್ನು ಮಾಡಿದ್ದೀರಿ, ಇನ್ನಷ್ಟು ಚಿಂತನೆಮಾಡಿ, ಒಳ್ಳೆಯ ಪುಸ್ತಕವಾಗುತ್ತದೆ' ಎಂದರು. ನನಗೂ ಕನ್ನಡದಲ್ಲಿ ಪತ್ರಕರ್ತ ಗಾಂಧಿ ಕುರಿತು ಮರುಭೇಟಿಗೆ ಇದು ಅವಕಾಶವಾಗಬಹುದಲ್ಲ ಎನಿಸಿ, ಬರೆದು ಕೊಡುವುದಾಗಿ ಮಾತುಕೊಟ್ಟೆ.

ಅಷ್ಟು ಹೊತ್ತಿಗಾಗಲೇ ಡಾ. ಸುಜಯ್‌ಕುಮಾರ್ ಅವರು ಬೆಂಗಳೂರಿನ ಗಾಂಧೀ ಸ್ಮಾರಕ ನಿಧಿ, ಕರ್ನಾಟಕದ ಅಧ್ಯಕ್ಷ ಹಾಗೂ ನಮ್ಮಿಬ್ಬರ ಸಮಾನ ಗೆಳೆಯರೂ ಆದ ಶ್ರೀ ವೂಡೇ. ಪಿ ಕೃಷ್ಣ ಅವರನ್ನು ಸಂಪರ್ಕಿಸಿ ಪುಸ್ತಕದ ಬಗ್ಗೆ ಮಾತನಾಡಿಸಿ ಆಗಿತ್ತು. "ಡಾ. ವಾಸಳ್ಳಿ ಬರೆಯುವುದಾದರೆ ನಾವು ಪ್ರಕಟಿಸಲು ಸಿದ್ಧ" ಎಂಬುದಾಗಿ ಶ್ರೀ ಕೃಷ್ಣ ಹೇಳಿದರಂತೆ. "ಅಂದಮೇಲೆ ಈಗ ಕೂಡಲೇ ಬರೆದುಕೊಡುವ ಜವಾಬ್ದಾರಿ ನಿಮ್ಮ ಮೇಲಿದೆ. ನಿಮ್ಮ ಮೇಲೆ ಎಂದಿದ್ದು ಯಾಕೆಂದರೆ ಬರುವ ಅಕ್ಟೋಬರ್ ಎರಡರಂದು ಗಾಂಧೀಜಿಯವರ 150ನೇ ಜನ್ಮ ದಿನದ ವರ್ಷಾಚರಣೆ ಮುಕ್ತಾಯವಾಗುವಾಗ ಪುಸ್ತಕ ಹೊರಬಂದರೆ ಅದಕ್ಕೊಂದು ಅರ್ಥವಿರುತ್ತದೆ' ಎಂದು ಎಚ್ಚರಿಸಿದರು. ನಾನು 'ಈ ರೀತಿ ಒತ್ತಡಗಳಿರುವಾಗಲೇ ಕೆಲಸವಾಗುವುದು, ಮಾಡುತ್ತೇನೆ' ಎಂಬ ಭರವಸೆ ಕೊಟ್ಟೆ. 'ಬರೆಯದಿದ್ದರೆ ಬಿಡುವುದಿಲ್ಲ, ವಾರಕ್ಕೊಮ್ಮೆ ನಾನೇ ಫೋನು ಮಾಡಿ ಎಷ್ಟಾಯಿತು ಎಂದು ವಿಚಾರಿಸುತ್ತೇನೆ' ಎಂದು ಹೆದರಿಸಿದರು. ಅವರು ಹಾಗೆ ಮಾಡಿದರು ಕೂಡಾ! ಅಂತೂ ಡಾ ಸುಜಯ್‌ಕುಮಾರ್ ಅವರ ನಲ್ಮೆಯ ಒತ್ತಾಯದ ಫಲವೇ 'ಗಾಂಧಿಯೊಳಗಿನ ಪತ್ರಕರ್ತ: ಮರು ವೀಕ್ಷಣೆ – ಪುಸ್ತಕ ಸಿದ್ಧಗೊಂಡು ನಿಮ್ಮೆದುರಿಗಿದೆ.

ಗಾಂಧಿಯವರ ಬಗ್ಗೆ ಏನು ಬರೆಯೋದು? ಏನು ಹೇಳಿದರೆ ಆ ಮಹಾಪುರುಷನ ಬಗ್ಗೆ ಏನಾದರೂ ಹೇಳಿದಂತೆ ಆಗಬಹುದು? ಈ ಪ್ರಶ್ನೆ ಬಹಳ ದಿನ ಕಾಡಿತು. ಜಗತ್ತಿನಲ್ಲಿ ಓದಿದಷ್ಟೂ ದಿಗ್ಭ್ರಮೆ ಹುಟ್ಟಿಸುವ, ಹತ್ತಿರ ಹೋದಷ್ಟೂ ದೂರವೇ ಇರುವಂತೆ ಕಾಣುವ ಒಬ್ಬ ವ್ಯಕ್ತಿ ಇದ್ದರೆ ಅದು ಮೋಹನದಾಸ ಕರಮಚಂದ ಗಾಂಧೀಜಿ ಮಾತ್ರ!

ಭಾರತೀಯರೆಲ್ಲರೂ ಗಾಂಧಿಯ ಹೆಸರು ಕೇಳಿರುತ್ತಾರೆ. ಈ ದೇಶದಲ್ಲಿ ಗಾಂಧಿ ಹೆಸರನ್ನು ಲಾಭಕ್ಕೆ ಬಳಸಿಕೊಂಡವರು ಕೆಲವರಿದ್ದಾರೆ. ಅವರ ಕತೆ ಬಿಡಿ. ನೈಜ ಗಾಂಧಿ ಎಂದರೆ ಮೋಹನದಾಸ ಕರಮಚಂದ ಗಾಂಧಿ ಬಗ್ಗೆ ಓದಿರುತ್ತಾರೆ. ಸಾಮಾನ್ಯವಾಗಿ ಅವರ ಸತ್ಯಾಗ್ರಹ, ಸ್ವಾತಂತ್ರ್ಯ ಹೋರಾಟ, ಉಪವಾಸ ಇವೆಲ್ಲ ಗೊತ್ತಿರುತ್ತದೆ. ಆದರೆ ಈಗಿನ

ತಲೆಮಾರಿಗೆ ಗೊತ್ತಿರದ ಅಂಶವೆಂದರೆ ಗಾಂಧೀಜಿಯವರ ಪತ್ರಿಕೋದ್ಯಮ. ಅವರು ಜಗತ್ತು ಕಂಡ ಶ್ರೇಷ್ಠ ಪತ್ರಕರ್ತರಾಗಿದ್ದರು ಎಂಬುದು ಪತ್ರಿಕೋದ್ಯಮ ಓದಿದ ಕೆಲವರಿಗಷ್ಟೇ ಗೊತ್ತಿರಬಹುದು!

ಗಾಂಧೀಜಿ ತಾನು ವೃತ್ತಿನಿರತ ಪತ್ರಕರ್ತನಲ್ಲ ಎಂದು ಹೇಳಿಕೊಂಡರೂ ಕನಿಷ್ಠ 45 ವರ್ಷ ಪತ್ರಿಕಾ ಬರವಣಿಗೆ ಹಾಗೂ ಪತ್ರಿಕಾ ಸಂಪಾದನೆಯೊಂದಿಗೆ ಸಂಪರ್ಕ ಹೊಂದಿದ್ದರು. ಅವರು ಅತ್ಯಂತ ಹೆಚ್ಚು ಕಾಲ ತೊಡಗಿಸಿಕೊಂಡ ಕೆಲಸವೆಂದರೆ ಪತ್ರಿಕಾ ಬರವಣಿಗೆಯೇ. ಅದು 1903ರ ಹೊತ್ತಿಗೆ ಆರಂಭವಾಗಿ 1948ರ ವರೆಗೂ ಮುಂದುವರಿಯುತ್ತದೆ. ಜೈಲಲ್ಲಿ ಇದ್ದಾಗಲೂ, ಉಪವಾಸ ಕುಳಿತಾಗಲೂ ಗಾಂಧೀಜಿ ಬಿಡದೇ ಮಾಡಿದ ಎರಡು ಕೆಲಸವೆಂದರೆ ಪ್ರಾರ್ಥನೆ ಮತ್ತು ಪತ್ರಿಕಾ ಬರವಣಿಗೆ ಎನ್ನಲಾಗಿದೆ.

ಗಾಂಧೀಜಿಯವರ ಕಾಲದಲ್ಲಿ ಅಂಬೆಗಾಲಿಡುತ್ತಿದ್ದ ಭಾರತೀಯ ಪತ್ರಿಕೋದ್ಯಮ ಇಂದು ಬೃಹತ್ತಾಗಿ ಬೆಳೆದಿದೆ. ಲಕ್ಷಗಟ್ಟಲೆ ಜನರ ಜೀವನ ಮಾರ್ಗವಾಗಿದೆ. ಸರ್ಕಾರಗಳನ್ನು ಅಲುಗಾಡಿಸುವ ಶಕ್ತಿಯಾಗಿದೆ. ದೊಡ್ಡ ಉದ್ಯಮವಾಗಿ ಬೆಳೆದಿರುವಂತೆಯೇ ಅನರ್ಹರ ಕೈಯಲ್ಲಿ ಅಸ್ತ್ರವನ್ನು ಕೊಟ್ಟ ಹಾಗೂ ಎನಿಸುತ್ತದೆ. ಗಾಂಧಿ ಪಾಲಿಸಿದ ಪತ್ರಿಕೋದ್ಯಮವನ್ನು ಇಂದು 'ಅದೂ ಪತ್ರಿಕೋದ್ಯಮವೇ ಎಂದು ಕೇಳುವವರಿದ್ದಾರೆ. ಅಷ್ಟರ ಮಟ್ಟಿಗೆ ಇಂದಿನ ಪತ್ರಿಕೋದ್ಯಮಕ್ಕೂ ಗಾಂಧಿ ಕಾಲದ ಪತ್ರಿಕೋದ್ಯಮಕ್ಕೂ ಅಜಗಜಾಂತರವಿದೆ.

ಈ ಕಾರಣದಿಂದ ಗಾಂಧೀಜಿ ಎಂಥಾ ಪತ್ರಕರ್ತರಾಗಿದ್ದರು ಎಂಬುದು ಇಂದಿನ ಕಾಲದ ವಿದ್ಯಾರ್ಥಿಗಳಿಗೆ ಹಾಗೂ ಪತ್ರಿಕಾ ಓದುಗರಿಗೆ ಕುತೂಹಲದ ವಿಷಯವಾಗಿದೆ. ಗಾಂಧೀಜಿ ಪತ್ರಕರ್ತರೇ ಅಲ್ಲ ಎನ್ನುವರಿದ್ದಾರೆ. ನಿಜ. ಇಂದಿನ ಕಾಲದ ಪತ್ರಕರ್ತರ ಸಾಲಿನಲ್ಲಿ ಗಾಂಧೀಜಿಯವರನ್ನು ನಿಲ್ಲಿಸುವುದೇ ಸಾಧ್ಯವಿಲ್ಲ. ಪತ್ರಿಕೆಗಳ ಬಗ್ಗೆ ಅವರ ನಿಲುವುಗಳು, ಸಂಪಾದಕರಾಗಿ ತೆಗೆದುಕೊಂಡ ಗಟ್ಟಿ ನಿರ್ಧಾರಗಳು, ಬರಹಗಾರರಾಗಿ ಪ್ರಯೋಗಿಸಿದ ಶೈಲಿ, ಭಾಷೆ, ನಂಬಿದಂತೆ ಬದುಕಿದ ಧೀಮಂತಿಕೆ, ಪತ್ರಿಕೆಯಿಂದ ಜನಸೇವೆಯೊಂದನ್ನು ಬಿಟ್ಟು ಬೇರೇನನ್ನೂ ಬಯಸದ ನಿರಾಸಕ್ತಿ ಯೋಗ-ಇವೆಲ್ಲ ಜಗತ್ತಿನಲ್ಲಿ ಕಂಡು-ಕೇಳರಿಯದ್ದು. ಒಂದು ಭಿನ್ನ ಮಾದರಿಯನ್ನು ಸೃಷ್ಟಿಸಿದ್ದನ್ನು ಗಾಂಧೀಯವರನ್ನು ಕಂಡರಾಗದವರೂ ಅಲ್ಲಗಳೆಯಲು ಸಾಧ್ಯವಿಲ್ಲ. ಅವರಿಗೆ ಅವರೇ ಸಾಟಿ ಎಂದು ಮಾತ್ರ ಹೇಳಬಹುದು.

ಆದರೆ ಒಪ್ಪಬೇಕಾದ ವಿಚಾರವೆಂದರೆ ಇಂದಿನ ಅರ್ಥದಲ್ಲಿ ಗಾಂಧಿ ಪತ್ರಕರ್ತರಾಗಿರಲಿಲ್ಲ. ಉದ್ಯಮಿಯಂತೂ ಆಗಿರಲೇ ಇಲ್ಲ. ಅವರ ಜೊತೆ ಕೆಲಸಮಾಡಿದವರೆಲ್ಲ ಹೆಚ್ಚಾಗಿ ಸ್ವಯಂಸೇವಕರು. ಸಂಬಳದ ಆಸೆಗೆ ಕೆಲಸಮಾಡಿದವರಲ್ಲ. ಆದರೆ ಈಗ ಹಾಗೆ ಸ್ವಯಂಸೇವಕರನ್ನು ನಂಬಿಕೊಂಡು ಕೆಲಸಮಾಡಲಾಗುತ್ತದೆಯೇ? ಇನ್ನೊಂದು ಸಂಗತಿ ಈಗಿನ ಪತ್ರಿಕೋದ್ಯಮದ ಮುಖವೇ ದಿನಪತ್ರಿಕೋದ್ಯಮ. ಆದರೆ ಗಾಂಧಿ ಅದರಲ್ಲಿ ಕೈಯಾಡಿಸಿದವರಲ್ಲ. ದಿನಪತ್ರಿಕೆಯ ಅರ್ಥಶಾಸ್ತ್ರವೇ ಬೇರೆ. ದಿನಪತ್ರಿಕೆಗಳಿಗೆ ಹೋಲಿಸಿದರೆ ನಿಯತಕಾಲಿಕಗಳದ್ದು ಸಣ್ಣ ವ್ಯವಹಾರ. ಗಾಂಧೀಜಿ ಜಾಹೀರಾತು ಇಲ್ಲದೇ ಪತ್ರಿಕೆ ನಡೆಸುವ ಮಾತಾಡುವುದು ನಿಯತಕಾಲಿಕಗಳೇ ವಿನಾ ದಿನಪತ್ರಿಕೆಗಳಾಗಿರಲಿಕ್ಕಿಲ್ಲ. ಅವರ ತತ್ವಗಳು ಇಂದಿಗೂ ಆದರ್ಶವೇ ನಿಜ. ಆದರೆ ಎಷ್ಟೋ ಒಪ್ಪಂದಗಳನ್ನು ಮಾಡಿಕೊಳ್ಳದೇ ಇಂದು ಪತ್ರಿಕೆ ನಡೆಸುವುದು ಸಾಧ್ಯವೇ ಇಲ್ಲ!

ಗಾಂಧೀಜಿಯವರಿಗೆ ಗುರಿ ಮಾತ್ರವಲ್ಲ ದಾರಿ ಕೂಡಾ ಮುಖ್ಯವಾಗಿತ್ತು. ಆದರೆ ಇಂದಿನವರು ಕಟ್ಟುನಿಟ್ಟಾಗಿ ಅದನ್ನು ಪಾಲಿಸುವರೇ ಎಂದು ಚರ್ಚಿಸಬೇಕಿದೆ. ಗಾಂಧಿಯವರ ಪತ್ರಿಕೋದ್ಯಮವನ್ನೇ ಕೇಂದ್ರವಾಗಿಟ್ಟುಕೊಂಡು ನೂರಾರು ಅಧ್ಯಯನಗಳು ನಡೆದಿವೆ. ಅಸಂಖ್ಯ ಲೇಖನಗಳು ಪ್ರಕಟಗೊಂಡಿವೆ. ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಲ್ಲೂ ನೂರಾರು ಪುಸ್ತಕಗಳು ಬಂದಿವೆ. ಗಾಂಧಿಯವರ ಸಮಗ್ರ ಬರವಣಿಗೆಯ ನೂರು ಸಂಪುಟಗಳನ್ನು ಕೇಂದ್ರ ಸರ್ಕಾರ ಹೊರತಂದಿದ್ದು ಯಾವುದೇ ದೇಶದ ಮುದ್ರಣ ಚರಿತ್ರೆಯಲ್ಲಿ ಅದೊಂದು ಮೈಲುಗಲ್ಲು. ಇಷ್ಟಾಗಿಯೂ ಗಾಂಧೀಜಿಯವರ ಹೇಳಿಕೆಗಳನ್ನು, ಲೇಖನಗಳನ್ನು ಪ್ರತಿಬಾರಿ ಗಮನಿಸಿದಾಗಲೂ ಹೊಸತೇನೋ ಹೊಳೆಯುತ್ತದೆ. ಅವರ ಚಿಂತನೆಗಳು ಒರಿಜಿನಲ್ ಆಗಿ ಕಾಣುತ್ತವೆ. ಅತ್ಯಂತ ಸರಳವಾಗಿ, ಆದರೆ ಸರಳತೆಯ ಗರ್ಭದೊಳಗೆ ಕ್ರಾಂತಿಯ ಬೀಜಗಳನ್ನು ಹುದುಗಿಸಿಕೊಂಡವುಗಳಾಗಿ ಕಾಣುತ್ತವೆ. 'ನನ್ನ ಜೀವನವೇ ನನ್ನ ಸಂದೇಶ' ಎಂಬ ಅವರ ಒಂದು ಹೇಳಿಕೆಯೇ ಸಾಕು ಗಾಂಧಿಯನ್ನು ಭಿನ್ನವಾಗಿಸಲಿಕ್ಕೆ. ಇತ್ತೀಚೆಗೆ ಓದಿದ ಒಂದು ಹೇಳಿಕೆ ನನ್ನನ್ನು ಅಲುಗಾಡಿಸಿಬಿಟ್ಟಿತು. ಅದೆಂದರೆ ನಿನ್ನ ಮೃದುತ್ವದಿಂದಲೇ ನೀನು ಜಗತ್ತನ್ನು ಅಲುಗಾಡಿಸಬಹುದು ಎಂಬುದು.

ಬಹುಶಃ ಇಂಥ ಸಹಸ್ರಾರು ಹೇಳಿಕೆಗಳು ಗಾಂಧೀಜಿಯವರ ಹೆಸರಿನಲ್ಲಿ ಅಜರಾಮರವಾಗಿ ಉಳಿಯುತ್ತವೆ. ಅವರನ್ನೂ ಉಳಿಸುತ್ತವೆ. ಗಾಂಧೀಜಿಯವರು ಪತ್ರಿಕೋದ್ಯಮದ ಬಗ್ಗೆ ಹೇಳಿದ್ದನ್ನು, ಪತ್ರಿಕೆಗಳ ಮೂಲಕ ಅವರು ಮಾಡಿದ ಪ್ರಯೋಗಗಳನ್ನು ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿ ಓದಿದ್ದೇನೆ. ಪರೀಕ್ಷೆಯಲ್ಲಿ ಪ್ರಶ್ನೆ ಕೊಟ್ಟಾಗ ಭಾರೀ ಉಮೇದಿನಿಂದ ಉತ್ತರ ಬರೆದಿದ್ದೇನೆ. ಪರೀಕ್ಷೆಯಲ್ಲಿ ಉತ್ತರಿಸಲು ಆಗ ಓದಿದ್ದು ಬೇರೆ, ಈಗ ಸ್ವತಂತ್ರವಾಗಿ ಯೋಚಿಸುವಾಗ ಕಂಡ ಪತ್ರಕರ್ತ ಬೇರೆ. ಗಾಂಧೀಜಿ ಮುಖ್ಯವಾಗಿ 'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ', 'ನವಜೀವನ', ಹಾಗೂ 'ಹರಿಜನ' ಈ ನಾಲ್ಕು ಪತ್ರಿಕೆಗಳ ಕರ್ಣಧಾರತ್ವ ವಹಿಸಿಕೊಂಡವರು. 'ಸತ್ಯಾಗ್ರಹಿ' ಎಂಬ ಕೈಬರಹದ ಪತ್ರಿಕೆಗೂ ಅಘೋಷಿತ ಸಾರಥಿಯಾಗಿದ್ದರು. 'ಹರಿಜನ ಬಂಧು' 'ಹರಿಜನ ಸೇವಕ', ಮುಂತಾಗಿ ಬೇರೆ ಬೇರೆ ಭಾಷೆಗಳಲ್ಲಿ ಅವರ 'ಹರಿಜನ' ಪತ್ರಿಕೆಯನ್ನು ಮುದ್ರಿಸಲಾಗುತ್ತಿತ್ತು. ಕನ್ನಡದಲ್ಲಿ ಶ್ರೀ ಸಿದ್ಧವನಹಳ್ಳಿ ಕೃಷ್ಣ ಶರ್ಮರು 'ಹರಿಜನ' ಪತ್ರಿಕೆಯ ಮುಂದಾಳತ್ವ ವಹಿಸಿಕೊಂಡಿದ್ದರು. ಆರಂಭದಲ್ಲಿ ಇಂಗ್ಲೆಂಡಿನ 'ವೆಜಿಟೇರಿಯನ್' ಪತ್ರಿಕೆಗೆ ಸರಣಿ ಲೇಖನಗಳನ್ನು ಬರೆದರು. ಜೀವನದಲ್ಲಿ ಒಂದೇ ಒಂದು ಬಾರಿಯೂ ಒಪ್ಪಿಕೊಂಡ ಲೇಖನವನ್ನು ತಡಮಾಡಿ ಕೊಡಲಿಲ್ಲ. ನಾನಾ ನೆಪ ಹೇಳಿ ಬರೆಯುವುದನ್ನು ಮುಂದಕ್ಕೆ ಹಾಕಲಿಲ್ಲ. ಅನಗತ್ಯವಾಗಿ ಯಾರನ್ನೋ ಹೊಗಳುವುದಕ್ಕೋ ತೆಗಳುವುದಕ್ಕೋ ತಮ್ಮ ಲೇಖನಿಯನ್ನು ಮುಡಿಪಿಡಲಿಲ್ಲ. ಆಸ್ಪತ್ರೆಯಲ್ಲಿದ್ದಾಗಲೂ ಜೈಲಿನಲ್ಲಿ ಇದ್ದಾಗಲೂ ಬರವಣಿಗೆಯನ್ನು ತಪ್ಪಿಸಲಿಲ್ಲ. ಇಂಥ ಇನ್ನೊಬ್ಬ ಪತ್ರಕರ್ತನನ್ನು ಎಲ್ಲಿ ಕಾಣಲು ಸಾಧ್ಯ? ಮತ್ತೆ ತನ್ನ ನಂಬಿಕೆಗೆ ಅನುಗುಣವಾಗಿ ಪತ್ರಿಕೆ ನಡೆಸಲು ಸಾಧ್ಯವಾಗದಿದ್ದರೆ ಪತ್ರಿಕೆಯನ್ನು ಮುಚ್ಚಿಬಿಡಲು ಅವರಿಗೆ ಯಾವುದೇ ಭಾವನಾತ್ಮಕತೆಯೂ ಅಡ್ಡಿಬರುತ್ತಿರಲಿಲ್ಲ. ಅಂಥಾ ಡಿಟ್ಯಾಚ್‌ಮೆಂಟು ಗಾಂಧೀಜಿಯವರಿಗೆ ಮಾತ್ರ ಸಾಧ್ಯವೇನೋ!

ಹೀಗೆ ಗಾಂಧಿಯವರ ಪತ್ರಿಕೋದ್ಯಮವನ್ನು ಅಧ್ಯಯನ ಮಾಡಿದಷ್ಟೂ ಹೊಸ ಹೊಳಹುಗಳು ಕಾಣಬರುತ್ತಿದ್ದುದರಿಂದ ಗಾಂಧಿಯೊಳಗಿನ ಪತ್ರಕರ್ತನನ್ನು ಮರು ಭೇಟಿಮಾಡಲು ನಿರ್ಧರಿಸಿದೆ.

ಇದು 150ರ ತಾರುಣ್ಯದ ಗಾಂಧೀಜಿಗೆ ಕೊಡಬಹುದಾದ ಯೋಗ್ಯ ಕಾಣಿಕೆಯೆಂದು ನನ್ನ ಭಾವನೆ. ಇಲ್ಲಿ 30 ಲೇಖನಗಳಿವೆ. ಇವೆಲ್ಲ ಎರಡು ಪುಟ ಮೀರದ ಚಿಕ್ಕ ಬರಹಗಳು. ಹೀಗೇಕೆಂದು ಓದುಗರು ಕೇಳಬಹುದು. ಮೊದಲೇ ಹೇಳಿದಂತೆ ಈ ಪುಸ್ತಕದ ಮೊದಲ ಆರು ಬರಹಗಳು ಮೈಸೂರು ಆಕಾಶವಾಣಿಯ ಚಿಂತನಕ್ಕಾಗಿ ಬರೆದವುಗಳು. ಅವುಗಳನ್ನು ನಾಲ್ಕು ನಿಮಿಷದಲ್ಲಿ ಭಾಷಣದ ರೂಪದಲ್ಲಿ ಹೇಳಬೇಕಿತ್ತು. ಅವುಗಳ ಮಾದರಿಯಲ್ಲೇ ಉಳಿದ 24 ಲೇಖನಗಳನ್ನೂ ಬರೆದೆ. ಹೀಗಾಗಿ ಇವು ಒಂದೊಂದೂ ಐದು ನಿಮಿಷಕ್ಕಿಂತ ಹೆಚ್ಚು ಅವಧಿಯನ್ನು ಓದಲು ತೆಗೆದುಕೊಳ್ಳುವುದಿಲ್ಲ. ಓದಿದ ಮೇಲೆ ಕೆಲವರಿಗಾದರೂ ಹೆಚ್ಚು ಹೊತ್ತು ಚಿಂತನೆಗೆ ಹಚ್ಚಿದರೆ ಸಾಕು. ಈಗಿನ ಕಾಲದಲ್ಲಿ ಪುಸ್ತಕ ಚಿಕ್ಕ ಚಿಕ್ಕ ಬರಹಗಳನ್ನು ಹೊಂದಿದ್ದರೆ ಓದುವವರಿಗೆ ಅನುಕೂಲವೆಂಬುದು ನನ್ನ ಭಾವನೆ.


ಈ ಪುಸ್ತಕದ ಕಲ್ಪನೆಯನ್ನು ತಲೆಯಲ್ಲಿ ಬಿತ್ತಿದ ಗೆಳೆಯ ಡಾ. ಸುಜಯ್‌ಕುಮಾರ್ ಅವರಿಗೆ, ಯಾವುದೇ ಶರತ್ತಿಲ್ಲದೇ ಪ್ರಕಟಿಸಲು ಮುಂದೆ ಬಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಶ್ರೀ ವುಡೇ ಪಿ ಕೃಷ್ಣ ಅವರಿಗೆ, ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ, ಈ ಪುಸ್ತಕವನ್ನು ಬರೆಯುವ ಹಾಗೂ ಹೊರತರುವ ಸಂದರ್ಭದಲ್ಲಿ ಬಹುವಿಧ ಸಹಾಯ ಮಾಡಿದ ಮಡದಿ ಸವಿತಾ, ಮಕ್ಕಳು ಸ್ಫೂರ್ತಿ ಮತ್ತು ಸಿರಿ, ಅಳಿಯ ವಿವೇಕ ಹಾಗೂ ನಮ್ಮ 4C ಸಂಸ್ಥೆಯ ಕಾರ್ಯದರ್ಶಿ ಹಾಗೂ ಗೆಳೆಯ ಶ್ರೀವತ್ಸ ಅವರಿಗೆ ಋಣಿ. ಚಂದದ ಮುಖಪುಟ ವಿನ್ಯಾಸದೊಂದಿಗೆ ಸಕಾಲದಲ್ಲಿ ಮುದ್ರಿಸಿಕೊಟ್ಟ ಕ್ರಿಯೇಟಿವ್ ಗೀಕ್ಸ್‌ನ ಮಹೇಶ್ ಅವರಿಗೆ ಧನ್ಯವಾದಗಳು.

ಈ ಹೊತ್ತಗೆಯನ್ನು ಗಾಂಧೀಜಿ ನೋಡಿದ್ದರೆ ಏನು ಹೇಳುತ್ತಿದ್ದರು ಗೊತ್ತಿಲ್ಲ. ಬೆನ್ನು ತಟ್ಟುತ್ತಿದ್ದರೇ, ಕೆನ್ನೆಗೆ ತಟ್ಟುತ್ತಿದ್ದರೇ ಹೇಳಲಾರೆ. ವ್ಯಕ್ತವಾದಷ್ಟೂ ಅವ್ಯಕ್ತವಾಗುವ ಗಾಂಧೀಜಿ ಎಂಬ ಸೋಜಿಗಕ್ಕೆ ಈ ಪುಸ್ತಕ ಅರ್ಪಣೆ.

ಡಾ. ನಿರಂಜನ ವಾನಳ್ಳಿ

ಮೈಸೂರು

ಪರಿವಿಡಿ



ಅಸಾಮಾನ್ಯ ಪತ್ರಕರ್ತ ಗಾಂಧೀಜಿ

ಮೋಹನದಾಸ ಕರಮಚಂದ್ ಗಾಂಧಿ–ಮಾನವ ಚರಿತ್ರೆಯಲ್ಲಿ ಇಂಥವರೂ ಇದ್ದರು ಅಂತ ನಂಬಲಿಕ್ಕೇ ಸಾಧ್ಯವಿಲ್ಲದಂಥ ವ್ಯಕ್ತಿ. ಅವರನ್ನು ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸುಧಾರಕರಾಗಿ, ಸತ್ಯ ಮತ್ತು ಅಹಿಂಸೆಯ ಪ್ರತಿಪಾದಕರಾಗಿ, ಹೀಗೆ ಮಹಾತ್ಮಾ ಗಾಂಧಿ ಅವರನ್ನು ಹಲವು ರೀತಿಗಳಲ್ಲಿ ಬಣ್ಣಿಸಬಹುದು. ಸಾಮಾನ್ಯವಾಗಿ ಗಮನಿಸದೇ ಹೋಗುವ ಅವರ ಇನ್ನೊಂದು ಮುಖ ಪತ್ರಕರ್ತರದು. ಅವರು ಶ್ರೇಷ್ಠ ಬರಹಗಾರರು, ಹಾಗೂ ಹೋಲಿಕೆಯೇ ಇಲ್ಲದ ಪತ್ರಕರ್ತರು. ಯಾಕೆಂದರೆ ಅವರನ್ನು ಕಣ್ಣಾರೆ ಕಾಣದ ನಮ್ಮ ತಲೆಮಾರಿನವರಿಗೆ ಸಣಕಲು ಕಡ್ಡಿಯಂತಿದ್ದ ಒಬ್ಬ ವ್ಯಕ್ತಿ ಸೂರ್ಯ

ಮುಳುಗದ ಸಾಮ್ರಾಜ್ಯದ ಬುಡ ಅಲ್ಲಾಡಿಸ ಬಲ್ಲವರಾಗಿದ್ದರು ಎಂಬುದೇ ವಿಸ್ಮಯವಾಗಿ ಕಾಣುತ್ತದೆ. ಅವರು ಪ್ರಭಾವೀ ಭಾಷಣಕಾರರೆಂದು ಪ್ರಸಿದ್ಧರಲ್ಲ. ಆದರೆ ಅತ್ಯಂತ ಸರಳವಾಗಿ, ನೇರವಾಗಿ, ಸ್ಪಷ್ಟವಾಗಿ, ದಿಟ್ಟವಾಗಿ ಅನಿಸಿದ್ದನ್ನು ಯಾವ ವಿನಾಯಿತಿ ಇಲ್ಲದೇ ಹೇಳುವ ಅಥವಾ ಬರೆಯುವ ಗಟ್ಟಿತನ, ಅಂದಿನಿಂದ ಇಂದಿನವರೆಗೆ ಬೇರೆ ಅವರಲ್ಲಿ ಕಾಣದ್ದು ಎನ್ನಬಹುದು. ಗಾಂಧೀಜಿ ಇಂಗ್ಲೆಂಡಿಗೆ ಹೋಗುವ ಮೊದಲು ಭಾರತದಲ್ಲಿರುವಾಗ ಪತ್ರಿಕೆಯನ್ನು ಓದಿರಲಿಲ್ಲ. ಅಥವಾ ಪತ್ರಿಕೆಗಳಿಗೆ ಬರೆದಿರಲಿಲ್ಲ. ಇಂಗ್ಲೆಂಡಿಗೆ ಹೋದಮೇಲೆ ವೆಜಿಟೇರಿಯನ್ ಪತ್ರಿಕೆಗೆ ಫ್ರೀಲಾನ್ಸಿಯಾಗಿ ಬರೆಯತೊಡಗಿದರು. ನಂತರ ದಕ್ಷಿಣ ಆಫ್ರಿಕೆಗೆ ಹೋದಮೇಲೆ, ಅಲ್ಲಿ ಭಾರತೀಯರು ಕ್ಷಣಕ್ಷಣಕ್ಕೂ ಎದುರಿಸುತ್ತಿರುವ ಹಿಂಸೆ–ಅವಮಾನವನ್ನು ಇಡೀ ಜಗತ್ತಿನ ಗಮನಕ್ಕೆ ತರಬೇಕೆಂಬ ತುರ್ತು ಅವರಿಗೆ ಕಂಡುಬಂತು. ಈ ಉದ್ದೇಶದಿಂದ ಮೊದಲಿಗೆ ಪತ್ರಿಕೆಗಳಿಗೆ ಪತ್ರಗಳನ್ನೂ, ಅಂಕಣಗಳನ್ನು ಬರೆಯತೊಡಗಿದರು. ನಂತರ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ವಹಿಸಿಕೊಂಡರು. ಅದು ಮುಂದೆ ಬಹಳ ಕಾಲ ದಕ್ಷಿಣ ಆಫ್ರಿಕಾದ ಭಾರತೀಯರ ಧ್ವನಿಯಾಗಿ ಉಳಿದಿತ್ತು.

'ಇಂಡಿಯನ್ ಒಪಿನಿಯನ್' ಮೂಲಕ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲೆ ನಡೆಯುವ ದೌರ್ಜನ್ಯ ಜಗತ್ತಿಗೆ ತಿಳಿಯಿತು. ಗಾಂಧಿಯೆಂಬ ಬರಹಗಾರನ ಪರಿಚಯವಾಯಿತು. ಅವರ ಸುದ್ಧಿ ಭಾರತಕ್ಕೆ ಹಬ್ಬಿ ಸ್ವಾತಂತ್ರ್ಯಕ್ಕಾಗಿ ಹಪಹಪಿಸಿತ್ತಿದ್ದ ಜನ ಗಾಂಧಿಗಾಗಿ ಕಾಯುವಂತಾಯಿತು. ಗಾಂಧಿ ಭಾರತಕ್ಕೆ ಮರಳಿದ ಕೂಡಲೇ ಸಾರ್ವಜನಿಕ ಸೇವೆಗೆ ಧುಮುಕಿದರು. ಅವರಿಗೆ ತನ್ನ ಅಭಿಪ್ರಾಯವನ್ನು ಜನರಿಗೆ ತಿಳಿಸಲು ಹಾಗೂ ಅವರೊಡನೆ ನೇರ ಸಂವಾದ ನಡೆಸಲು ಪತ್ರಿಕೆಯ ಅಗತ್ಯ ಕಂಡುಬಂತು. ಅದಕ್ಕಾಗಿ 'ಯಂಗ್ಇಂಡಿಯಾ' ಎಂಬ ಇಂಗ್ಲಿಷ್ ವಾರಪತ್ರಿಕೆ ಆರಂಭಿಸಿದರು. ಅದರ ಪ್ರಸಾರ ಎರಡು ಸಾವಿರದಷ್ಟಿತ್ತು. ಗಾಂಧೀಜಿಯವರಿಗೆ ಮಾತೃಭಾಷೆಯ ಪ್ರಾಮುಖ್ಯತೆಯ ಅರಿವಿತ್ತು. ಹೀಗಾಗಿ 'ನವಜೀವನ'

ಎಂಬ ಗುಜರಾತಿ ಪತ್ರಿಕೆಯನ್ನು ಆರಂಭಿಸಿದರು. ಅದರ ಪ್ರಸಾರ ಕ್ಷಿಪ್ರ ಅವಧಿಯಲ್ಲಿ 20000 ದಾಟಿತ್ತು. ಮುಂದೆ ತಮ್ಮ ಸಾಮಾಜಿಕ ಚಿಂತನೆಗಳನ್ನು ಜನರಿಗೆ ತಲುಪಿಸಲು 'ಹರಿಜನ' ಎಂಬ ವಾರ ಪತ್ರಿಕೆಯನ್ನು ಆರಂಭಿಸಿದರು. ಅದು ಗುಜರಾತಿ, ಹಿಂದಿ, ಇಂಗ್ಲಿಷ್ ಮಾತ್ರವಲ್ಲ ಕನ್ನಡವೂ ಸೇರಿದಂತೆ ಹತ್ತು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಗಾಂಧೀವಾದಿಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮರು 'ಹರಿಜನ' ಪತ್ರಿಕೆಯನ್ನು ಕನ್ನಡದಲ್ಲಿ ಸಂಪಾದಿಸುತ್ತಿದ್ದರು.

ಸರ್ಕಾರವು ಪತ್ರಿಕೋದ್ಯಮದ ಮೇಲೆ ಗದಾ ಪ್ರಹಾರ ಮಾಡಿದಾಗ ತಮ್ಮ ಪತ್ರಿಕೆಗಳನ್ನು ನಿಲ್ಲಿಸಿ ಗಾಂಧೀಜಿ 'ಸತ್ಯಾಗ್ರಹ' ಎಂಬ ಕೈಬರಹದ ಪತ್ರಿಕೆಯನ್ನೂ ಹೊರಡಿಸುತ್ತಿದ್ದರು. ಇದು ಸರ್ಕಾರದಲ್ಲಿ ನೋಂದಣಿ ಮಾಡಿದ ಪತ್ರಿಕೆಯಲ್ಲ. ಸರ್ಕಾರದ ವಿರುದ್ಧ ಹೋರಾಡಲೆಂದೇ ಕೈಬರಹದಲ್ಲಿ ಬರೆದು ಹಂಚಲ್ಪಡುತ್ತಿದ್ದ ಪತ್ರಿಕೆ. ಇದು ದೇಶಾದ್ಯಂತ ಅನೇಕ ಪತ್ರಿಕೆಗಳ ಉಗಮಕ್ಕೂ ಕಾರಣವಾಯ್ತು ಹಾಗೂ ಈ ಭೂಗತ ಪತ್ರಿಕೋದ್ಯಮದ ಪ್ರಭಾವದಿಂದಾಗಿ ಸರ್ಕಾರ ಪತ್ರಿಕಾ ವಿರೋಧೀ ಶಾಸನವನ್ನು ಹಿಂಪಡೆಯುವಂತಾಯ್ತು. "ಪ್ರತಿಯೊಬ್ಬರೂ ನಡೆದಾಡುವ ಪತ್ರಿಕೆಯಾಗೋಣ. ಬಾಯಿಂದ ಬಾಯಿಗೆ ಸುದ್ದಿಯನ್ನು ಹರಡೋಣ. ಇದನ್ನು ಯಾವ ಸರ್ಕಾರವೂ ಹತ್ತಿಕ್ಕಲಾರದು" ಎಂಬ ಗಾಂಧೀಜಿ ಅವರ ಹೇಳಿಕೆ ಇಂದಿನ ತಲೆಮಾರಿನ ಪತ್ರಕರ್ತರು ಊಹಿಸಲಾಗದ್ದು.

ಗಾಂಧೀಜಿ ಅವರ ಪತ್ರಿಕೆಗಳ ಬಗ್ಗೆ ಇಂದು ನಾವು ಗಮನಿಸಲೇ ಬೇಕಾದ ಅಂಶವೆಂದರೆ ಅವುಗಳ ಪ್ರಸಾರ ಕಡಿಮೆಯಿತ್ತು, ಆದರೆ ಪ್ರಭಾವ ಕಡಿಮೆಯಿರಲಿಲ್ಲ. ಗಾಂಧಿ ತಮ್ಮ ಪತ್ರಿಕೆಯಲ್ಲಿ ನೀಡುವ ಒಂದು ಕರೆ ಇಡೀ ದೇಶದ ಜನರನ್ನು ಬಡಿದೆಬ್ಬಿಸುತ್ತಿತ್ತು. ಆದರೆ ಈಗಿನ ಪತ್ರಿಕೆಗಳಿಗೆ ಲಕ್ಷ ಲಕ್ಷಗಳ ಪ್ರಸಾರ ಇರುತ್ತದೆ. ಆದರೂ ದೇಶದ ಜನರನ್ನು ಮುಟ್ಟಲು ಹಾಗೂ ತಟ್ಟಲು ಸಾಧ್ಯವಾಗುತ್ತಿದೆಯೇ? ಯೋಚಿಸಬೇಕಾದ ವಿಚಾರ.



ಗಾಂಧೀಜಿ ಅವರ ಪತ್ರಿಕೆಗಳ ಗುರಿ ಮತ್ತು ದಾರಿ


ತಮ್ಮೆಲ್ಲಾ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳ ನಡುವೆಯೂ ಪತ್ರಿಕೆಗಳಿಗೆ ಬರೆಯುವುದನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದ್ದ ಗಾಂಧೀಜಿ ಎಂಥಾ ಕಷ್ಟದ ಸಮಯದಲ್ಲೂ ಪತ್ರಿಕೆಗಳಿಗೆ ಬರೆಯುವುದನ್ನು ನಿಲ್ಲಿಸಲಿಲ್ಲ. ಒಂದೇ ಒಂದು ದಿನ ಸಮಯ ಸಿಗಲಿಲ್ಲವೆಂದು ನೆಪಹೇಳಿ ತಡಮಾಡಲಿಲ್ಲ. ತಡರಾತ್ರಿವರೆಗೆ ಕುಳಿತು ಪತ್ರಿಕಾ ಬರವಣಿಗೆಗೆ ಜಾಗ ಮಾಡಿಕೊಂಡು ನಿಗದಿತ ಸಮಯದಲ್ಲಿ ಮುದ್ರಣಕ್ಕೆ ಕೊಡುತ್ತಿದ್ದರು.

ಪತ್ರಿಕೋದ್ಯಮದ ಗುರಿ ಏನಾಗಿರಬೇಕು? ಗಾಂಧಿ ಹೇಳಿದ ಮೂರು ತತ್ವಗಳು ಇಷ್ಟು ವರ್ಷಗಳ ಮೇಲೂ ಭಾರತೀಯ ಪತ್ರಿಕೆಗಳ ಮಾರ್ಗದರ್ಶಿ ಸೂತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ಅವರು ಮೂರೇ ವಾಕ್ಯಗಳಲ್ಲಿ ಪತ್ರಿಕೋದ್ಯಮದ ಜವಾಬ್ದಾರಿಗಳನ್ನು ಹಿಡಿದಿಟ್ಟ ಬಗೆ ಇವತ್ತಿನ ಪತ್ರಕರ್ತರಿಗೆ ಮಾದರಿಯಾಗಿವೆ. ಅವರ ಬರವಣಿಗೆಯೇ ಹಾಗೆ. ಒಂದೇ ಒಂದು ಅನಗತ್ಯ ಪದ ಅಲ್ಲಿರುತ್ತಿರಲಿಲ್ಲ.

ಬೇರೆಯವರಿಗೆ ಕತ್ತರಿ ಪ್ರಯೋಗಕ್ಕೆ ಆಸ್ಪದವೇ ಇರಲಿಲ್ಲ. ತಮ್ಮ ಅಭಿಪ್ರಾಯಗಳನ್ನು ಹೇಳುವುದರಲ್ಲಿ ಸರಳತೆ, ಸ್ಪಷ್ಟತೆ ಹಾಗೂ ನಿರ್ಭೀತಿ ಅವರ ಬರಹಗಳ ವಿಶೇಷ. ಗೋಡೆಯ ಮೇಲೆ ದೀಪವಿಟ್ಟಂತೆ ಬರೆಯುವುದು ಅವರ ಜಾಯಮಾನವಲ್ಲ. ಅವರು ಹೇಳುವಂತೆ ಪತ್ರಿಕೆಯ ಗುರಿಯೆಂದರೆ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಅಭಿವ್ಯಕ್ತಿಯನ್ನು ಕೊಡುವುದು ಮೊದಲಿನದು, ಜನರಲ್ಲಿ ಅಗತ್ಯವಿರುವ ಭಾವನೆಗಳನ್ನು ಬೆಳೆಸುವುದು ಎರಡನೆಯದು ಹಾಗೂ ಸರ್ಕಾರದ ಅಥವಾ ಸಮಾಜದ ತಪ್ಪುಗಳನ್ನು ಎತ್ತಿತೋರಿಸುವುದು ಮೂರನೆಯದು. ಮೂರು ದಶಕಗಳಿಗೆ ಮೀರಿದ ಅವರ ಪತ್ರಿಕಾ ವ್ಯವಸಾಯದಲ್ಲಿ ಉದ್ದಕ್ಕೂ ಗಾಂಧೀಜಿ ಇದನ್ನೇ ಸಾರಿದರು ಹಾಗೂ ಮಾಡಿ ತೋರಿಸಿದರು.

ಗಾಂಧೀಜಿ ಮೊದಲ ತತ್ವವನ್ನು 'ಪಾಪ್ಯುಲರ್ ಫೀಲಿಂಗ್ಸ್' ಅಂತ ಕರೆಯುತ್ತಾರೆ. ಅಂದರೆ ಜನರ ಭಾವನೆಗಳು ಅಂತ ಅರ್ಥ. ಪತ್ರಿಕೆಗಳು ಜನರ ಭಾವನೆಗಳಿಗೆ ಮೂರ್ತರೂಪ ನೀಡಬೇಕು, ಅಂದರೆ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ಜನರ ಹಾಗೂ ಚುನಾಯಿತ ಸರ್ಕಾರದ ನಡುವಿನ ಕೊಂಡಿಯಾಗಿ ಕೆಲಸಮಾಡಬೇಕು. ಜನರ ನಾಡಿಮಿಡಿತವನ್ನು ಸರ್ಕಾರಕ್ಕೆ ತಿಳಿಸಬೇಕು. ಸರ್ಕಾರದ ಯೋಚನೆ-ಯೋಜನೆಗಳನ್ನು ಜನರ ಗಮನಕ್ಕೆ ತರಬೇಕು. ಇವತ್ತಿಗೂ ಸಮಾಜ ಪತ್ರಿಕೆಗಳಿಂದ ನಿರೀಕ್ಷಿಸುವುದು ಇದನ್ನೇ. ಸಮಾಜದ ಕಟ್ಟಕಡೆಯ

ವ್ಯಕ್ತಿಯ ನೋವು ನಲಿವುಗಳಿಗೂ ಮಾಧ್ಯಮಗಳು ದನಿಯಾಗಬೇಕು ಎಂಬುದು ಈ ಕಾಲದ ಒತ್ತಾಯ. ಎರಡನೇ ಸೂತ್ರ ಜನರಲ್ಲಿ ಅಗತ್ಯವಾದ ಭಾವನೆಗಳನ್ನು ಬೆಳೆಸುವುದು. ಇದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇನ್ನೂ ಹೆಚ್ಚು ಅರ್ಥ ಪಡೆದುಕೊಂಡಿತ್ತು. ಜನರಿಗೆ ತಮ್ಮ ದೇಶದ ಬಗ್ಗೆ ಅಭಿಮಾನ ಮೂಡಿಸುವುದು, ಸತ್ಯ ಅಹಿಂಸೆಯಲ್ಲಿ ವಿಶ್ವಾಸ ಮೂಡಿಸುವುದು, ಕಟ್ಟುವ ಕೆಲಸಗಳಿಗೆ ಪ್ರೋತ್ಸಾಹ ನೀಡುವುದು, ಪತ್ರಿಕೆಗಳು ಬೆಳೆಸಬೇಕಾದ ಅಗತ್ಯ ಭಾವನೆಗಳು. ಮೂರನೆಯದು 'ಪಾಪ್ಯುಲರ್ ಡಿಫೆಕ್ಟ್ಸ್' ಅಂದರೆ ಸಾಮಾಜಿಕ ತಪ್ಪುಗಳನ್ನು ಎತ್ತಿ ತೋರಿಸುವುದು. ವ್ಯಕ್ತಿಗಳಾಗಲೀ ವ್ಯವಸ್ಥೆಯಾಗಲೀ ತಪ್ಪು ಮಾಡಿದಾಗ ಎತ್ತಿ ತೋರಿಸುವುದು ಪತ್ರಿಕೆಯ ಜವಾಬ್ದಾರಿ ಎಂಬುದು ಗಾಂಧೀಜಿಯರ ದೃಢ ನಂಬಿಕೆಯಾಗಿತ್ತು. ಪತ್ರಿಕೆ ಸಮಾಜವನ್ನು ತಪ್ಪು ದಾರಿಗೆ ಎಳೆಯಬಾರದು. ಸುಳ್ಳುಸುದ್ದಿ ಹಬ್ಬಿಸಬಾರದು. ಸುಳ್ಳು ಸುದ್ದಿ ಪ್ರಕಟಿಸುವುದೆಂದರೆ ಮಾನವೀಯತೆಯ ಮೇಲಿನ ಅಪಚಾರ ಎಂದೇ ಗಾಂಧಿ ಹೇಳುತ್ತಿದ್ದರು. ಇಂದಿನ ಕಾಲದ ಪತ್ರಿಕೆಗಳು ಗಾಂಧಿ ಅವರ ತತ್ವಗಳಿಗೆ ಬದ್ಧವಾಗಿ ಕೆಲಸ ಮಾಡುತ್ತಿವೆಯೇ ಕಾಲವೇ ಹೇಳಬೇಕು.



ಗಾಂಧೀಜಿ ಅವರ ಪತ್ರಿಕೋದ್ಯಮದ ವಿಶೇಷತೆಗಳು

ಪತ್ರಕರ್ತರಾಗಿ ಗಾಂಧೀಜಿ ಅವರ ಅನನ್ಯತೆಗಳೇನು ಎಂದು ಯೋಚಿಸುವಾಗ ಗಾಂಧಿ ಅವರಿಗೆ ಮಾತ್ರ ಸಾಧ್ಯವಾಗಿದ್ದ ಕೆಲವು ಹೇಳಿಕೆಗಳು, ನಿಲುವುಗಳು, ಹಾಗೂ ನಂಬಿದಂತೆ ನಡೆದ ಉದಾಹರಣೆಗಳು ನಮಗೆ ಕಾಣುತ್ತವೆ. 1933ರ ಏಪ್ರಿಲ್ 29ರಂದು ಹರಿಜನ ಪತ್ರಿಕೆಯಲ್ಲಿ ಓದುಗರನ್ನು ಉದ್ದೇಶಿಸಿ ಗಾಂಧಿ ಬರೆಯುತ್ತಾರೆ: ನನ್ನ ನಿಲುವುಗಳಲ್ಲಿ ಮುಂದುವರಿಕೆಯಿದೆಯೇ ಎಂಬುದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಯಾಕೆಂದರೆ ಸತ್ಯದ ಹುಡುಕಾಟದಲ್ಲಿ


ನಾನು ಅನೇಕ ನಂಬಿಕೆಗಳನ್ನು ಬದಲಾಯಿಸಬೇಕಾಗಿ ಬರುತ್ತದೆ. ಹಳೆಯ ನಂಬಿಕೆಗಳನ್ನು ಕೈ ಬಿಟ್ಟಿದ್ದೇನೆ, ಹೊಸತನ್ನು ಕಲಿತಿದ್ದೇನೆ. ಪ್ರಾಯದಲ್ಲಿ ಹಿರಿಯನಾದಾಕ್ಷಣ ಬೆಳೆಯುವುದನ್ನು ನಿಲ್ಲಿಸಿದ್ದೇನೆ ಎಂಬ ಭಾವನೆಯಿಲ್ಲ. ನನ್ನ ಬೆಳವಣಿಗೆ ಸ್ಥಬ್ಧವಾಗುವುದು ನನ್ನ ಅಂತ್ಯದಲ್ಲೇ. ಹೀಗಾಗಿ ನನ್ನ ಬರವಣಿಗೆಗಳಲ್ಲಿ ವೈರುಧ್ಯಗಳು ಕಂಡುಬಂದರೆ ಅದು ವಿಶೇಷವಲ್ಲ."

ಗಾಂಧಿ ಪಾಲಿಸಿಕೊಂಡು ಬಂದ ಪತ್ರಿಕೋದ್ಯಮ ಅನನ್ಯವಾದುದು. ಅವರು ಜಾಹೀರಾತು ಪ್ರಕಟಿಸಿ ಅದರಿಂದ ಬಂದ ಹಣದಿಂದ ಪತ್ರಿಕೆ ನಡೆಸುವುದಕ್ಕಿಂತ ಪತ್ರಿಕೆ ನಿಲ್ಲಿಸುವುದೇ ಒಳಿತೆಂದು ಭಾವಿಸಿದ್ದರು. "ಆದಾಯಕ್ಕಾಗಿ ಚಂದಾ ಹಣಕ್ಕಿಂತ ಜಾಹೀರಾತನ್ನು ಅವಲಂಬಿಸುವುದು ಖೇದದ ಸಂಗತಿ. ಮದ್ಯಪಾನ ವಿರೋಧದ ಬಗ್ಗೆ ಬರೆಯುವ ಪತ್ರಿಕೆ ಅದನ್ನು ಹೊಗಳುವ ಜಾಹೀರಾತು ಪ್ರಕಟಿಸಬೇಕಾಗುತ್ತದೆ. ಶೇ.99 ರಷ್ಟು ಜಾಹೀರಾತುಗಳು ಅರ್ಥಹೀನ ಹಾಗೂ ಸಮಾಜಕ್ಕೆ ಹಾನಿಕಾರಕ. ಹಲವು ಬರೀ ಮೋಸ ಹಾಗು ಅಶ್ಲೀಲ" ಎನ್ನುತ್ತಾರೆ ಗಾಂಧಿ.

ಗಾಂಧೀಜಿ ತಮ್ಮ ಪತ್ರಿಕೆಗೆ ಓದುಗರೇ ಯಜಮಾನರೆಂದು ಹೇಳುತ್ತಿದ್ದರು. 'ನವಜೀವನ'ದಲ್ಲಿ ದೊಡ್ಡ ತಪ್ಪುಗಳು ಕಂಡು ಬಂದರೆ 'ನವಜೀವನ ಬಹಿಷ್ಕಾರ ಸಂಘ'ವನ್ನು ಸ್ಥಾಪಿಸುವಂತೆ ಅವರೇ ಓದುಗರಿಗೆ ಕರೆನೀಡಿದ್ದರು! ಪತ್ರಿಕೆಗಳ ಅಸ್ತಿತ್ವವೇ ಕಷ್ಟವಾಗಿರುವ ಈ ದಿನಗಳಲ್ಲಿ ಯಾವ ಪತ್ರಿಕಾ ಸಂಪಾದಕನಿಗೆ ಈ ರೀತಿ ಕರೆನೀಡುವ ಛಾತಿಯಿದೆ? ಸರಿಯಾದ ಸಮಯಕ್ಕೆ ಪತ್ರಿಕೆಗಳನ್ನು ಮುದ್ರಿಸಿ ಓದುಗರಿಗೆ ಹಂಚುವುದು ಅವರ ಬದ್ಧತೆ. ಅವರು ಸಂಪಾದಕರಾಗಿದ್ದಾಗ ಒಮ್ಮೆಯೂ ಅವರ ವಾರಪತ್ರಿಕೆಗಳ ಮುದ್ರಣ ತಡವಾಗಲಿಲ್ಲ. ಅವರು ವಿದೇಶ ಪ್ರವಾಸದಲ್ಲಿದ್ದಾಗಲೂ, ಸೆರೆಮನೆಯಲ್ಲಿದ್ದಾಗಲೂ ಪತ್ರಿಕೆಗಳು ಮಾತ್ರ ತಪ್ಪದೇ ಸರಿ ಸಮಯಕ್ಕೆ ಪ್ರಕಟಗೊಳ್ಳುತ್ತಿದ್ದುದು ಅದ್ಭುತವೇ

ಸರಿ. 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಮುದ್ರಿಸುವ ಮೊದಲ ದಿನವೇ ಅವರಿಗೆ ಮುದ್ರಣಾ ಯಂತ್ರ ಕೈಕೊಟ್ಟಿತು. ಆದರೂ ಹರಸಾಹಸ ಮಾಡಿ ಪತ್ರಿಕೆಯನ್ನು ಕ್ಲಪ್ತ ಸಮಯಕ್ಕೆ ಹೊರತಂದರು.

ಇಂದಿನ ಕೊರೊನಾ ಸಮಯದಲ್ಲಿ ಗಾಂಧಿ ಅಂದು ಹೇಳಿದ ಮಾತು ಸ್ಮರಿಸಬೇಕಾದ್ದು. ಪತ್ರಕರ್ತನ ಕರ್ತವ್ಯವೆಂದರೆ ಜನರಿಗೆ ಧೈರ್ಯ ಹೇಳುವುದು ಅವರಲ್ಲಿ ಭಯ ಬಿತ್ತುವುದಲ್ಲ. ಕೊರೊನಾ ಕಾಲದಲ್ಲಿ ಮಾಧ್ಯಮಗಳು ಬಿತ್ತಿದ ಭಯದಿಂದಲೇ ಕೆಲವರು ಆತ್ಮಹತ್ಯೆಗೆ ಪ್ರಯತ್ನಿಸಿದ ಉದಾಹರಣೆಗಳಿವೆ. 1919ರಲ್ಲಿ ಪತ್ರಿಕಾ ವಿರೋಧೀ ಶಾಸನ ಬಂದಾಗ ಗಾಂಧೀಜಿ ಅವರು ಪತ್ರಿಕೆಗಳನ್ನು ನಿಲ್ಲಿಸಿದರು. ಮಾತ್ರವಲ್ಲ ಕಾನೂನು ರೀತ್ಯಾ ನೋಂದಾವಣೆ ಮಾಡದೇ ಸರ್ಕಾರದ ಶಾಸನಕ್ಕೆ ಸಡ್ಡುಹೊಡೆದು 'ಸತ್ಯಾಗ್ರಹ' ವಾರಪತ್ರಿಕೆಯನ್ನು ಆರಂಭಿಸಿದರು. ಅದು ಕೈಬರಹದ್ದಾಗಿತ್ತು. ಇದು ದೇಶಾದ್ಯಂತ ಅನೇಕ ಪತ್ರಿಕೆಗಳಿಗೆ ಸ್ಫೂರ್ತಿ ನೀಡಿತು. ಆಗ ಭೂಗತ ಪತ್ರಿಕೆಗಳ ಸಮರವೇ ಶುರುವಾದರೂ ಯಾರು ಎಲ್ಲಿಂದ ಪ್ರಕಟಿಸುತ್ತಿದ್ದರು ಎಂಬುದು ಬ್ರಿಟೀಷ್ ಸರ್ಕಾರಕ್ಕೆ ತಿಳಿಯದೇ ಕೋಲಾಹಲವಾಯಿತು. ಪತ್ರಕರ್ತ ಯಾರ ಹಂಗಿನಲ್ಲೂ ಇರಬಾರದು, ಯಾವ ಅಭಿಲಾಶೆಗಳಿಗೂ ಒಳಗಾಗಬಾರದೆಂಬುದು ಅವರ ಪತ್ರಿಕಾ ಧರ್ಮವಾಗಿತ್ತು.



ಪತ್ರಕರ್ತ ಗಾಂಧೀಜಿ ಅವರ ಅನನ್ಯತೆ

ಗಾಂಧೀಜಿ ಅವರನ್ನು ಅನೇಕ ದೃಷ್ಟಿಗಳಿಂದ ಜಗತ್ತಿನ ಅದ್ವಿತೀಯ ಮಾದರಿ ಎಂಬುದಾಗಿ ಪರಿಗಣಿಸಲಾಗುತ್ತದೆ. ಅವರ ಪತ್ರಿಕಾ ವೃತ್ತಿಯೂ ಅವರಲ್ಲಿದ್ದ ಪತ್ರಕರ್ತನೂ ಅದ್ವಿತೀಯರೇ. ತಮ್ಮ ತತ್ವಕ್ಕೆ ವಿರುದ್ಧವಾಗಿ ಹೊಂದಾಣಿಕೆ ಮಾಡಿಕೊಂಡು ಬದುಕುವುದು ಗಾಂಧಿ ಅವರ ರಕ್ತದಲ್ಲೇ ಇರಲಿಲ್ಲ ಎನಿಸುತ್ತದೆ. ಉದಾಹರಣೆಗೆ ತಮ್ಮ ಪತ್ರಿಕೆಗಳಲ್ಲಿ ಜಾಹೀರಾತನ್ನು ಪ್ರಕಟಿಸದಿರುವುದು ಅವರ ನಿರ್ಧಾರ. ಪತ್ರಿಕೆ ಹಣಕಾಸಿನ ತೊಂದರೆಯಿಂದ ನಿಲ್ಲುವ ಪರಿಸ್ಥಿತಿ ಬಂದಾಗಲೂ ಅವರು ಜಾಹೀರಾತು ಪ್ರಕಟಿಸಲು ಒಪ್ಪಲಿಲ್ಲ. ತಮ್ಮ


'ಹರಿಜನ' ಪತ್ರಿಕೆಗೆ ಕಾಗದ ಒದಗಿಸುವಂತೆ ಗಾಂಧೀಜಿ ಟಿಟಘರ್ ಕಾಗದ ಕಾರ್ಖಾನೆಯ ಮುಖ್ಯಸ್ಥರನ್ನು ಕೋರಿದ್ದರು. ಆದರೆ ಕಾಗದ ಕಾರ್ಖಾನೆಯ ಜಾಹೀರಾತನ್ನು ಪ್ರಕಟಿಸುವುದಾದರೆ ಮಾತ್ರ ಕಾಗದ ಪೂರೈಸುವುದಾಗಿ ಕಾರ್ಖಾನೆ ಅವರು ಪಟ್ಟುಹಿಡಿದರು. ಗಾಂಧೀಜಿ ಅದಕ್ಕೆ ಸರ್ವಥಾ ಒಪ್ಪಲಿಲ್ಲ. ಹೀಗಾಗಿ ಕಾರ್ಖಾನೆಯು 'ಹರಿಜನ' ಪತ್ರಿಕೆಗೆ ಕಾಗದ ಪೂರೈಕೆ ಮಾಡಲಿಲ್ಲ.

ಎಂಥ ಸಂದರ್ಭದಲ್ಲೂ ಪತ್ರಿಕಾ ಬರವಣಿಗೆಯನ್ನು ನಿಲ್ಲಿಸದಿರುವುದು ಗಾಂಧಿ ಅವರ ದೊಡ್ಡ ಸಾಧನೆ. ಅವರ ಸಮಕಾಲೀನರು ಹಾಗೂ ಸಹ ಹೋರಾಟಗಾರರಿಗೆ ಕೂಡಾ ಬರವಣಿಗೆಯ ಈ ಶಿಸ್ತು ಮತ್ತು ಬದ್ಧತೆ ಸಾಧ್ಯವಾಗುತ್ತಿರಲಿಲ್ಲ. ಅವರ ಬರವಣಿಗೆ ಬರುವುದು ತಡವಾಗಿ ಪತ್ರಿಕೆಯ ಮುದ್ರಣ ತಡವಾದ ಉದಾಹರಣೆಯೇ ಇರಲಿಲ್ಲ. ಒಮ್ಮೆ ಮಾತ್ರ ರೈಲು ವಿಳಂಬವಾಗಿ ಅವರು ಕಳಿಸಿದ ಬರಹ ಅಹಮದಾಬಾದ್ ತಲುಪಲು ತಡವಾಗಿ, ಪತ್ರಿಕೆ ಸರಿ ಸಮಯಕ್ಕೆ ಮುದ್ರಣಗೊಳ್ಳಲು ಆಗದು ಎಂದು ಗೊತ್ತಾಗಿದ್ದರಿಂದ ಮುಂಬೈನಲ್ಲೇ ಪತ್ರಿಕೆಯನ್ನು ಮುದ್ರಿಸಲಾಗಿತ್ತು. ಜೈಲಲ್ಲಿದ್ದಾಗಲೂ, ರೈಲಿನಲ್ಲಿ ಮೂರನೇ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುವಾಗಲು ಗಾಂಧೀಜಿ ನಿರಂತರವಾಗಿ ಬರೆಯುತ್ತಿದ್ದರು. 'ಸಂತೆಯಲ್ಲೂ ಕುಳಿತು ಧ್ಯಾನ ಮಾಡಬಲ್ಲವನೇ ಸಂತ' ಎನ್ನುತ್ತಾರೆ. ಸಂತೆಯಲ್ಲೂ ಕುಳಿತು ಬರೆಯ ಬಲ್ಲವನೇ ಪತ್ರಕರ್ತ ಎನ್ನಬಹುದು. ಗಾಂಧೀಜಿ ಆ ರೀತಿಯಲ್ಲಿ ನಿಜವಾದ ಪತ್ರಕರ್ತರು.

ಯಾರದೋ ಮುಲಾಜಿಗೆ, ಸರ್ಕಾರದ ಒತ್ತಡಗಳಿಗೆ ಮಣಿದು ಪತ್ರಿಕೆ ತರುವುದಕ್ಕಿಂತ ಪತ್ರಿಕೆ ಮುಚ್ಚುವುದು ಲೇಸು ಎಂಬುದು ಅವರ ದೃಢ ನಂಬಿಕೆ. ಸರ್ಕಾರದ ಪತ್ರಿಕೆಗಳ ದಮನಕಾರೀ ಕಾನೂನುಗಳ ವಿರುದ್ಧ ಅವರು ತಮ್ಮ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸುತ್ತಿದ್ದರು. ಯಾರದೋ ಒತ್ತಾಯಕ್ಕೋ ಆಗ್ರಹಕ್ಕೋ ಬರೆಯುವುದು ಅವರ

ರಕ್ತದಲ್ಲೇ ಇರಲಿಲ್ಲ. ತಮ್ಮ ಸ್ನೇಹಿತರು ತಪ್ಪು ಮಾಡಿದಾಗಲೂ ಅವರನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ರಾಜಾಜಿ ಅವರು ಭಾರತದ ವಿಭಜನೆಯನ್ನು ಸಮರ್ಥಿಸಿದ್ದು ಗಾಂಧೀಜಿ ಅವರಿಗೆ ಒಪ್ಪಿಗೆಯಿರಲಿಲ್ಲ ಮತ್ತು ಅದಕ್ಕಾಗಿ ರಾಜಾಜಿ ಅವರನ್ನು ನೇರವಾಗಿ ಟೀಕಿಸಿದ್ದರು. ಹಾಗಂತ ಕಣ್ಣುತಪ್ಪಿನಿಂದ ಪ್ರಮಾದಗಳಾಗಿದ್ದರೆ ಅದಕ್ಕೆ ಓದುಗರ ಕ್ಷಮೆ ಕೇಳುವುದಕ್ಕೆ ಅವರಿಗೆ ಹಿಂಜರಿಕೆಯಿರಲಿಲ್ಲ.

ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿ ಅವರ ನಾಯಕತ್ವ ಹೇಗೆ ನಿರ್ಣಾಯಕವಾಗಿತ್ತೋ ಹಾಗೆ ಪತ್ರಿಕೋದ್ಯಮಕ್ಕೂ ಅವರ ನಾಯಕತ್ವ ಮುಖ್ಯವಾಗಿತ್ತು. ಅವರ ಕ್ರಿಯಾಶೀಲತೆ ಆವರೆಗೆ ಮಲಗಿದ್ದ ಭಾರತೀಯ ಪತ್ರಿಕೋದ್ಯಮವನ್ನು ಚುರುಕುಗೊಳಿಸಿತು ಎಂಬುದನ್ನು ಮರೆಯಬಾರದು. ಮುಖ್ಯವಾಗಿ ದೇಶಭಾಷಾ ಪತ್ರಿಕೆಗಳಿಗೆ ಗಾಂಧಿ ಅವರಿಂದ ಹೊಸರಕ್ತ ಸಂಚಲನವಾಯ್ತು. ದೇಶಭಾಷಾ ಪತ್ರಿಕೆಗಳಿಗೆ ಅವರು ನೀಡಿದ ಆದ್ಯತೆ ಇತರ ಭಾಷಾ ಪತ್ರಿಕೆಗಳು ಅತಿವೇಗವಾಗಿ ಬೆಳೆಯಲು ಕಾರಣವಾಯ್ತು. ಪ್ರಾದೇಶಿಕ ಭಾಷಾ ಪತ್ರಿಕೋದ್ಯಮಕ್ಕೆ ಗಾಂಧಿ ಕೊಟ್ಟಷ್ಟು ಒತ್ತು ಹಾಗೂ ಬೆಂಬಲವನ್ನು ಬೇರೆಯಾರೂ ಕೊಟ್ಟಿಲ್ಲ. ಅವರ 'ಹರಿಜನ' ಪತ್ರಿಕೆಯನ್ನು ಹತ್ತಾರು ಭಾರತೀಯ ಭಾಷೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. ಭಾಷಾ ಪತ್ರಿಕೋದ್ಯಮಕ್ಕೆ ಅವರು ಸಮರ್ಥ ನಾಯಕತ್ವ ನೀಡಿದ್ದರು. ಅಲ್ಲದೇ ಬರವಣಿಗೆಯಲ್ಲಿ ಸರಳತೆ ಹಾಗೂ ನೇರಕ್ರಮ ಅತ್ಯುತ್ತಮ ಪತ್ರಕರ್ತನ ಮಾದರಿಯಾಗಿತ್ತು.



ಗಾಂಧೀಜಿ ಮತ್ತು ಇಂದಿನ ಪತ್ರಿಕೋದ್ಯಮ

ಪತ್ರಕರ್ತರಾಗಿ ಹಾಗು ಪತ್ರಿಕೋದ್ಯಮಿಯಾಗಿ ಗಾಂಧಿ ದುಡಿದ ದಿನಗಳೊಂದಿಗೆ ಇಂದಿನ ಪತ್ರಕರ್ತರನ್ನು ಹಾಗೂ ಪತ್ರಿಕೋದ್ಯಮಿಗಳನ್ನು ಹೋಲಿಸಿ ನೋಡಿದರೆ ಅಜಗಜಾಂತರ ಕಾಣುತ್ತದೆ. ಮೂಲತಃ ಗಾಂಧೀಜಿಯ ಕಾಲದಲ್ಲಿ ಭಾರತೀಯ ಪತ್ರಿಕೋದ್ಯಮ ಪ್ರೌಢಾವಸ್ಥೆಗೆ ತಲುಪಿರಲಿಲ್ಲ. ಪತ್ರಿಕೆಗಳು ಸಾವಿರದಲ್ಲಿ ಪ್ರಸಾರವನ್ನು ಪಡೆದರೆ ಅದು ದೊಡ್ಡ ಸಾಧನೆಯಾಗುತ್ತಿತ್ತು. ಗಾಂಧಿ ಹಾಗೂ ಅವರ ಸಮಕಾಲೀನ ಹೋರಾಟಗಾರರಿಗೆ ಪತ್ರಿಕೋದ್ಯಮ ಒಂದು ವೃತ್ತಿಯಾಗಿರಲಿಲ್ಲ. ಅದು ಪ್ರವೃತ್ತಿಯಗಿತ್ತು. ಜೀವನದ ಧರ್ಮವಾಗಿತ್ತು. ಸ್ವಾತಂತ್ರ್ಯವೆಂಬ ಮಹತ್ತರ ಹೋರಾಟದ ಭಾಗವಾಗಿತ್ತು.

ಗಾಂಧಿ ದಿನಪತ್ರಿಕೆಗಳನ್ನು ನಡೆಸಲಿಲ್ಲ. ಈಗಿನಂತೆ ದಿನ ಪತ್ರಿಕೋದ್ಯಮ ಆಗ ದುಡ್ಡು ಬಿತ್ತಿ ದುಡ್ಡುಬೆಳೆಯುವ ಉದ್ಯಮವಾಗಿರಲಿಲ್ಲ. ಹೀಗಾಗಿ ಗಾಂಧಿ ಅವರ ಪತ್ರಿಕೋದ್ಯಮದ ಜೊತೆ ಇಂದಿನ ಪತ್ರಿಕೋದ್ಯಮವನ್ನು ಹೋಲಿಸುವುದೇ ಸರಿಯಾಗಲಾರದು. ಉದಾಹರಣೆಗೆ ತಮ್ಮ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಪ್ರಕಟಿಸದಿರುವ ಅವರ ನಿಲುವು ಈಗಿನ ಕಾಲಕ್ಕೆ, ಅದೂ ದೊಡ್ಡ ಮೊತ್ತದ ಬಂಡವಾಳ ಬಯಸುವ ದೊಡ್ಡ ದಿನ ಪತ್ರಿಕೆಗಳ ಉದ್ಯಮಕ್ಕೆ ಹೊಂದುವುದಿಲ್ಲ. ಯಾಕೆಂದರೆ ಅವು ಜಾಹೀರಾತು ಇಲ್ಲದೇ ಜನರ ಚಂದಾ ಒಂದರಿಂದಲೇ ಬದುಕಲಾರವು. ಹಾಗೆ ಮಾಡಿದರೆ ಪತ್ರಿಕೆಗಳ ಮುಖಬೆಲೆ ನೂರಾರು ರೂಪಾಯಿ ಆಗಿ ಅದನ್ನು ಈ ದೇಶದಲ್ಲಿ ಹೆಚ್ಚಿನ ಜನ ಭರಿಸಲಾರರು. ಹೀಗಾಗಿ ಮತ್ತೆ ಪತ್ರಿಕೆಗಳ ಪ್ರಸಾರ ಪಾತಾಳಕ್ಕೆ ಇಳಿದೀತು. ಈಗ ಪತ್ರಿಕೆಯನ್ನು ನಡೆಸಲು ಅಗಾಧ ಹಣಬೇಕು. ಅದರಲ್ಲಿ ಬಹಳಷ್ಟು ಜನರ ಜೀವನ ನಡೆಯಬೇಕು. ಜಾಹೀರಾತುಗಳಿಗೂ ಪತ್ರಿಕೋದ್ಯಮದ ಅಳಿವು ಉಳಿವುಗಳಿಗೂ ನೇರ ಸಂಬಂಧವಿದೆ. ಅಲ್ಲದೇ ದೇಶದ ಅರ್ಥವ್ಯವಸ್ಥೆಯ ಭಾಗವಾಗಿರುವ ಜಾಹೀರಾತನ್ನು ತಿರಸ್ಕರಿಸುವುದು ಕೂಡಾ ಸೂಕ್ತವಾಗಲಾರದು. ಜಾಹೀರಾತು ಕೈಗಾರಿಕಾ ಉತ್ಪನ್ನಗಳು ಗ್ರಾಹಕರಿಗೆ ತಲುಪಲು ಸಹಕಾರಿ. ಕೈಗಾರಿಕಾ ಉತ್ಪನ್ನಗಳು ದೇಶದ ಅಭಿವೃದ್ಧಿಯ ಊರುಗೋಲು. ಹೀಗೆ ಒಂದಕ್ಕೊಂದು ಸಂಬಂಧವಿರುವುದರಿಂದ ಜಾಹೀರಾತನ್ನು ಅಸ್ಪ್ರಶ್ಯವಾಗಿ ಕಾಣುವುದು ತಪ್ಪು.

ಗಾಂಧೀಜಿ ಯಾವಾಗಲೂ ಒಂದೇ ನಿಲುವಿಗೆ ಜೋತು ಬಿದ್ದವರಲ್ಲ. ಜೀವನದಲ್ಲಿ ಪಾಠ ಕಲಿಯುತ್ತಾ ತನ್ನ ನಿಲುವನ್ನು ಬದಲಾಯಿಸುವುದು ಅನಿವಾರ್ಯವಾದರೆ ಅದರಲ್ಲಿ ಹಿಂಜರಿಕೆಯಿಲ್ಲ ಎಂಬುದಾಗಿ ಅವರು ಸ್ಪಷ್ಟಪಡಿಸಿದ್ದರು. ಹೀಗಾಗಿ ಈಗ ಗಾಂಧೀಜಿ ಇದ್ದಿದ್ದರೆ ಜಾಹೀರಾತು ಕುರಿತು ತಮ್ಮ ನಿಲುವನ್ನು ಬದಲಾಯಿಸಿಕೊಳ್ಳುತ್ತಿದ್ದರೋ ಏನೋ!

ಹತ್ತು ಸತ್ಯವು ವರದಿಯಾಗದಿದ್ದರೂ ಸರಿ, ಒಂದು ಸುಳ್ಳು ಮಾಹಿತಿ ಸುದ್ದಿಯಾಗಿ ಪ್ರಕಟವಾಗಬಾರದು ಎಂಬುದು ಆದಿಯಿಂದ ಪತ್ರಿಕೋದ್ಯಮದ ನೀತಿ ಸಂಹಿತೆಯ ಭಾಗ.

ಗಾಂಧೀಜಿಗೆ ಸತ್ಯಾನ್ವೇಷಣೆಯೇ ಜೀವನ. ಯಾವುದೇ ಮಾಹಿತಿ ಸತ್ಯವೆಂದು ಸಾಬೀತಾಗದೇ ಅವರು ಪ್ರಕಟಿಸುತ್ತಿರಲಿಲ್ಲ. ಆದರೆ ಇಂದಿನ ಬ್ರೇಕಿಂಗ್ ನ್ಯೂಸ್ ದಿನಗಳಲ್ಲಿ ಮೊದಲು ವಿಷಯ ಪ್ರಕಟವಾಗುತ್ತವೆ ನಂತರ ಅವು ಸತ್ಯವೋ ಅಲ್ಲವೋ ಎಂಬುದರ ನಿಷ್ಕರ್ಷೆಯಾಗುತ್ತದೆ. ಇದು ಗಾಂಧಿ ಮಾದರಿ ಪತ್ರಿಕೋದ್ಯಮವಲ್ಲ. 'ನವಜೀವನ' ಪತ್ರಿಕೆ ದಾರಿ ತಪ್ಪಿದರೆ 'ನವಜೀವನ ವಿರೋಧಿ ಸಂಘ' ಹುಟ್ಟಬೇಕು ಎಂಬ ಗಾಂಧೀಜಿ ಅವರ ಕರೆಯನ್ನು ಗಮನಿಸಿದರೆ ಇಂದು ಗಾಂಧೀಜಿ ಬದುಕಿದ್ದರೆ ದಾರಿತಪ್ಪಿದ ಮಾಧ್ಯಮಗಳ ವಿರುದ್ಧ ಹೋರಾಟಕ್ಕೆ ಅವರೇ ಮುಂಚೂಣಿಯಲ್ಲಿರುತ್ತಿದ್ದರು ಎನಿಸುತ್ತದೆ.



ಭಾರತೀಯ ಪತ್ರಿಕೋದ್ಯಮಕ್ಕೆ ಗಾಂಧಿ ನೀಡಿದ ನಾಯಕತ್ವ


ಭಾರತೀಯ ಪತ್ರಿಕೋದ್ಯಮದ ಇತಿಹಾಸದಲ್ಲಿ ತಮ್ಮ ಬರವಣಿಗೆಯಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ದೇಶದ್ರೋಹಿ ಎನಿಸಿಕೊಂಡು ಜೈಲು ಸೇರಿದವರಲ್ಲಿ ಬಾಲಗಂಗಾಧರ ತಿಲಕ್ ಹಾಗೂ ಗಾಂಧೀಜಿ ಮುಖ್ಯವಾದವರು. ಇವರಿಬ್ಬರ ವಿರುದ್ಧ ಬ್ರಿಟೀಷರ ನ್ಯಾಯಾಸ್ಥಾನ ನಡೆಸಿದ ವಿಚಾರಣೆಯ ವೇಳೆ ಅವರುಗಳು ತಮ್ಮ ಬರವಣಿಗೆಯ ಬಗ್ಗೆ ವಿಷಾದ ವ್ಯಕ್ತಪಡಿಸದೇ ತಪ್ಪನ್ನು ಒಪ್ಪಿಕೊಂಡಿದ್ದು ಜೈಲು ಶಿಕ್ಷೆಯನ್ನು ಘನತೆಯಿಂದ ಸ್ವೀಕರಿಸಿದ್ದು ಚಾರಿತ್ರಿಕವಾಗಿ ಮಹತ್ವದ್ದು.

ವಿಶೇಷವೆಂದರೆ ಗಾಂಧೀಜಿಯವರಿಗೆ ಬರೆವಣಿಗೆ ಜೈಲಿನ ಒಳಗಿದ್ದರೂ ಹೊರಗಿದ್ದರೂ ಒಂದೇ ಆಗಿತ್ತು. ಜೈಲಿನಲ್ಲಿ ಅವರಿಗೆ ವಾರಕ್ಕೆ ಮೂರು ಸಾರಿ ಬರೆಯುವ ಅವಕಾಶವನ್ನು ನೀಡಲಾಗಿತ್ತು. ಅಂಥ ಮಾನಸಿಕ ಸ್ಥಿಮಿತವನ್ನು ಗಾಂಧೀಜಿ ಹೊಂದಿದ್ದರು. ಹೀಗಾಗಿ ಜೈಲೊಳಗಿದ್ದರೂ ಗಾಂಧೀಜಿಯ ಬರಹಗಳು ಪುಂಖಾನುಪುಂಖವಾಗಿ ಬ್ರಿಟೀಷರ ವಿರುದ್ಧದ ಬಾಣಗಳಂತೇ ಹೊರಬರುತ್ತಿದ್ದವು. ಗಾಂಧೀಜಿ ಜೈಲಿನ ಒಳಗಿದ್ದರೇ ಹೆಚ್ಚು ಅಪಾಯಕಾರಿ ಎಂಬುದನ್ನು ಅರಿತ ಬ್ರಿಟಿಷ್ ಸರ್ಕಾರ ಗಾಂಧಿ ಅವರನ್ನು ಬಂಧಮುಕ್ತಗೊಳಿಸಬೇಕಾಯ್ತು.

ಇಂದಿಗೆ ಅತ್ಯಂತ ಆಶ್ಚರ್ಯಕರವಾಗಿ ಕಾಣುವುದೆಂದರೆ ಅಕ್ಷರಸ್ಥರು ಕಡಿಮೆಯಿದ್ದ, ಸಾರಿಗೆ ಸಂಪರ್ಕ ಮಾಧ್ಯಮಗಳೇ ಇಲ್ಲದಿದ್ದ, ವಿಶಾಲ ದೇಶ ಭಾರತದಲ್ಲಿ ಗಾಂಧೀಜಿ ಅವರ ಪತ್ರಿಕೆಗಳು ಸಾವಿರಗಳಲ್ಲಿ ಪ್ರಸಾರ ಹೊಂದಿದ್ದರೂ ಲಕ್ಷಾಂತರ ಜನಕ್ಕೆ ತಲುಪಿ, ಪ್ರಚೋದನೆ ನೀಡುತ್ತಿದ್ದವು. ಅದುವೇ ಬ್ರಿಟೀಷರ ಭಯವಾಗಿತ್ತು ಕೂಡ. ಉದಾಹರಣೆಗೆ 'ಹರಿಜನ' ಹಾಗೂ 'ನವಜೀವನ'ಗಳಲ್ಲಿ, ಗಾಂಧೀಜಿ ಪ್ರತಿವಾರ ಬರೆಯುತ್ತಿದ್ದ ಲೇಖನಗಳನ್ನು ದೇಶದ ಇತರ ಪತ್ರಿಕೆಗಳು ಹಾಗೂ ಅಂತಾರಾಷ್ಟ್ರೀಯ ಮಾಧ್ಯಮಗಳು ಮುಖ್ಯ ಸುದ್ದಿಯಾಗಿ ಪ್ರಕಟಿಸುತ್ತಿದ್ದವು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡಾ ಗಾಂಧಿ ಅವರ ಲೇಖನಗಳು ದೊಡ್ಡ ಸುದ್ದಿ ಮಾಡುತ್ತಿದ್ದವು.

ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಭಾರತದ ರಾಜಕಾರಣವನ್ನು ಗಾಂಧೀಜಿ ತುಂಬಿಕೊಂಡಿದ್ದರು. ಅವರ ಪ್ರಭಾವವೇ ನಿರ್ಣಾಯಕವಾಗಿತ್ತು. ಅದು ರಾಜಕಾರಣದಲ್ಲಿ ಮಾತ್ರವಲ್ಲ ಭಾರತೀಯ ಪತ್ರಿಕೋದ್ಯಮಕ್ಕೂ ಗಾಂಧೀಜಿ ಅವರೇ ನಾಯಕರಾಗಿದ್ದರು. ಅವರು ದಕ್ಷಿಣ ಆಫ್ರಿಕಾದಿಂದ ಬಂದ ಮೇಲೆಯೇ ನಮ್ಮ ಹೋರಾಟಗಳಿಗೆ ಚುರುಕುತನ ಬಂದಹಾಗೆ ಪತ್ರಿಕೋದ್ಯಮವೂ ಮೈಛಳಿ ಬಿಟ್ಟು ಎದ್ದು ನಿಂತಿತು. ಭಾರತೀಯ

ಭಾಷಾ ಪತ್ರಿಕೋದ್ಯಮವಂತೂ ನೆಟ್ಟಗೆ ನಿಂತಿದ್ದು ಗಾಂಧೀಜಿ ಬಂದ ಮೇಲೆಯೇ ಎನ್ನಬಹುದು. ಗಾಂಧಿ ಅವರ ಇಂಗ್ಲಿಷ್ ಪತ್ರಿಕೆ 'ಯಂಗ್ ಇಂಡಿಯಾ'ಕ್ಕಿಂತ ಅವರ ಗುಜರಾತಿ ಪತ್ರಿಕೆ ನವಜೀವನ ಹತ್ತು ಪಟ್ಟು ಪ್ರಸಾರ ಪಡೆದಿತ್ತು. 'ಹರಿಜನ' ದೇಶದ ಬಹುತೇಕ ಭಾಷೆಗಳಲ್ಲಿ ಗಾಂಧಿ ಅವರ ಶಿಷ್ಯರಿಂದಾಗಿ ಮರುಜೀವ ಪಡೆಯುತ್ತಿತ್ತು. ದಬ್ಬಾಳಿಕೆಗೆ ಬಾಗದ, ಭೀತಿಯೆಂಬುದು ಗೊತ್ತೇ ಇಲ್ಲದ, ಅಸಾಧಾರಣ ವ್ಯಕ್ತಿತ್ವ ಗಾಂಧೀಜಿ ಅವರದು. ಮನಸ್ಸಿಗೆ ಒಪ್ಪದ ವಿಷಯಗಳೊಂದಿಗೆ ಹಾಗೂ ವಿಚಾರಗಳೊಂದಿಗೆ ಎಂದೂ ಒಪ್ಪಂದ ಮಾಡಿಕೊಳ್ಳದ ಗಾಂಧೀಜಿ, ಜಾಗತಿಕವಾಗಿ ಭಾರತೀಯ ಪತ್ರಿಕೋದ್ಯಮದ ಪ್ರತಿನಿಧಿಯೂ ಆಗಿದ್ದರು ಎಂಬುದನ್ನು ಮರೆಯಲಾಗದು.



ನಾ ಪತ್ರಕರ್ತನಲ್ಲ ಎಂದಿದ್ದರು ಗಾಂಧೀಜಿ


ಅದು 1925ನೇ ಇಸವಿ. ಹಿಂದೂ ಪತ್ರಿಕೆಯ ಸಂಸ್ಥಾಪಕ ಎಸ್ ಕಸ್ತೂರಿ ರಂಗ ಅಯ್ಯಂಗಾರ್ ಅವರ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಗಾಂಧೀಜಿ ಪಾಲ್ಗೊಂಡಿದ್ದರು. ಆಗ ಅವರು ಹೇಳಿದ್ದಿಷ್ಟು : ಕಸ್ತೂರಿ ರಂಗ ಅಯ್ಯಂಗಾರ ಅವರು ಸಮಾಜ ಸುಧಾರಣೆಗೆ ಶೇಕಡಾ ನೂರರಷ್ಟು ತಮ್ಮನ್ನು ತೊಡಗಿಸಿಕೊಂಡರೆಂದು ನನಗೆ ಅನ್ನಿಸುವುದಿಲ್ಲ. ಆದರೆ ಅವರು ತಾವು ನಂಬಿದ ಪತ್ರಿಕೋದ್ಯಮಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಇದೇ ಚಿಂತನೆಯನ್ನು ಮುಂದುವರೆಸುವುದಾದರೆ ಅವರು ತಾವೇ ದೇಶವನ್ನು ಮುನ್ನಡೆಸುವುದಲ್ಲ, ಬದಲಿಗೆ ದೇಶದ ಅಭಿಪ್ರಾಯವನ್ನು

ಅತ್ಯಂತ ನಿಖರವಾಗಿ ಬಿಂಬಿಸಬೇಕು ಎಂದು ಅವರು ಭಾವಿಸಿದ್ದರು. 'ಹಿಂದೂ' ಪತ್ರಿಕೆಯ ಅಂಕಣವನ್ನು ತಪ್ಪದೇ ಓದುವವರು ಗಮನಿಸಬಹುದಾದ್ದೆಂದರೆ ದೇಶದಲ್ಲಿ ಬದಲಾವಣೆಗಳಾದಂತೆಲ್ಲ ಯಾವ ದಿಕ್ಕಿನಲ್ಲಿ ಗಾಳಿ ಬೀಸುತ್ತಿದೆಯೆಂದು ನೋಡಿಕೊಂಡು ಅದಕ್ಕೆ ಅನುಗುಣವಾಗಿ ಸಂಪಾದಕೀಯ ನೀತಿಯೂ ಬದಲಾಗಿದೆ. ಇದು ಅವರಲ್ಲಿರುವ ದೌರ್ಬಲ್ಯವೆನ್ನಬಹುದು. ಆದರೆ ಹಾಗೆಂದು ನಾನು ಅಂದುಕೊಳ್ಳುವುದಿಲ್ಲ. ಅವರು ನನ್ನ ಹಾಗೆ ಸುಧಾರಣಾವಾದಿಯ ಪಾತ್ರವನ್ನು ವಹಿಸಿಕೊಂಡಿದ್ದರೆ ದೇಶ ಅಥವಾ ದೇಶದ ಜನ ಏನು ಭಾವಿಸುತ್ತಾರೆಂದು ಚಿಂತಿಸದೇ ತನ್ನ ಅಭಿಪ್ರಾಯಕ್ಕೆ ಅಭಿವ್ಯಕ್ತಿಯನ್ನು ನೀಡಬೇಕಾಗುತ್ತಿತ್ತು. ಆದರೆ ಅದು ಪತ್ರಕರ್ತನ ಜವಾಬ್ದಾರಿಯಲ್ಲ. ಪತ್ರಕರ್ತನ ವಿಶೇಷಕಾರ್ಯವೆಂದರೆ ದೇಶದ ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದಕ್ಕೆ ನೈಜವಾಗಿ, ನಿರ್ದಿಷ್ಟವಾಗಿ ಧೈರ್ಯದಿಂದ ಪ್ರಚಾರವನ್ನು ನೀಡುವುದು. ಕಸ್ತೂರಿ ರಂಗ ಅಯ್ಯಂಗಾರ ಅವರು ನಿಸ್ಸಂಶಯವಾಗಿ ಈ ಗುಣದಲ್ಲಿ ಅನನ್ಯರಾಗಿದ್ದರು.

ಇಲ್ಲಿ ಗಾಂಧೀಜಿ ಅವರ ವ್ಯಕ್ತಿತ್ವದ ಮೂರು ಮುಖಗಳನ್ನು ಗಮನಿಸಬಹುದು. ಮೊದಲನೆಯದು ಕಸ್ತೂರಿ ರಂಗ ಅಯ್ಯಂಗಾರ್ ಅವರು ಪತ್ರಿಕೋದ್ಯಮಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು, ಸಮಾಜಸೇವೆಗೆ ಅಲ್ಲ ಎನ್ನುವ ಮೂಲಕ ತನ್ನ ದಾರಿಯನ್ನು ಗಾಂಧಿ ಸ್ಪಷ್ಟಪಡಿಸುತ್ತಾರೆ. ಇಂದು ಅನೇಕ ಕಾರಣಗಳಿಂದ ಜಗತ್ತಿನ ಶ್ರೇಷ್ಠ ಪತ್ರಕರ್ತರಾಗಿದ್ದರೆಂದೂ ಕರೆಯಬಹುದಾದ ಗಾಂಧಿ ತನ್ನನ್ನು ಪತ್ರಕರ್ತನೆಂದು ಕರೆದುಕೊಳ್ಳಲಿಲ್ಲ! ಬದಲಾಗಿ ಸಮಾಜ ಸುಧಾರಕ ಅಥವಾ ಸಾಮಾಜಿಕ ಹೋರಾಟಗಾರ ಎಂದು ಕರೆದುಕೊಳ್ಳಲಿಕ್ಕೆ ಇಷ್ಟಪಟ್ಟರು. ಎರಡನೆಯದು ಪತ್ರಕರ್ತ ಅತಿಯಾಗಿ ಸಮಾಜ ಸುಧಾರಣೆಯನ್ನು ಹಚ್ಚಿಕೊಳ್ಳಬಾರದು, ಹೋರಾಟದ ಮುಂಚೂಣಿಗೆ ಬರಬಾರದು, ದೇಶದ ಅಭಿಪ್ರಾಯವನ್ನು

ದಾಖಲಿಸುವುದಷ್ಟೇ ಅವನ ಕೆಲಸವಾಗಬೇಕು ಎಂಬುದನ್ನು ಗಾಂಧಿ ಸೂಕ್ಷ್ಮವಾಗಿ ಹೇಳಿದ್ದರು. 'ದಿ ಹಿಂದೂ' ಪತ್ರಿಕೆಯ ಸಂಪಾದಕೀಯ ನೀತಿ ದೇಶದ/ದಿನಮಾನದ ಅಭಿಪ್ರಾಯಕ್ಕೆ ಅನುಗುಣವಾಗಿ ಬದಲಾಗುತ್ತಿದ್ದುದನ್ನು, ಗಾಳಿ ಬಂದತ್ತ ವಾಲುತ್ತಿದ್ದುದನ್ನೂ ಗಾಂಧೀಜಿ ಟೀಕಿಸುವುದನ್ನು ಗಮನಿಸಬಹುದು. ಕಸ್ತೂರಿ ಅವರು ನನ್ನ ಹಾಗೆ "ಸಮಾಜ ಸುಧಾರಕನ ಪಾತ್ರವನ್ನು ವಹಿಸಿಕೊಂಡಿದ್ದರೆ ದೇಶವು ಏನು ತಿಳಿದುಕೊಳ್ಳುತ್ತದೆ ಎಂದು ಯೋಚಿಸದೇ ತನ್ನ ಅಭಿಪ್ರಾಯವನ್ನು ನಿರ್ಭಿಡೆಯಿಂದ ವ್ಯಕ್ತಪಡಿಸಬೇಕಾಗುತ್ತಿತ್ತು. ಆದರೆ ಪತ್ರಕರ್ತನ ಹೊಣೆ ಅದಲ್ಲ. ಹೀಗಾಗಿ ಕಸ್ತೂರಿ ರಂಗ ಅವರದು ತಪ್ಪಿಲ್ಲ" ಎಂದು ಗಾಂಧೀಜಿ ವಾದಿಸುತ್ತಾರೆ.

ಮೂರನೆಯದಾಗಿ ಅವರು ಹೇಳುವುದು ಪತ್ರಕರ್ತನಾದವನು ದೇಶದ ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಹಾಗೂ ಅದಕ್ಕೆ ನಿರ್ದಿಷ್ಟ ಹಾಗೂ ನಿರ್ಭಯ ಅಭಿವ್ಯಕ್ತಿಯನ್ನು ನೀಡಬೇಕು. ಈ ಗುಣಕ್ಕೆ ಕಸ್ತೂರಿಯವರಿಗೆ ಎದುರಾಳಿಯೇ ಇರಲಿಲ್ಲ ಎಂದು ಗಾಂಧಿ ಮೆಚ್ಚುಗೆ ಸೂಚಿಸುತ್ತಾರೆ. ಅಂದರೆ ಸಮಾಜ ಸುಧಾರಕ ಜಗತ್ತೇ ವಿರೋಧಿಸಿದರೂ ತನಗೆ ಸರಿಯೆನಿಸಿದ್ದನ್ನು ಹೇಳಲು ಹಿಂಜರಿಯ ಬಾರದು ಎನ್ನುವ ಗಾಂಧಿ, ಅದೇ ರೀತಿ ಪತ್ರಕರ್ತ, ಜನರ ಭಾವನೆಗಳನ್ನು ಜಗತ್ತಿಗೆ ತಿಳಿಸುವಲ್ಲಿ ಯಾವ ಆಗ್ರಹಗಳಿಗೂ, ಭಯೋತ್ಪಾದನೆಗೂ ತುತ್ತಾಗಬಾರದು, ನಿರ್ಭಿಡೆಯಿಂದ ದೇಶದ ಜನರ ನಾಡಿಮಿಡಿತವನ್ನು ವರದಿಮಾಡಬೇಕು ಎಂದೂ ಅಭಿಪ್ರಾಯ ಪಡುತ್ತಾರೆ.



ಪತ್ರಿಕೆ: ಸತ್ಯ-ಅಹಿಂಸೆಯ ಅಸ್ತ್ರ

ಸಂಪಾದಕರಾಗಿ ಗಾಂಧಿ ತಮ್ಮ ಪತ್ರಿಕೆಗೆ ಕಟ್ಟಾ ನಿಯಮಗಳನ್ನು ಜಾರಿಗೆ ತಂದಿದ್ದರು. ಇದು ಅವರನ್ನು ಬಿಟ್ಟು ಇತರರಿಗೆ ಪಾಲಿಸಲು ಕಷ್ಟವಾಗುತ್ತಿತ್ತು. ಉದಾಹರಣೆಗೆ ಅವರು ಪತ್ರಿಕಾ ಪ್ರಕಟಣೆಯ ಮೇಲೆ ಸರ್ಕಾರ ಯಾವುದೇ ರೀತಿಯ ಹಿಡಿತ ಹೊಂದುವುದನ್ನು ಸಹಿಸುತ್ತಿರಲಿಲ್ಲ. ಪತ್ರಿಕಾ ಸ್ವಾತಂತ್ರ್ಯದ ಮೇಲೆ ಸರ್ಕಾರ ಪ್ರಹಾರ ಮಾಡುವುದನ್ನು ಒಪ್ಪಿಕೊಳ್ಳುವ ಬದಲು ಪತ್ರಿಕೆಗಳನ್ನು ಮುಚ್ಚುವುದೇ ಅವರಿಗೆ ಇಷ್ಟವಾಗಿತ್ತು. ಗಾಂಧೀಜಿ ತಮ್ಮ ಪತ್ರಿಕೆಗಳಾದ 'ಯಂಗ್ ಇಂಡಿಯಾ' ಮತ್ತೂ 'ನವಜೀವನ' ಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲು ಯೋಚಿಸುತ್ತಿದೆಯೆಂದು ತಿಳಿದಾಗ ಅವರು 'ಯಂಗ್ ಇಂಡಿಯಾ' ದಲ್ಲಿ ಹೀಗೆ ಬರೆದರು,


"ಈ ಗಾಳಿ ಸುದ್ದಿಗೆ ಆಧಾರವಿಲ್ಲವೆಂದು ಭಾವಿಸುತ್ತೇನೆ. ನನ್ನ ಮೂರು ಪತ್ರಿಕೆಗಳು (ಹರಿಜನವನ್ನೂ ಸೇರಿಸಿ) ಶಾಂತಿ ಮತ್ತು ಸದ್ಭಾವನೆಯ ವಿನಾ ಬೇರೇನನ್ನೂ ಬೋಧಿಸುತ್ತಿಲ್ಲ. ಓದುವವರಿಗೆ ಅಪ್ಪಟಸತ್ಯವನ್ನು ಮಾತ್ರ ನೀಡಲು ಅಸಾಮಾನ್ಯ ಎಚ್ಚರಿಕೆಯನ್ನು ಈ ಪತ್ರಿಕೆಗಳಲ್ಲಿ ತೋರುತ್ತೇವೆ. ಪ್ರತಿಯೊಂದು ಆಕಸ್ಮಿಕ ತಪ್ಪುಗಳನ್ನು ಒಪ್ಪಿಕೊಂಡು ತಿದ್ದುಪಡಿಗಳನ್ನು ಪ್ರಕಟಿಸಲಾಗುತ್ತದೆ. ಎಲ್ಲಾ ಪತ್ರಿಕೆಗಳ ಪ್ರಸಾರವು ದಿನನಿತ್ಯ ಹೆಚ್ಚುತ್ತಿದೆ. ಇದನ್ನು ನಡೆಸುವವರು ಬಹುತೇಕ ಯಾವುದೇ ಸಂಬಳವನ್ನು ಪಡೆಯದ ಸ್ವಯಂಸೇವಕರು. ಅಥವಾ ಸಂಸಾರ ಸಾಗಿಸಲು ಮಾತ್ರ ಹಣ ಪಡೆಯುವವರು. ಇವುಗಳಿಂದ ಬಂದ ಲಾಭವನ್ನು ಚಂದಾದಾರರಿಗೆ ಒಂದಲ್ಲಾ ಒಂದು ರೀತಿಯಲ್ಲಿ ಹಿಂದಿರುಗಿಸಲಾಗುತ್ತದೆ ಅಥವಾ ಸಾರ್ವಜನಿಕ ಕೆಲಸಗಳಿಗೆ ವಿನಿಯೋಗಿಸಲಾಗುತ್ತದೆ. ಈ ಪತ್ರಿಕೆಗಳನ್ನು ನಿಲ್ಲಿಸಿದರೆ ನೋವಾಗುವುದಿಲ್ಲವೆಂದು ಹೇಳಲಾರೆ. ಆದರೆ ಸರ್ಕಾರಕ್ಕೆ ಈ ಪತ್ರಿಕೆಗಳನ್ನು ಮುಚ್ಚಿಬಿಡುವುದು ಬಹಳ ಸುಲಭದ ಕೆಲಸ. ಪ್ರಕಾಶಕರು ಮತ್ತು ಮುದ್ರಕರೆಲ್ಲಾ ಸ್ನೇಹಿತರು ಅಥವಾ ಸಹೋದ್ಯೋಗಿಗಳು.ಅಲ್ಲಿ ನನ್ನ ಪಾತ್ರವೆಂದರೆ ಸರ್ಕಾರ ಭದ್ರತಾ ಠೇವಣಿಯನ್ನು ಕೇಳಿದ ತಕ್ಷಣ ಪತ್ರಿಕೆ ನಿಲ್ಲಿಸಬೇಕು.

ನನ್ನ ನಂಬಿಕೆಯೆಂದರೆ ಸರ್ಕಾರ ನನ್ನ ಚಟುವಟಿಕೆಗಳ ಬಗ್ಗೆ ಯಾವುದೇ ಭಾವನೆಹೊಂದಿರಲಿ, ನಾನು ಪತ್ರಿಕೆಗಳನ್ನು ನನ್ನ ಆತ್ಮ ಸಾಕ್ಷಿಯಂತೆ ಅಪ್ಪಟ ಅಹಿಂಸೆ ಮತ್ತು ಸತ್ಯದ ಪ್ರತಿಪಾದನೆಗೆ ಬಳಸುತ್ತಿರುವುದರ ಬಗ್ಗೆ ನನಗೆ ಮೆಚ್ಚುಗೆ ಸೂಚಿಸಬೇಕು".

ಸಾಮಾಜಿಕ ಹೋರಾಟದಲ್ಲಿ ಸತ್ಯಾಗ್ರಹ ಗಾಂಧಿ ಅವರ ಹಾದಿಯಾಗಿತ್ತು. ಸತ್ಯ ಮತ್ತು ಅಹಿಂಸೆ ಅವರ ಬಲಶಾಲಿ ಅಸ್ತ್ರಗಳಾಗಿದ್ದವು. ಅವುಗಳನ್ನು ಪ್ರಚಾರಕ್ಕೆ ತರಲು ಪತ್ರಿಕೆಗಳು ಮಾಧ್ಯಮಗಳಾಗಿದ್ದವು. ತಾನು ಸತ್ಯ ಮತ್ತು ಅಹಿಂಸೆಯ ಪ್ರತಿಪಾದನೆಗಾಗಿಯೇ ಪತ್ರಿಕೆಗಳನ್ನು

ನಡೆಸುತ್ತಿರುವುದನ್ನು ತನ್ನ ವೈರಿಗಳೂ ಮೆಚ್ಚಬೇಕು (ಬ್ರಿಟಿಷ್ ಸರ್ಕಾರ) ಎಂಬ ಹೇಳಿಕೆ ಧೈರ್ಯವನ್ನೂ, ಒಪ್ಪಿದ ತತ್ವಗಳ ಮೇಲಿನ ಅಖಂಡ ವಿಶ್ವಾಸವನ್ನೂ ತೋರಿಸುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಸಂಗತಿ ಅವರ ಪತ್ರಿಕೆಗಳು ಹೆಚ್ಚಾಗಿ ಸ್ವಯಂ ಸೇವಕರ ಸಹಕಾರದಿಂದಲೇ ನಡೆಯುತ್ತಿದ್ದವು ಎಂಬುದು. ದಕ್ಷಿಣ ಆಫ್ರಿಕಾದಲ್ಲಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಕೂಡಾ ನೌಕರರು ಇರಲಿಲ್ಲ. ಎಲ್ಲರೂ ಸ್ವಯಂಸೇವಕರೇ ಆಗಿದ್ದರು. ಒಂದು ಉದ್ದೇಶಕ್ಕಾಗಿ ಅವರು ಒಟ್ಟು ಸೇರಿದವರಾಗಿದ್ದರು. ಅವರಲ್ಲಿ ಹೋರಾಟದ ಕಿಚ್ಚು ಇತ್ತು. ಪತ್ರಿಕೆ ಕೂಡಾ ಅವರ ಹೋರಾಟದ ಅಸ್ತ್ರವಾಗಿತ್ತು. ಹೀಗಾಗಿ ಸಂಬಳ ಪಡೆಯುವ ನೌಕರರೇ ಇಲ್ಲದೇ ಪತ್ರಿಕೆ ನಡೆಯುವುದು ಸಾಧ್ಯವಿತ್ತು. ಇವರು ಯಾರಿಗೂ ಗಾಂಧಿ ಯಜಮಾನನಾಗಿರಲಿಲ್ಲ. ನಾಯಕರಾಗಿದ್ದರು ಎಂಬುದು ಮುಖ್ಯ. ಈಗ ಯಾಕೆ ಇಂಥ ಪ್ರಯೋಗಗಳು ಬಹಳ ಕಾಲ ಯಶಸ್ವಿಯಗುವುದಿಲ್ಲವೆಂದರೆ ನಡೆಸುವವರು ಯಜಮಾನರಾಗುತ್ತಾರೆ. ಹಾಗೂ ಕೆಲಸಮಾಡುವವರು ಸಂಬಳದ ಅಪೇಕ್ಷೆಯಿಂದ ದುಡಿಯುವ ಕೆಲಸಗಾರರಾಗಿರುತ್ತಾರೆ. ಆಗ ಸ್ವಾತಂತ್ರ್ಯದ ಹೋರಾಟವಿದ್ದ ಹಾಗೆ ಈಗ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ತುರ್ತು ಯಾರಿಗೂ ಇಲ್ಲ. ಹೀಗಾಗಿ ಗಾಂಧೀಜಿ ಅವರ ಆದರ್ಶಗಳ ಮೇಲೆ ಇಂದು ಪತ್ರಿಕೆಗಳನ್ನು ನಡೆಸಲಾಗದು.



ಇಂಗ್ಲಿಷ್ ವಿರೋಧಿಯಲ್ಲ

ಗಾಂಧೀಜಿ 'ಯಂಗ್ ಇಂಡಿಯಾ' ದಲ್ಲಿ ಬರೆಯುತ್ತಾರೆ: ನೇರವಾಗಿ ಹೇಳಬೇಕೆಂದರೆ ನನಗೆ ಇಂಗ್ಲಿಷ್ ಭಾಷೆಯಲ್ಲಿ ಪತ್ರಿಕೆಯನ್ನು ಸಂಪಾದಿಸುವುದು ಖುಷಿಯೇನಲ್ಲ. ಈ ಜವಾಬ್ದಾರಿಯನ್ನು ವಹಿಸಿಕೊಂಡು ನನ್ನ ಸಮಯವನ್ನು ಸದುಪಯೋಗ ಮಾಡುತ್ತಿದ್ದೇನೆಂದು ಅನಿಸುವುದಿಲ್ಲ. ಮದ್ರಾಸ್ ಪ್ರೆಸಿಡೆನ್ಸಿಯವರಿಗಲ್ಲವಾದರೆ ನಾನು 'ಯಂಗ್ ಇಂಡಿಯಾ' ನಡೆಸುವುದನ್ನು ನಿಲ್ಲಿಸಬೇಕಿತ್ತು. ಇಂಗ್ಲಿಷ್ ಪತ್ರಿಕೆಗಳು ದೇಶದ ಕೆಲವೇ ಜನರನ್ನು ತಲುಪುತ್ತವೆ. ನಮ್ಮಲ್ಲಿ ಹಿಂದೀ ಭಾಷೆಯು ಎರಡನೇ ಭಾಷೆಯಾಗಿ ಇಡೀ ದೇಶದಲ್ಲಿ ಕಡ್ಡಾಯವಾಗಿ ಓದುವಂತಾಗುವವರೆಗೆ ಇಂಗ್ಲಿಷ್ ಬಳಕೆಯಲ್ಲಿರಬೇಕಾಗುತ್ತದೆ.


ಅದರಲ್ಲೂ ಮುಖ್ಯವಾಗಿ ಮದ್ರಾಸ್ ಪ್ರೆಸಿಡೆನ್ಸಿ ಅವರನ್ನು ಇಂಗ್ಲಿಷ್‌ನಲ್ಲೇ ಮಾತನಾಡಿಸಬೇಕಾಗುತ್ತದೆ. ನಾನು ಒಂದು ಪತ್ರಿಕೆ ಕನಿಷ್ಠ 2500 ಚಂದಾದಾರರನ್ನು ಹೊಂದಿ ತನ್ನ ಕಾಲಮೇಲೆ ತಾನು ನಿಲ್ಲುವಂತಲ್ಲದ ಪತ್ರಿಕೆಯನ್ನು ಸಂಪಾದಿಸಲಾರೆ. (ಗಾಂಧಿ ಆಗ ಯಂಗ್ ಇಂಡಿಯಾ ಪತ್ರಿಕೆಗೆ 1200 ಚಂದಾದರರು ಮಾತ್ರ ಇದ್ದರೆಂದು ತಿಳಿಸಿದರು) ನಾನು ತಮಿಳು ಸ್ನೇಹಿತರಿಗೆ ವಿನಂತಿಸುವುದೆಂದರೆ 'ಯಂಗ್ ಇಂಡಿಯಾ' ಇಂಗ್ಲಿಷ್ ಭಾಷೆಯಲ್ಲಿ ಮುಂದುವರಿಯಬೇಕಾದರೆ ಅದರ ಪ್ರಸಾರ ನಿಗದಿತ ಸಂಖ್ಯೆಯನ್ನು ತಲುಪುವಂತಾಗಬೇಕು'.

'ನವಜೀವನ' 12000 ಚಂದಾದಾರರನ್ನು ಹೊಂದಿದ್ದು ಅಗತ್ಯ ಸಂಖ್ಯೆಯ ಪ್ರತಿಗಳನ್ನು ಮುದ್ರಿಸುವವರು ಸಿಕ್ಕರೆ ನವಜೀವನದ ಪ್ರಸಾರ 20 ಸಾವಿರ ದಾಟಬಹುದು ಎಂಬುದಾಗಿ ಗಾಂಧೀಜಿ ಹೇಳಿದ್ದರು. ಆದರೆ ಗಾಂಧಿ ಅವರ ಭಯ ಸುಳ್ಳಾಗಿ ಬಹಳ ಕಡಿಮೆ ಅವಧಿಯಲ್ಲಿ 'ಯಂಗ್ ಇಂಡಿಯಾ' ಪ್ರಸಾರ 54000 ಪ್ರತಿಗಳನ್ನು ದಾಟಿತ್ತು. ಅವರ ಬರವಣಿಗೆಗಳಿಗೆ ಬೇರೆ ಯಾರಿಗೂ ಇರದಷ್ಟು ಬೇಡಿಕೆಯಿತ್ತು. ದೇಶದ ಮೂಲೆ ಮೂಲೆಗೂ ಪತ್ರಿಕೆಯನ್ನು ತಲುಪಿಸುವುದು ಅತ್ಯಂತ ಅಗತ್ಯವೆಂದು ಅವರು ನಂಬಿದ್ದರು.

ಗಾಂಧೀಜಿ ಮಾತೃಭಾಷೆಯಲ್ಲಿ ಬರೆಯುವುದನ್ನು ಇಷ್ಟ ಪಡುತ್ತಿದ್ದರು. ಆದರೆ ಇಂಗ್ಲಿಷ್ ಭಾಷೆಯ ವಿರೋಧಿಯಾಗಿರಲಿಲ್ಲ. ಹಿಂದಿ ಭಾಷೆ ಭಾರತದಲ್ಲಿ ಸರ್ವತ್ರ ಬಳಸುವ ಭಾಷೆಯಾಗುವವರೆಗೆ ದಕ್ಷಿಣ ಭಾರತೀಯರಿಗಾಗಿ ಇಂಗ್ಲಿಷ್‌ನಲ್ಲಿ ಬರೆಯುವುದನ್ನು ಹಾಗೂ ಇಂಗ್ಲಿಷ್ ಪತ್ರಿಕೆ ತರುವುದನ್ನು ಅವರು ಸಮರ್ಥಿಸಿದ್ದರು ಎಂಬುದನ್ನು ಗಮನಿಸಬೇಕು. ಬ್ರಿಟೀಷರು ಭಾರತ ಬಿಟ್ಟು ತೊಲಗಿದ 75 ವರ್ಷಗಳ ಮೇಲೆ ಕೂಡಾ ಈ ದೇಶದಲ್ಲಿ ಇಂಗ್ಲಿಷ್ ಪ್ರಭಾವ ಹೆಚ್ಚಾಗಿ ಇರುವುದನ್ನು ಕಾಣುತ್ತೇವೆ. ಈಗ ಜಾಗತೀಕರಣದ ಸಂದರ್ಭದಲ್ಲಿ ಇಂಗ್ಲಿಷ್ ಜಾಗತಿಕ ಸಂವಹನ ಭಾಷೆಯಾಗುತ್ತಿದೆ. ಭಾರತೀಯರು

ಇಂಗ್ಲಿಷ್ ಚೆನ್ನಾಗಿ ಮಾತನಾಡಬಲ್ಲರು ಹಾಗೂ ಬರೆಯಬಲ್ಲರು ಎಂಬ ಕಾರಣಕ್ಕೆ ಯುರೋಪ್ ಹಾಗೂ ಏಷಿಯಾದ ಇತರ ದೇಶಗಳಲ್ಲಿ ಭಾರತೀಯರಿಗೆ ಕೆಲಸ ಸಿಕ್ಕುತ್ತದೆ. ಗಲ್ಫ್ ದೇಶಗಳಲ್ಲಿ ಸಹಸ್ರಾರು ಭಾರತೀಯರು ಇಂಗ್ಲಿಷ್ ಶಿಕ್ಷಕರಾಗಿದ್ದಾರೆ. ಈಗ ಇಂಗ್ಲಿಷ್ ಒಂದು ರೀತಿಯಲ್ಲಿ ಭಾರತೀಯರ ಕೈ ಹಿಡಿದಿದೆ ಎಂದರೆ ತಪ್ಪಲ್ಲ.

ವಿಶೇಷವೆನಿಸುವುದು ಗಾಂಧಿ ಅವರ ಇಂಗ್ಲಿಷ್ ಪ್ರಭುತ್ವ. ಅವರು ಇಂಗ್ಲಿಷ್‌ನಲ್ಲಿ ಬರೆಯುವುದು ತಮಗೆ ಇಷ್ಟವಿಲ್ಲ ಎನ್ನುತ್ತಲೇ ಸೊಗಸಾಗಿ ಇಂಗ್ಲಿಷ್‌ನಲ್ಲಿ ಬರೆಯಬಲ್ಲವರಾಗಿದ್ದರು. ಇಂಗ್ಲಿಷ್ ಮಾತೃಭಾಷಿಕರಿಗೂ ಸಾಧ್ಯವಾಗದಷ್ಟು ಸರಳವಾಗಿ ಹಾಗೂ ಲಲಿತವಾಗಿ ಅವರು ಇಂಗ್ಲಿಷಿನಲ್ಲಿ ಬರೆಯುತ್ತಿದ್ದರು. ಮಾತೃಭಾಷೆಯಷ್ಟೇ ಸಹಜವಾಗಿ ಇಂಗ್ಲಿಷಿನಲ್ಲಿ ತಮ್ಮನ್ನು ವ್ಯಕ್ತಗೊಳಿಸಿಕೊಳ್ಳುವುದು ಅವರಿಗೆ ಸಾಧ್ಯವಿತ್ತು. ಅಂದರೆ ಮಾತೃಭಾಷೆಯಲ್ಲಿ ಪ್ರಾವೀಣ್ಯವಿರುವವರು ಇತರ ಭಾಷೆಗಳಲ್ಲೂ ಪ್ರಾವೀಣ್ಯಗಳಿಸಬಹುದು ಎಂಬ ಭಾಷಾ ತಜ್ಞರ ಅನಿಸಿಕೆಗೆ ಗಾಂಧಿ ಅವರೇ ಸಾಕ್ಷಿ. ಇದು ಇಂದಿಗೂ ಮೊದಲಿಗೆ ಅಆ ಕಲಿಸುವುದನ್ನು ಬಿಟ್ಟು ಎಬಿಸಿಡಿ ಕಲಿಸಿ ಇಂಗ್ಲಿಷಿನಲ್ಲೇ ಶಿಕ್ಷಣ ಆರಂಭಿಸುವ ಮೂಲಕ ಮಕ್ಕಳಿಗೆ ಯಾವ ಭಾಷೆಯಲ್ಲೂ ಪ್ರಭುತ್ವ ಇಲ್ಲದಂತೆ ಮಾಡುತ್ತಿರುವ ಭಾರತೀಯ ಪಾಲಕರುಗಳಿಗೆ ಈ ಸತ್ಯ ಅರ್ಥವಾಗಬೇಕು. ಗಾಂಧೀಜಿ ಇಂಗ್ಲಿಷರು ಈ ದೇಶ ಆಳುವುದನ್ನು ವಿರೋಧಿಸಿದ್ದರೇ ವಿನಾ ಇಂಗ್ಲಿಷರನ್ನು ವಿರೋಧಿಸಿರಲಿಲ್ಲ ಅಥವಾ ಇಂಗ್ಲಿಷ್ ಭಾಷೆಯ ವಿರೋಧಿಯಾಗಿರಲಿಲ್ಲ ಎಂಬುದನ್ನು ಮರೆಯಬಾರದು.



ಕೈ ಬರಹದ ಪತ್ರಿಕೆಗೆ ಜೈ

ಸರ್ಕಾರ ತಂದ ಪತ್ರಿಕಾ ಕಾಯ್ದೆಯ ವಿರುದ್ಧ ಗಾಂಧೀಜಿ ಕೆಂಡಾಮಂಡಲವಾಗಿದ್ದರು. 'ಸರ್ಕಾರ ಮುಕ್ತವಾಗಿ ನಮ್ಮ ಪತ್ರಿಕೆಗಳನ್ನು ಮುದ್ರಿಸಿ ಹಂಚಲು ಕೊಡದಿದ್ದಾಗ ಸರ್ಕಾರದ ಕಾನೂನು ಭಂಗವಾದರೂ ಸರಿ, ನಮ್ಮ ಅನಿಸಿಕೆಗಳನ್ನು ಪ್ರಚುರಪಡಿಸಬೇಕು, ಸ್ವಾತಂತ್ರ್ಯವನ್ನು ಪಡೆಯುವ ಸಲುವಾಗಿಯೇ ಪಾರತಂತ್ರ್ಯವನ್ನು ವಿರೋಧಿಸಬೇಕು. ದೇಶದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ತಿಳಿಸಬಲ್ಲ ಸೃಷ್ಟಿಶೀಲ ಬರಹಗಾರ ತಮ್ಮ ನೈಜ (ಒರಿಜಿನಲ್) ಚಿಂತನೆಗಳನ್ನು ಕೈಯಲ್ಲಿ ಬರೆದು, ಒಂದಿಷ್ಟು ಜನ ಅದನ್ನು ಪ್ರತಿಮಾಡಿ ಹಂಚಲು

ಸಾಧ್ಯ. ಆದ್ದರಿಂದ ಪತ್ರಿಕಾ ಕಾಯಿದೆಗೆ ಹೆದರಿ ಸಂಪಾದಕರು ಕೈ ಕಟ್ಟಿ ಕೂರಬಾರದು. ಮುದ್ರಿತ ಪತ್ರಿಕೆಯಲ್ಲಿ ತಮ್ಮ ಭಾವನೆಗಳನ್ನು ನಿರ್ಭೀತಿಯಿಂದ ಪ್ರಕಟಿಸುವ ಅವಕಾಶವಿಲ್ಲದಿದ್ದಾಗ ತಮ್ಮ ಭಾವನೆಗಳನ್ನು ಹಿಡಿದಿಡುವ ಬದಲು ಕೈ ಬರಹದ ಮೂಲಕ ಬರೆದು ಹಂಚಬೇಕು' ಎಂದು ಕರೆ ನೀಡಿದರು.

ಗಾಂಧೀಜಿ ಅವರ ದೃಷ್ಟಿಯಲ್ಲಿ ಕೈ ಬರಹದ ಪತ್ರಿಕೆಯೆಂಬುದು ಸರ್ಕಾರದ ದಬ್ಬಾಳಿಕೆಯನ್ನು ಎದುರಿಸುವ ಅಸ್ತ್ರ. ಎಲ್ಲಿಯವರೆಗೆ ಸಂಪಾದಕನ ದೇಹವನ್ನು ಸ್ವತಂತ್ರವಾಗಿ ಬಿಡಲಾಗುವುದೋ ಅಲ್ಲಿಯವರೆಗೆ ಸಂಪಾದಕನು ಹೇಳಬೇಕಾದ್ದನ್ನು ಹೇಳುವುದನ್ನು ಯಾರೂ ತಪ್ಪಿಸಲಾರರು. ಸರ್ಕಾರ ಅವರನ್ನು ಜೈಲಿಗೆ ಕಳುಹಿಸಿದಾಗ ಮುದ್ರಣಕ್ಕೂ ತೊಂದರೆ ಕೊಟ್ಟಾಗ ಅವರೆಂದರು – "ನಾವು ಮುದ್ರಣ ಯಂತ್ರವೆಂಬ ಗೊಂಬೆಯನ್ನು ಹಾಗೂ ಅಕ್ಷರ ಮೊಳೆಗಳನ್ನು ಒಡೆದು ಬಿಸಾಕೋಣ. ಲೇಖನಿಯೇ ನಮ್ಮ ಎರಕಹೊಯ್ಯುವ ಕಾರ್ಖಾನೆ. ಹಾಗೂ ಬರೆಯುವ ಕರಗಳೇ ನಮ್ಮ ಮುದ್ರಣ ಯಂತ್ರಗಳು. ನಮ್ಮ ಭಾವನೆಗಳನ್ನು ಅನಿರ್ಬಂಧಿತವಾಗಿ ಅಭಿವ್ಯಕ್ತಿಗೊಳಿಸಲು ಸಾಧ್ಯವಾಗುವ ಈ ಅಕ್ಷರವನ್ನು ಮುದ್ರಣ ಯಂತ್ರದಲ್ಲಿ ಮುದ್ರಿಸೋಣ. ನೈಜ ಮುದ್ರಣ ಯಂತ್ರವನ್ನು ಸರ್ಕಾರ ವಶಪಡಿಸಿಕೊಂಡಾಗ ಚಿಂತೆ ಮಾಡುವುದು ಬೇಡ. ಆಗ ಕೈಬರಹದ ಪತ್ರಿಕೆ ಅದಕ್ಕೆ ಸರಿಯಾದ ಸಮಯಕ್ಕೆ ನಮಗೆ ದೊರಕುವ ಸಶಕ್ತ ಪರ್ಯಾಯ. ನಾವು ಮುದ್ರಣ ಯಂತ್ರವನ್ನು ಹಾಗೂ ಅಕ್ಷರ ಜೋಡಣೆಯ ಕೋಲನ್ನು ನಿರ್ಲಕ್ಷಮಾಡಿದಾಗಲೇ ಸ್ವಂತಂತ್ರವಾಗಿ ಸುದ್ದಿಯನ್ನು ಎಲ್ಲಕಾಲಕ್ಕೂ ನಿಲ್ಲುವಂತೆ ಉಳಿಸಬಹುದು! ನಾವು ನಾಗರಿಕ ಪ್ರತಿರೋಧದ ಅಸ್ತ್ರವನ್ನು ಮುದ್ರಣದ ನಮ್ಮ ಹಕ್ಕು ಮರು ಸ್ಥಾಪನೆಗೊಳ್ಳುವವರೆಗೆ ಬಳಸಬೇಕು. ಮುಕ್ತ ಅಭಿವ್ಯಕ್ತಿ, ಮುಕ್ತ ಸಂಘಟನೆ ಮತ್ತು ಪತ್ರಿಕಾ ಸ್ವಾತಂತ್ರ್ಯಗಳೇ ಸ್ವರಾಜ್ಯದ ತಿರುಳು ಎನ್ನಬಹುದು" ಎಂಬುದು ಗಾಂಧೀಜಿ ಅವರ ನಿಲುವಾಗಿತ್ತು.

ಸರ್ಕಾರ ಮುಕ್ತವಾಗಿ ಬರೆಯುವ, ಮುದ್ರಿಸುವ ಸ್ವಾತಂತ್ರ್ಯ ನೀಡದಿದ್ದರೆ ಯಾರದೋ ನಿರ್ದೇಶನಗಳಿಗೆ ಅನುಗುಣವಾಗಿ ಪತ್ರಿಕೆ ಮುದ್ರಿಸುವ ಬದಲು ಕೈ ಬರಹದ ಪತ್ರಿಕೆಗಳೇ ಲೇಸೆಂದು ಅವರು ಕಂಡುಕೊಂಡಿದ್ದರು. ಆ ಪ್ರಕಾರ ಪತ್ರಿಕಾ ಕಾಯಿದೆಗೆ ಪ್ರತಿಭಟನೆಯಾಗಿ ಸತ್ಯಾಗ್ರಹವೆಂಬ ಕೈಬರಹದ ಪತ್ರಿಕೆಯನ್ನೂ ಅವರು ನಡೆಸಿದರು. ಇಂಥ ಪತ್ರಿಕೆಗೆ ಯಾರ ನಿರ್ಬಂಧವೂ ಇರುವುದಿಲ್ಲ ಎಂಬುದು ಅವರು ಉತ್ಸಾಹದಿಂದ ಕೈಬರಹದ ಪತ್ರಿಕೆ ತರಲು ಕಾರಣವಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಈ ಕೈಬರಹದ ಪತ್ರಿಕೆಗಳ ಪ್ರಭಾವ ಸಾಕಷ್ಟಿತ್ತು. ಕರ್ನಾಟಕದಲ್ಲಿಯೂ ಕರನಿರಾಕರಣೆ ಚಳವಳಿಯ ಸಂದರ್ಭದಲ್ಲಿ ಈ ತೆರನ ಪತ್ರಿಕೆಗಳನ್ನು ಹೊರಡಿಸುತ್ತಿದ್ದರು.ಇಂಥ ಪತ್ರಿಕೆಗಳು ಜನರನ್ನು ಬಡಿದೆಬ್ಬಿಸುತ್ತಿದ್ದವು. ಅವುಗಳನ್ನು ಭೂಗತ ಪತ್ರಿಕೆಗಳು ಎಂದು ಕರೆಯುತ್ತಿದ್ದರು. ಇವು ಒಬ್ಬರಿಂದ ಒಬ್ಬರಿಗೆ ಹಂಚಲ್ಪಡುತ್ತಿತ್ತು. ತುರ್ತು ಸ್ಥಿತಿಯ ಸಂದರ್ಭದಲ್ಲಿ ಕೂಡಾ ಇಂದಿರಾ ಗಾಂಧಿ ಅವರ ಸರ್ಕಾರ ಪತ್ರಿಕೆಗಳ ಮೇಲೆ ಸೆನ್ಸಾರ್ ಷಿಪ್ ಹೇರಿದ ಪರಿಣಾಮ, ಈ ಕಾಯಿದೆಯಿಂದ ಬಚಾವಾಗಲು ಜನ ಭೂಗತ ಪತ್ರಿಕೆಗಳ ಮೊರೆಹೋದರು. ಅನೇಕ ಜನರನ್ನು ಸರ್ಕಾರ ದಸ್ತಗಿರಿ ಮಾಡಿ ಜೈಲಲ್ಲಿ ಇರಿಸಿತು. ಇದರ ಪ್ರಕಾಶಕರು ಯಾರು, ಸಂಪಾದಕರು ಯಾರು ಎಂಬುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಹೀಗಾಗಿ ಸರ್ಕಾರದ ಕಣ್ಣು ತಪ್ಪಿಸಿ ಈ ಪತ್ರಿಕೆಗಳನ್ನು ಹಂಚಲಾಗುತ್ತಿತ್ತು. ಮುದ್ರಿತ ಪತ್ರಿಕೆ ಮಾಡುವ ಕೆಲಸವನ್ನೇ ಕೈಬರಹದ ಪತ್ರಿಕೆಗಳು ಇನ್ನೂ ಚೆನ್ನಾಗಿ ಮಾಡುತ್ತಿದ್ದವು. ಇದಕ್ಕೆ ಗಾಂಧೀಜಿ ಅವರ ಸಮರ್ಥನೆಯೂ ಇತ್ತು ಎಂಬುದು ವಿಶೇಷವಾದುದು.



ನರಸತ್ತ ಪತ್ರಕರ್ತರು!


ಜಗತ್ತಿನಲ್ಲಿ ಪತ್ರಿಕಾ ಸ್ವಾತಂತ್ರ್ಯದ ಅದಮ್ಯ ಸಮರ್ಥಕರೆಂದರೆ ಅವರು ಗಾಂಧಿ. ಅವರು ಎಲ್ಲ ಬಗೆಯ ಸೆನ್ಸಾರ್‌ಷಿಪ್‌ನ ಕಡು ವಿರೋಧಿಯಾಗಿದ್ದರು. ಒಮ್ಮೆ ಪತ್ರಿಕಾ ಕಾನೂನಿಗೆ ಹೆದರಿ ಅನೇಕ ಸಂಪಾದಕರುಗಳು ಗಾಂಧಿ ಅವರ ಒಂದು ಭಾಷಣದ ಮುಖ್ಯ ಆಶಯುಗಳನ್ನು ಕೈ ಬಿಟ್ಟು ವರದಿಯನ್ನು ಪ್ರಕಟಿಸಿದ್ದರು. ಆಗ ಅವರು ಹೇಳಿದ್ದು: ನನ್ನ ಭಾಷಣದ ಮುಖ್ಯ ಅಂಶಗಳನ್ನು ಸಂಪಾದಕರುಗಳು ಸೆನ್ಸಾರಿನ ಕತ್ತರಿಗೆ ಹೆದರಿ ಬಹುಭಾಗವನ್ನು ಕತ್ತರಿಸಿ ಪ್ರಕಟಿಸಿದ್ದಾರೆ. ಈ ಪತ್ರಿಕಾ ಕಾಯಿದೆಯೆನ್ನುವುದು ಅತ್ಯಂತ ಕರಾಳ ಶಾಸನ. ಅದು

ನಮ್ಮ ದೇಶವನ್ನು ಮುಖ್ಯವಾಗಿ ಪತ್ರಕರ್ತರನ್ನು ನರವಿಲ್ಲದವರನ್ನಾಗಿ ಮಾಡಿದೆ. ಪತ್ರಕರ್ತರು ಈ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ನೇರವಾಗಿ ಬರೆಯುವ ಬದಲು ಸುತ್ತಿ ಬಳಸಿ ಬರೆಯತೊಡಗಿದ್ದಾರೆ ಇಡೀ ದೇಶದಲ್ಲಿ ಇದು ಸಾಂಕ್ರಾಮಿಕ ರೋಗವಾಗಿ ಹಬ್ಬುತ್ತಿದೆ. ನಮ್ಮ ಪತ್ರಿಕೆಗಳು ಶೇಕಡಾ 99ರಷ್ಟು ಅನಗತ್ಯ, ಅಮುಖ್ಯ ಸುದ್ದಿ ಗಳಿಂದಲೇ ತುಂಬಿಹೋಗಿ ಒಂದು ಪುಟಮಾತ್ರ ಒಳ್ಳೆಯ ಅಂಶವನ್ನು ಪ್ರಕಟಿಸುವ ಪರಿಸ್ಥಿತಿ ಬರಬಾರದು. ನಮ್ಮ ಪತ್ರಿಕೆಗಳು ಅಸಂಬದ್ಧ ನೂರು ಪುಟಗಳ ಬದಲು ಉಪಯುಕ್ತವಾದ ಸದಭಿರುಚಿಯ ಸಾಹಿತ್ಯದ ಒಂದೇ ಒಂದು ಪುಟ ಹೊಂದಿದ್ದರೂ ಸಾಕು.

ಗಾಂಧೀಜಿ ಅವರ ಈ ಹೇಳಿಕೆಯನ್ನು ಇಂದಿನ ಸಂದರ್ಭದಲ್ಲಿ ವಿವೇಚಿಸಬೇಕು. ಅಮೇರಿಕದಂಥ ದೇಶಗಳಲ್ಲಿ ದಿನಪತ್ರಿಕೆಯೇ 250-300 ಪುಟಗಳಿರುತ್ತವೆ. ಅವುಗಳನ್ನು ಮಾರಾಟಮಾಡಿದರೆ ಪತ್ರಿಕೆಯ ದರಕ್ಕಿಂತ ಹೆಚ್ಚು ದುಡ್ಡು ಬರುತ್ತದೆ. ಭಾರತದಲ್ಲೂ ಕೋವಿದ್ ಬರುವ ಮೊದಲು ಪತ್ರಿಕೆಗಳ ಪುಟಗಳ ಸಂಖ್ಯೆ ಹೆಚ್ಚುತ್ತಲೇ ಹೋಗಿತ್ತು. ಅದರಲ್ಲೂ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆ ಅತೀ ಹೆಚ್ಚು ಪುಟಗಳನ್ನು ಹೊಂದಿರುತ್ತಿತ್ತು. ಆದರೆ ಪುಟಗಳು ಹೆಚ್ಚಿದಷ್ಟೂ ಪತ್ರಿಕೆಗಳಲ್ಲಿ ಕಸವೇ ಹೆಚ್ಚು. ಬೇಡದ ವಿಷಯಗಳೇ ತುಂಬಿರುತ್ತವೆ. 24 ಗಂಟೆಯ ವಾಹಿನಿಗಳು ಹೇಳಿದ್ದನ್ನೇ ಹೇಳುತ್ತಾ ಹೋಗುವ ಹಾಗೆ, ಪತ್ರಿಕೆಗಳು ಪುಟ ತುಂಬಿಸಲಿಕ್ಕೆ, ಮಾರಾಟ ಹೆಚ್ಚಿಸಲಿಕ್ಕೆ ಸುದ್ದಿಯಾಗಬಾರದ ವಿಷಯಗಳನ್ನೆಲ್ಲಾ ತುಂಬುತ್ತಾ ಹೋಗುತ್ತಾರೆ. ಈ ಕಸವನ್ನು ಪ್ರತಿನಿತ್ಯ ಒಳಸೇರಿಸುವ ಗ್ರಹಚಾರ ಓದುಗರದ್ದು. ಅದಕ್ಕೇ ಗಾಂಧೀಜಿ ಹೇಳುವುದು- 'ನೂರು ಪುಟದಲ್ಲಿ ಒಂದು ಪುಟಮಾತ್ರ ಉಪಯುಕ್ತವಾಗುವುದಾದರೆ ಒಂದೇ ಒಂದು ಪುಟ ಹೊಂದಿದ್ದರೂ ಸಾಕು' ಅಂತ. ಆದರೆ ನೂರು ಪುಟಗಳು ವ್ಯರ್ಥವೆನ್ನುವಂತಿಲ್ಲ. ನಮಗೆ ಬೇಡವೆನಿಸಿದ್ದು ಇನ್ಯಾರಿಗೋ ಬೇಕು ಎನಿಸಬಹುದು. ಕೆಲವರಿಗೆ ಜನಪ್ರಿಯ ಸರಕುಗಳೇ ಬೇಕೆಂದರೆ ಏನುಮಾಡುತ್ತೀರಿ?

ಇದು ಆಯಾ ಕಾಲದಲ್ಲಿ ಬದಲಾದ ಅಭಿರುಚಿಯನ್ನು ತಿಳಿಸುತ್ತದೆ. ನೂರು ಪುಟಗಳಲ್ಲಿ ನಮಗೆ ಒಂದೇ ಪುಟಸಾಕು ಎನಿಸಿದರೂ, ಉಳಿದ 99 ಪುಟಗಳೇ ಬೇಕು ಎನ್ನುವ ಓದುಗರೂ ಜಾಹೀರಾತುದಾರರೂ ಇರಬಹುದು. ಪತ್ರಿಕೆ ಎಲ್ಲರ ನಿರೀಕ್ಷೆಗಳನ್ನೂ ಪೂರೈಸಬೇಕಾಗುತ್ತದೆ. ಒಳಗೊಳ್ಳುವಿಕೆಯ ಮಂತ್ರವನ್ನು ಪಠಿಸಬೇಕಾಗುತ್ತದೆ. ಇದರಲ್ಲಿ ಪತ್ರಿಕೆಯ ಅಸ್ತಿತ್ವದ ಪ್ರಶ್ನೆಯೇ ಇದೆ. ಯಾಕೆಂದರೆ ಒಂದೆ ಪುಟ ಪ್ರಕಟಿಸುವ ಪತ್ರಿಕೆ ಮರುದಿವಸ ಬಾಗಿಲು ಮುಚ್ಚಿಕೊಂಡು ಹೋಗಬೇಕಾಗುತ್ತದೆ ಎನ್ನುವುದು ಇಂದಿನ ಕಾಲದ ವಾಸ್ತವ. ಪತ್ರಕರ್ತರು ಮತ್ತು ಸಂಪಾದಕರುಗಳ ಬಗ್ಗೆ ಗಾಂಧೀಜಿ ವ್ಯಕ್ತಪಡಿಸುವ ಸಾತ್ವಿಕ ಆಕ್ರೋಶ ಅರ್ಥವಾಗುವಂತದ್ದು.

ಗಾಂಧಿ ಎಂದೂ ಹೇಡಿಯಲ್ಲ. ತಮ್ಮ ಸಾತ್ವಿಕತೆಯಿಂದ ಜಗತ್ತನ್ನು ಅಲುಗಾಡಿಸಬಹುದು ಎಂದು ತೋರಿಸಿಕೊಟ್ಟವರು. ಆದರೆ ಅನಗತ್ಯವಾಗಿ ಆಳರಸರ ಹಾಗು ಜಾಹೀರಾತುದಾರರ ವಿರೋಧ ಕಟ್ಟಿಕೊಳ್ಳುವುದು ಯಾರಿಗೂ ಬೇಡದ್ದು. ಇದು 'ಐ ಎಮ್ ಓಕೆ, ಯು ಆರ್ ಓಕೆ' ಎಂಬ ನೀತಿ. ಜಗಳ ಗಂಟ ಗಾಂಧಿ ಈ ನೀತಿಯ ವಿರೋಧಿ. ಅದಕ್ಕೇ ಸರ್ಕಾರಕ್ಕೆ ಹೆದರಿ ತನ್ನ ಭಾಷಣಗಳನ್ನು ಕಿರಿದಾಗಿ ಪ್ರಕಟಿಸಿದ ಹಾಗು ಮುಖ್ಯ ಹೇಳಿಕೆಗಳನ್ನು ಮರೆಮಾಚಿದ ಪತ್ರಿಕೆಗಳ ಮೇಲೆ ಅವರಿಗೆ ಕೋಪ. ಆದರೆ ಗಾಂಧೀವಾದವನ್ನೇ ಮುಂದುವರಿಸಿದರೂ ಯಾವುದನ್ನು ಪ್ರಕಟಿಸಬೇಕು ಯಾವುದನ್ನು ಪ್ರಕಟಿಸಬಾರದು ಎಂಬುದು ಸಂಪಾದಕನ ಹಕ್ಕು. ಅದು ಕೂಡಾ ಪತ್ರಿಕಾ ಸ್ವಾತಂತ್ರ್ಯದ ಭಾಗವೇ ಅಲ್ಲವೇ? ಅಂದಮೇಲೆ ಸಮಕಾಲೀನ ಸಂಪಾದಕರುಗಳ ಮೇಲೆ ಗಾಂಧಿ ಅವರ ಟೀಕೆ ಚರ್ಚಾರ್ಹವಾದುದು.



ಮಿ!! ಸಂಭಾವಿತರು ಎಂಬ ಬಿರುದು.

ಗಾಂಧೀಜಿ ಜೈಲಿನಲ್ಲಿದ್ದಾಗ ನಡೆದ ಘಟನೆ. ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮೋತಿಲಾಲ ನೆಹರೂ ಅವರ ಪತ್ನಿ ಸ್ವರೂಪ ರಾಣಿ ಅವರು ಪೊಲೀಸರ ಲಾಠೀ ಚಾರ್ಜಿನಲ್ಲಿ ಗಾಯಗೊಳ್ಳುತ್ತಾರೆ. ಸುದ್ದಿ ತಿಳಿದ ಗಾಂಧೀಜಿ ಸರ್ದಾರ ವಲ್ಲಭಭಾಯಿ ಪಟೇಲ ಹಾಗೂ ಮಹಾದೇವ ದೇಸಾಯಿ, ಅವರನ್ನು ಕರೆದು ಹೇಳಿದ ಮಾತು ಆಶ್ಚರ್ಯ ಕರವಾಗಿದೆ. 'ಲಾಲಾಜಿ ಅವರನ್ನು ಪೋಲಿಸರು ಉದ್ದೇಶಪೂರ್ವಕವಾಗಿಯೇನೂ ಹೊಡೆದಿರಲಿಲ್ಲ. ಆದರೆ ಇಡೀ ದೇಶ ಲಜಪತ್ ರಾಯ್ ಅವರ ಮೇಲಿನ ಹಲ್ಲೆಯನ್ನು ಖಂಡಿಸಿತ್ತು. ಈಗ ಜವಹರ್ ಲಾಲ್ ಅವರ ತಾಯಿಯ ಮೇಲೆ

ಪೊಲೀಸರು ಉದ್ದೇಶಪೂರ್ವಕವಾಗಿಯೇ ಹಲ್ಲೆ ನಡೆಸಿರುವಂತಿದೆ. ಆದರೆ ಎಲ್ಲಿಯೂ ಸರಿಯಾದ ಪ್ರತಿಭಟನೆ ನಡೆದಂತೆ ಕಾಣುತ್ತಿಲ್ಲ. ಪಂಜಾಬಿನ 'ಲೀಡರ್' ಪತ್ರಿಕೆ ಈ ಬಗ್ಗೆ ಬರೆದಿಲ್ಲವೇ? ಯಾಕೆಂದರೆ ಲಾಲಾ ಲಜಪತ್ ರಾಯ್ ಗಾಯಗೊಂಡಾಗ ಪಂಜಾಬಿನ 'ಲೀಡರ್' ಪತ್ರಿಕೆ ಪ್ರತಿಭಟನೆಯ ಮುಂಚೂಣಿಯಲ್ಲಿತ್ತು. ಆಗ ಪಟೇಲರು ಹೇಳಿದರು: 'ಲೀಡರ್' ಸಂಪಾದಕೀಯ ಬರೆದಿದೆ. ಆದರೆ ಅದರಲ್ಲಿ ಜೀವವಿಲ್ಲ. ಗಾಂಧೀಜಿ ಅದನ್ನು ತರಿಸಿ ಓದಿದರು.ಅವರಿಗೆ ಬಹಳ ಭ್ರಮನಿರಸನವಾಯಿತು. 'ಲೀಡರ್' ಪತ್ರಿಕೆ ಗಂಭೀರ ಪತ್ರಿಕೆ ಅಂತ ಇಂದು ಯಾರೋ ಹೇಳಿದ್ದರು. ಆ ಪತ್ರಿಕೆಯ ಸಂಪಾದಕರಿಗೆ 'ಸಮಚಿತ್ತದ ಸಂಪಾದಕರು' ಎಂಬ ಬಿರುದು ನೀಡಬಹುದು!

ಪತ್ರಿಕೆಯೊಂದು ಘರ್ಜಿಸಬೇಕಾದ ಕಡೆ ಕುಂಯ್ ಕುಂಯ್ ಎಂದರೆ ಅವರಿಗೆ ಬರುತ್ತಿದ್ದ ಸಿಟ್ಟನ್ನು ಈ ಹೇಳಿಕೆಯಿಂದ ಅರ್ಥಮಾಡಿಕೊಳ್ಳಬಹುದು. ಗಾಂಧೀಜಿ ಅವರ ವಿಶೇಷವೇ ಅದು. ಅನಗತ್ಯವಾಗಿ ಕೋಪಿಸಿಕೊಂಡು ಕೂಗಾಡುವವರಲ್ಲ. ಆದರೆ ಅನಗತ್ಯವಾಗಿ ಬಾಗುವುದೂ ಅವರ ಜಾಯಮಾನವಲ್ಲ. ಖಡಕ್ ಆಗಿ ಹೇಳಬೇಕಾದ ಕಡೆ ಯಾವ ಮುಲಾಜಿಲ್ಲದೇ, ಗೆಳೆಯರೂ ಆಪ್ತರು ಎಂದು ನೋಡದೇ, ಏಟೊಂದು ತುಂಡೆರಡು ಎಂಬಂತೆ ಅವರ ಮಾತು ಹಾಗೂ ಬರಹವಾಗಿತ್ತು. ಅವರ ಬರಹ ನೇರ, ಸರಳ, ಹಾಗೆಯೇ ಖಂಡತುಂವಾಗಿ ಇರುತ್ತಿತ್ತು. ಸುತ್ತಿ ಬಳಸಿ ಹೇಳುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ, ಅದಕ್ಕೇ ಅವರು 'ಲೀಡರ್' ಪತ್ರಿಕೆಯನ್ನು ಕುಟುಕಿದ್ದು.

ಗಾಂಧಿ ಅವರ ಶೈಲಿ ಸರಳ, ಆದರೆ ನೇರ.ಸಣ್ಣ ಸಣ್ಣ ವಾಕ್ಯಗಳು ಅವರ ಬರವಣಿಗೆಯ ವಿಶೇಷ. ಇವರು ತನ್ನ ಮನಸ್ಸು ಹೇಳಬೇಕಾದ ಗುರಿ ಮುಟ್ಟುವ ಶಬ್ದಗಳನ್ನೇ ಆಯ್ದು ಪೋಣಿಸುತ್ತಿದ್ದರು.ಅಲ್ಲಿ ಸಂದೇಹಕ್ಕೆ, ಗೊಂದಲಕ್ಕೆ, ಆಸ್ಪದವೇ ಇರಲಿಲ್ಲ. ಯಾರೇ ಪತ್ರ ಬರೆಯಲಿ, ನಿಯತ್ತಾಗಿ ಉತ್ತರಿಸುವುದು ಗಾಂಧೀಜಿ ಅವರ ಬದ್ಧತೆಯಾಗಿತ್ತು.




ಪಂಜರದ ಹಕ್ಕಿಯ ಉಲಿತ: ನೋವೋ ನಲಿವೋ?

ಕವಿ ರವೀಂದ್ರನಾಥ ಟ್ಯಾಗೋರ್ ಹಾಗೂ ಗಾಂಧಿ ಅವರ ನಡುವೆ ನಡೆದ ವೈಚಾರಿಕ ಸಂಘರ್ಷವೊಂದು ಚಾರಿತ್ರಿಕ. ಗಾಂಧೀಜಿ ಅಸಹಕಾರ ಚಳವಳಿಯನ್ನು ಹುಟ್ಟುಹಾಕಿದಾಗ ಟ್ಯಾಗೋರ್ ಅದನ್ನು ವಿರೋಧಿಸಿದರು. ಭಾರತದ ಸ್ವಾತಂತ್ರ್ಯ ಹೋರಾಟದಂಥ ಮಹತ್ವದ ವಿಷಯ ಒಬ್ಬ ವ್ಯಕ್ತಿಯ ನಿರ್ಣಯಗಳಿಗೆ ದಾಸನಾಗಬಾರದು. ದೇಶದ ಎಲ್ಲ ನೈಜ ಶಕ್ತಿಗಳು ಈ ಬಗ್ಗೆ ಯೋಚಿಸಬೇಕು. ಅರ್ಥ ಶಾಸ್ತ್ರಜ್ಞರು ದೇಶದ ಬಗ್ಗೆ ಚಿಂತಿಸಬೇಕು. ಶಿಕ್ಷಕರು ಕಲಿಸಬೇಕು. ಕೆಲಸಗಾರರು ಕೆಲಸಮಾಡಬೇಕು. (ಗಾಂಧೀಜಿ ಅದನ್ನೆಲ್ಲ ಬಿಟ್ಟು ಅಸಹಕಾರ

ಚಳುವಳಿ ಮಾಡುವಂತೆ ಕರೆನೀಡಿದ್ದರಲ್ಲ?) ಇದನ್ನು ಟ್ಯಾಗೋರ್ ಬರೆದುದು 'ಮಾಡ್ರನ್ ರಿವ್ಯೂ' ಎಂಬ ಪತ್ರಿಕೆಯಲ್ಲಿ. ಅದಕ್ಕೆ ಉತ್ತರವಾಗಿ 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ ಬರೆಯುತ್ತಾರೆ: "ಕವಿ ಹೇಳುವಂತೆ ಕುರುಡು ಹಿಂಬಾಲಿಸುವಿಕೆ ದೇಶದಲ್ಲಿ ಇದೆಯೆಂದು ನನಗನ್ನಿಸುವುದಿಲ್ಲ. ಕವಿವರ್ಯರು ನಾಳೆ ಬೆಳಿಗ್ಗೆ ಪಂಜರದಲ್ಲಿರುವ ಪಕ್ಷಿಗಳು ಚೆನ್ನಾಗಿ ತಿಂದು, ಆರಾಮವಾಗಿ ಮಲಗಿ ಎದ್ದು, ಬೆಳಗಿನ ಕಲರವ ಮಾಡುವುದನ್ನು ತೋರಿಸುತ್ತಾರೆ. ಅದರೆ ನಾನು ಕಾಣುವ ಹಕ್ಕಿಗಳು ಉಪವಾಸ ಮಾಡಿ, ಮರುದಿನ ಬೆಳಿಗ್ಗೆ ರೆಕ್ಕೆ ಆಡಿಸುವುದಕ್ಕೂ ಶಕ್ತಿ ಇಲ್ಲದವುಗಳು. ನಾನು ಕಷ್ಟಪಡುತ್ತಿರುವ ರೋಗಿಗಳನ್ನು ಕಬೀರರ ದೋಹೆಗಳಿಂದ ಸಮಾಧಾನಪಡಿಸಲು ಸಾಧ್ಯವಿಲ್ಲ ಎಂದು ಅರಿತಿದ್ದೇನೆ. ಹಸಿವಿನಿಂದ ಬಳಲುತ್ತಿರುವ ಮಿಲಿಯಾಂತರ ಜನ ಕೇಳುವುದು ಒಂದೇ ಕವಿತೆ. ಅದೆಂದರೆ ಆಹಾರ. ಕವಿತೆ ಅದನ್ನು ಕೊಡಲಾರದು. ಅವರೇ ಅದನ್ನು ಗಳಿಸಿಕೊಳಬೇಕು ಮತ್ತು ಆ ಗಳಿಕೆಯಲ್ಲಿ ಅವರ ಬೆವರು ಹರಿದಿರಬೇಕು"

ಈ ವಾಕ್ಯಗಳಲ್ಲಿ ಗಾಂಧಿ ಎಷ್ಟು ವಾಸ್ತವವಾದಿ ಎಂಬುದು ಅರ್ಥವಾಗುತ್ತದೆ. ಸ್ವಾತಂತ್ರ್ಯದ ಬಗ್ಗೆ ಮಾತನಾಡುವಾಗ ಮತ್ತೆ ಮತ್ತೆ ಅದು ಬೆಳ್ಳಿಯ ತಟ್ಟೆಯಲ್ಲಿ ಇಟ್ಟು ಕೊಟ್ಟುದಾಗಿರಬಾರದು, ಕಷ್ಟಪಟ್ಟು ಗಳಿಸಿದ್ದಾಗಿರಬೇಕು. ಬೆವರು ಹರಿಸಿ ಗಳಿಸಿದರೆ ಮಾತ್ರ ಸ್ವಾತಂತ್ರ್ಯದ ಮಹತ್ವ ಅರ್ಥವಾಗುತ್ತದೆ ಎಂದು ಹೇಳುತ್ತಾರೆ.

ಗಾಂಧೀಜಿ ಭಾರತೀಯರನ್ನು ಪಂಜರದೊಳಗೆ ಹಾಡುವ ಸುಂದರ ಹಕ್ಕಿಗೆ ಹೋಲಿಸಿರುವುದು ಕೂಡಾ ಗಮನಾರ್ಹವಾಗಿದೆ. ಕವಿ ರವೀಂದ್ರರಿಗೆ ಪಂಜರದೊಳಗಿರುವ ಹಕ್ಕಿಯ ಹಾಡೂ ಸುಂದರವಾಗಿ ಕೇಳುತ್ತದೆ, ಆದರೆ ಗಾಂಧೀಜಿಗೆ ಪಂಜರದೊಳಗಿನ ಹಾಡು ಕಾಡುತ್ತದೆ! ಅಂದರೆ ಇದು ಅವರವರ ಮನೋಭೂಮಿಕೆಗೆ ಸಂಬಂಧಿಸಿದ್ದು. ಕವಿ ರವೀಂದ್ರರು ಬ್ರಿಟಿಷರೊಂದಿಗೆ ನೇರಾನೇರ ಹಣಾಹಣಿಗೆ ಸಿದ್ಧರಿರಲಿಲ್ಲ. ಆದರೆ ಗಾಂಧೀಜಿ ಇನ್ನು ಪಂಜರದೊಳಿರಲು ಸಿದ್ಧರಿಲ್ಲ. ಒಬ್ಬರು ಕುರೂಪದಲ್ಲೂ ಸೌಂದರ್ಯವನ್ನು ಕಾಣುವವರು, ಇನ್ನೊಬ್ಬರು ಸೌಂದರ್ಯದಲ್ಲೂ ನೋವನ್ನು, ಕ್ರೌರ್ಯವನ್ನು ಅರ್ಥಮಾಡಿಕೊಳ್ಳಬಲ್ಲವರು! ಅವರವರ ದಾರಿ ಅವರಿಗೆ!



ಗಾಂಧೀಜಿ ಅವರ ಚಾರಿತ್ರಿಕ ನ್ಯಾಯ ವಿಚಾರಣೆ

'ಯಂಗ್ ಇಂಡಿಯಾ' ದಲ್ಲಿ ಬರೆದ ಮೂರು ಲೇಖನಗಳಿಗಾಗಿ ಗಾಂಧೀಜಿ ಅವರನ್ನು ಮಾರ್ಚ 1922 ರಲ್ಲಿ ಆರುವರ್ಷಗಳ ಸೆರೆಮನೆ ವಾಸದ ಶಿಕ್ಷೆಗೆ ಗುರಿಮಾಡಲಾಯಿತು. ಕೊನೆಗೆ ಗಾಂಧಿ ಸೆರೆಮನೆಯಲ್ಲಿ ಇದ್ದರೇ ಹೆಚ್ಚು ಅಪಾಯಕಾರಿ ಎಂಬುದನ್ನು ಅರಿತ ಬ್ರಿಟೀಷ್ ಸರ್ಕಾರ ಎರಡು ವರ್ಷಕ್ಕೆ ಅವರನ್ನು ಬಿಡುಗಡೆ ಮಾಡಿತು ಎಂಬುದು ಬೇರೆ ವಿಚಾರ. ಇವರ ಜೊತೆ 'ಯಂಗ್ ಇಂಡಿಯಾ' ಪ್ರಕಾಶಕ ಶಂಕರಲಾಲ್ ಬ್ಯಾಂಕರ್ ಕೂಡಾ ಶಿಕ್ಷೆಗೆ ಒಳಗಾಗುತ್ತಾರೆ. ಇವರಿಗೆ ಶಿಕ್ಷೆ ವಿಧಿಸಲಾದ ಮೂರು ಲೇಖನಗಳೆಂದರೆ

1) Tampering with Loyalty ನಿಷ್ಠೆಯೊಂದಿಗೆ ಆಟವಾಡುವುದು.

2) A puzzle and its solution ಒಂದು ಒಗಟು ಮತ್ತು ಅದಕ್ಕೆ ಉತ್ತರಿಸಬಹುದು, ಪರಿಹಾರ ಮಾಡಿ.


3) Shaking the mane ಸಿಂಹವನ್ನು ಬಡಿದೆಬ್ಬಿಸುವುದು.

ಮೊದಲ ಲೇಖನದಲ್ಲಿ ಗಾಂಧೀಜಿ ಬ್ರಿಟಿಷರು ವ್ಯಾಖ್ಯಾನಿಸುವ ದೇಶದ್ರೋಹವನ್ನು ಬೆಂಬಲಿಸುವುದು, ಹಾಗೂ ಅದರಆಧಾರದಲ್ಲಿ ಉಂಟಾಗುವ ಪರಿಣಾಮಗಳಿಗೆ ತನ್ನ ಕೆಲಸ ಎಂಬುದಾಗಿ ಬಹಿರಂಗವಾಗಿ ಬ್ರಿಟೀಷರ ವಿರುದ್ಧ ಸಾರಿದ್ದರು.

ಎರಡನೇ ಲೇಖನದಲ್ಲಿ ನಾವು ಈ ಸರ್ಕಾರವನ್ನು ಕಿತ್ತೊಗೆಯಬೇಕು, ಜನರ ಭಾವನೆಗಳಿಗೆ ಈ ಸರ್ಕಾರ ತಲೆಬಾಗುವಂತೆ ಮಾಡಬೇಕು ಎಂಬ ಕರೆ ನೀಡಿದ್ದರು. ಮೂರನೆಯ ಲೇಖನದಲ್ಲಿ ಸಿಂಹವನ್ನು ಬಡಿದೆಬ್ಬಿಸುವುದು ಅಪಾಯಕಾರಿ ಎಂದು ಬ್ರಿಟಿಷ್ ಸರ್ಕಾರವನ್ನು ಎಚ್ಚರಿಸಿದ್ದರು. ಗಾಂಧೀಜಿ ನ್ಯಾಯಾಲಯದಲ್ಲಿ ನ್ಯಾಯಮೂರ್ತಿ ಬ್ರೂಮ್ ಫೀಲ್ಡ್ ಅವರೆದುರು ತಮ್ಮ ತಪ್ಪನ್ನು ಸಮರ್ಥಿಸಿಕೊಂಡರು ಮಾತ್ರವಲ್ಲ ನ್ಯಾಯಾಲಯ ನೀಡುವ ಶಿಕ್ಷೆಗೆ ಸಿದ್ಧವಿರುವುದಾಗಿ ನುಡಿದರು. ನ್ಯಾಯಾಧೀಶರು ಬಾಲಗಂಗಾಧರ್ ಟಿಳಕರಿಗೆ ನೀಡಲಾಗಿದ್ದ ಅರು ವರ್ಷಗಳ ಸೆರೆ ವಾಸದ ಆಧಾರದಲ್ಲಿ ಗಾಂಧೀಜಿ ಅವರಿಗೂ ಅದೇ ಶಿಕ್ಷೆ ಘೋಷಿಸಿದರು.

ಇಲ್ಲಿ ಗಮನಿಸಬೇಕಾದುದು, ಗಾಂಧಿ ಅವರ ನಿರ್ಭಿಡೆಯ ನಡೆ. ಬ್ರಿಟೀಷರ ವಿರುದ್ಧ ಬರೆಯುವುದೇ ದೇಶದ್ರೋಹವಾಗುವುದಾದರೆ ತಾನು ದೇಶದ್ರೋಹಿಯೇ ಎಂಬುದು ಅವರ ನಿಲುವು. ಬಂದಿದ್ದು ಬರಲಿ, ಎದುರಿಸುತ್ತೇನೆ ಎಂಬ ಖಡಕ್ ಸಂದೇಶ. ಗಾಂಧಿ ತಮ್ಮನ್ನು ವಿಚಾರಿಸಿದ ನ್ಯಾಯಾಧೀಶರಿಗೆ ಹೇಳಿದ ಮಾತುಗಳು ಚಾರಿತ್ರಿಕ.

ನ್ಯಾಯಾಧೀಶರನ್ನು ಉದ್ದೇಶಿಸಿ 'ನಾನು ನಿರಪರಾಧಿ ಎಂದು ನಿಮ್ಮ ಒಳ ಮನಸ್ಸು ಹೇಳುತ್ತಿದ್ದರೂ ಕರ್ತವ್ಯದ ಭಾಗವಾಗಿ 'ಅನ್ಯಾಯದ' ನ್ಯಾಯ ನೀಡುವ ಅನಿವಾರ್ಯತೆಗೆ ನೀವು ಸಿಕ್ಕಿದ್ದೇ ಹೌದಾದರೆ, ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬನ್ನಿ.' ಅವರು ನ್ಯಾಯಾಧೀಶರಿಗೆ ಹೇಳಿದ್ದು "ನಾನು ನಿಮ್ಮಿಂದ ವಿನಾಯಿತಿಯನ್ನು ಕೇಳುತ್ತಿಲ್ಲ. ನಿಮಗೆ ಯಾವುದು ಅಪರಾಧವೆಂದು ಕಾಣುತ್ತದೋ ನನಗೆ ಅದು ನಾಗರಿಕನ ಅತ್ಯುಚ್ಚ ಕರ್ತವ್ಯವಾಗಿ ಕಾಣುತ್ತದೆ". ಆರು ವರ್ಷಗಳ ಸೆರೆ ವಾಸದ ಶಿಕ್ಷೆಯನ್ನು ವಿಧಿಸಿದ ನ್ಯಾಯಾಧೀಶ ಒಂದು ಮಾತು ಹೇಳುತ್ತಾರೆ. 'ಸರ್ಕಾರ ಯಾವತ್ತು ನಿಮ್ಮನ್ನು ಸೆರೆಮನೆಯಿಂದ ಬಿಡುಗಡೆ ಗೊಳಿಸುವುದೋ, ಅಂದು ನನ್ನಷ್ಟು ಖುಷಿ ಪಡುವವರು ಯಾರೂ ಇರುವುದಿಲ್ಲ.' ನ್ಯಾಯ ಕಲಾಪದಲ್ಲಿ ಗಾಂಧಿಯೇ ಗೆದ್ದವರು ಎಂಬುದಾಗಿ ಎಲ್ಲರೂ ಅಭಿಪ್ರಾಯಪಡುತ್ತಾರೆ.



ಸಂದೇಶ ತಂದ ಫಜೀತಿ

ಮೋತಿಲಾಲ್ ಘೋಷ್ ಅವರು ಮಾಲೀಕರಾಗಿದ್ದ 'ಇಂಡಿಪೆಂಡೆಂಟ್' ಪತ್ರಿಕೆಗೆ ಅದರ ಸಂಪಾದಕ ಸಯ್ಯದ್ ಹುಸೇನ್ ಅವರು ಫೆಬ್ರುವರಿ 9, 1919ರಂದು ಪತ್ರಿಕೆಯ ಆರಂಭೋತ್ಸವಕ್ಕೆ ಒಂದು ಸಂದೇಶ ನೀಡುವಂತೆ ಗಾಂಧೀಜಿ ಅವರನ್ನು ಕೋರುತ್ತಾರೆ. ಆಗ ಗಾಂಧೀಜಿ ಕಳಿಸಿದ ಸಂದೇಶ ಹೀಗಿದೆ.

"ನಿಮಗೆ ಶುಭಾಶಯಗಳನ್ನು ಕೋರುತ್ತಾ ನಿಮ್ಮ ಬರಹಗಳು ನೀವು ಪತ್ರಿಕೆಗೆ ಇಟ್ಟ ಹೆಸರಿಗೂ ಭೂಷಣವಾಗಿರುವುದೆಂದು ಆಶಿಸುತ್ತೇನೆ. ಅಲ್ಲದೇ ನಿಮ್ಮ ಪತ್ರಿಕೆಯಲ್ಲಿ ಕಠಿಣವಾಗಿ ಸತ್ಯಕ್ಕೆ

ಬದ್ಧರಾಗಿರುವುದಾಗಿಯೂ, ಸ್ವಾತಂತ್ರ್ಯ ದೊಟ್ಟಿಗೆ ಸ್ವನಿಗ್ರಹವನ್ನು ಪಾಲಿಸುವುದಾಗಿ ನಾನು ಆಶಿಸುತ್ತೇನೆ. ಮತ್ತೆ ಮತ್ತೆ ನಿಮ್ಮ ಪತ್ರಿಕೆಯಲ್ಲಿ ಸತ್ಯದ ಬದಲು ಕಲ್ಪನೆಯನ್ನೂ, ಸರಳವಿವೇಕ ಇರಬೇಕಾದೆಡೆ ಚಾಣಾಕ್ಷ ಅಸಂಬದ್ಧ ವಾಕ್ಪಟುತ್ವವನ್ನೂ ಕಾಣಬಾರದೆಂದು ಆಶಿಸುತ್ತೇನೆ. ನೀವು 'ಇಂಡಿಪೆಂಡೆಂಟ್' ಪತ್ರಿಕೆಯನ್ನು ನಾನು ನಿಮ್ಮ ಗಮನಕ್ಕೆ ತಂದಿರುವ ಹಾಗೆ ತಪ್ಪುಗಳನ್ನು ಮಾಡದೇ ಈ ನೆಲದ ಜನರ ಶಕ್ತಿಯಾಗಿ ಹಾಗೂ ಜನರ ಶಿಕ್ಷಣದ ಆಯುಧವಾಗಿ ಮಾಡುತ್ತೀರಿ ಎಂದು ನಂಬುತ್ತೇನೆ".

ತಮಾಷೆಯೂ ವಿಷಾದನೀಯವೂ ಆದ ಸಂಗತಿಯೆಂದರೆ ಗಾಂಧಿ ಅವರಿಂದ ಸಂದೇಶ ಕೋರಿದ ಸಂಪಾದಕರಿಗೆ ಅವರ ಸಂದೇಶವನ್ನು ಮುದ್ರಿಸುವ ಧೈರ್ಯವಾಗಲಿಲ್ಲ! ಮಾತ್ರವಲ್ಲ ಎರಡೇ ವರ್ಷಗಳಲ್ಲಿ 'ಇಂಡಿಪೆಂಡೆಂಟ್' ಪತ್ರಿಕೆ ಹಣವಿಲ್ಲದೇ ಮುಚ್ಚುವ ಸ್ಥಿತಿ ತಲುಪಿತ್ತು. ಆಗ ಅದರ ಅಧ್ವರ್ಯು ಮೋತಿಲಾಲ ನೆಹರೂ ಅವರು ಗಾಂಧೀಜಿ ಅವರ ಮೊರೆ ಹೋದರು. ಆ ಹೊತ್ತಿಗೆ ಒಂದು ವಾರ ಮೊದಲು ಎಂಆರ್ ಜಯಕರ್ ಅವರು ಖಾದೀ ಪ್ರಚಾರಕ್ಕಾಗಿ 25 ಸಾವಿರ ರೂಪಾಯಿಗಳ ಒಂದು ಚೆಕ್ಕನ್ನು ಗಾಂಧೀಜಿಗೆ ನೀಡಿದ್ದರು. ಒಂದುದಿನ ಮೋತಿಲಾಲ ನೆಹರೂ ಅವರು ಜಯಕರ್ ಅವರ ಮನೆಗೆ ತೆರಳಿ ನಿಮ್ಮ ಆಕ್ಷೇಪವಿಲ್ಲದಿದ್ದರೆ ನೀವು ನೀಡಿದ ಹಣವನ್ನು 'ಇಂಡಿಪೆಂಡೆಂಟ್' ಪತ್ರಿಕೆಯನ್ನು ಬದುಕಿಸಲು ಬಳಸಲು ಕೊಡುವುದಾಗಿ ಗಾಂಧೀಜಿ ಹೇಳಿದರೆಂದು ತಿಳಿಸಿದರು. ಆಗ ಅವರು 'ಗಾಂಧೀಜಿಗೆ ಕೊಡುಗೆಯಾಗಿ ನೀಡಿದ್ದಾಗಿದೆ. ಅದನ್ನು ಯಾವುದಕ್ಕೆ ಬಳಸಬೇಕೆಂಬುದು ಅವರಿಗೆ ಬಿಟ್ಟ ವಿಚಾರ' ಎಂದು ನಿರ್ಭಾವುಕರಾಗಿ ನುಡಿಯುತ್ತಾರೆ. ಆ ಪ್ರಕಾರ ಜಯಕರ್ ಕೊಟ್ಟ 25 ಸಾವಿರ ರೂಪಾಯಿಗಳನ್ನು ಗಾಂಧೀಜಿ 'ಇಂಡಿಪೆಂಡೆಂಟ್' ಪತ್ರಿಕೆಯ ಹಸಿವು ನೀಗಸಲು ನೀಡುತ್ತಾರೆ. ಗಾಂಧಿ ಅವರ ಆಪ್ತ ಸಖ ಮಹದೇವ ದೇಸಾಯಿ ಬರೆಯುವಂತೆ 'ಇಂಡಿಪೆಂಡೆಂಟ್' ಪತ್ರಿಕೆಯ

ದಾರಿದ್ರ್ಯ ಎಷ್ಟು ಕಠೋರವಾಗಿತ್ತೆಂದರೆ ಗಾಂಧೀಜಿ ಅವರ ಸಹಾಯ ಕೂಡಾ ಆ ಪತ್ರಿಕೆಯನ್ನು ಬದುಕಿಸಲಾಗದೇ ಆನೆಗೆ ಅರೆಕಾಸಿನ ಮಜ್ಜಿಗೆ ಆದಂತಾಯಿತು.

ಈ ಘಟನೆಯಲ್ಲಿ ಸುವ್ಯಕ್ತವಾಗುವುದು ಗಾಂಧಿ ಅವರ ವ್ಯಕ್ತಿತ್ವ. ದುಡ್ಡಿನ ಬಗ್ಗೆ ಅವರ ಅನಾಸಕ್ತಿ. ಸ್ವತಃ ಮೂರು ಪತ್ರಿಕೆಗಳ ಸಂಪಾದಕರಾಗಿದ್ದ ಗಾಂಧೀಜಿ, ಈ ಹಣವನ್ನು ತಮ್ಮ ಪತ್ರಿಕೆಗಳಿಗಾಗಿ ಇರಿಸಿಕೊಳ್ಳಬಹುದಿತ್ತು. ಖಾದಿ ಆಂದೋಲನಕ್ಕಾಗಿ ಬಳಸಬಹುದಿತ್ತು. ಆದರೆ ಚೆಕ್ಕನ್ನು ಕೈಯಲ್ಲಿ ಕೂಡಾ ಮುಟ್ಟದೇ, ಅದಕ್ಕಾಗಿ ಆಸೆ ಪಡದೇ ಅದರ ಅಗತ್ಯವಿದ್ದ 'ಇಂಡಿಪೆಂಡೆಂಟ್' ಪತ್ರಿಕೆಗೆ ದಾಟಿಸಿಬಿಟ್ಟರು.

ಆದರೆ ಆಶ್ಚರ್ಯವಾಗುವುದೆಂದರೆ ತಮ್ಮ ಪತ್ರಿಕೆಗಳ ಬಗ್ಗೆ 'ಅವು ತಮ್ಮ ಕಾಲಮೇಲೆ ತಾವು ನಿಲ್ಲದೇ ಪರಾಧೀನವಾಗುವುದಕ್ಕಿಂತ ಅವುಗಳನ್ನು ಮುಚ್ಚುವುದೇ ವಾಸಿ' ಎಂದು ಖಡಾಖಂಡಿತವಾಗಿ ನುಡಿಯುವ ಗಾಂಧಿ, ಮೋತೀಲಾಲ ಅವರ ಪತ್ರಿಕೆಯ ಬಗ್ಗೆ ಅಷ್ಟೊಂದು ಪ್ರೀತಿ ತೋರಿದ್ದು ಯಾಕೆ? ಈ 'ಮನೆಗೆ ಮಾರಿ ಪರರಿಗೆ ಉಪಕಾರಿ' ಎಂಬ ನೀತಿ ಸಮರ್ಥನೀಯವೇ?

ಇನ್ನು 'ಇಂಡಿಪೆಂಡೆಂಟ್' ಪತ್ರಿಕೆಗೆ ಗಾಂಧಿ ಅವರು ನೀಡುವ ಸಂದೇಶವೂ ಗಮನ ಸೆಳೆಯುವಂತದ್ದು. ಅವರಲ್ಲಿ ಪ್ರಚೋದನಾತ್ಮಕ ಅಂಶಗಳಾಗಲೀ, ಸಂಪಾದಕರನ್ನು ಕಷ್ಟಕ್ಕೆ ಸಿಲುಕಿಸುವ ಯಾವ ಅಂಶಗಳು ಇರಲಿಲ್ಲ. ಸತ್ಯಕ್ಕೆ ನಿಷ್ಠರಾಗಿರಬೇಕು, ಎಂಬ ಅವರ ತಾಕೀತನ್ನು ಸಂಪಾದಕರು ಪ್ರಕಟಿಸಲು ಯಾಕೆ ಅಂಜಿದರು ಅರ್ಥವಾಗುವುದಿಲ್ಲ. ಪತ್ರಿಕೋದ್ಯಮ ಅಂಜುಬುರುಕರಿಗಲ್ಲ ಎನ್ನುತ್ತಾರೆ. ಆದರೆ ಈ ಸಂಪಾದಕರು ಬಹಳ ಅಂಜುಗುಳಿ ಎಂಬುದನ್ನು ಅವರು ಸಾಬೀತುಮಾಡಿ ತೋರಿಸಿದರು.



ಪರೋಕ್ಷ ಪರಿಣಾಮ

ಗಾಂಧೀಜಿ ಅವರ ಪತ್ರಿಕೋದ್ಯಮದ ಪ್ರಭಾವ ದೇಶಾದ್ಯಂತ ವಿಸ್ತರಿಸತೊಡಗಿದಂತೆ ದೇಶದ ಸಾರ್ವಜನಿಕ ಕ್ಷೇತ್ರದಲ್ಲಿ ಎರಡು ಬದಲಾವಣೆಗಳಾಗುವುದನ್ನು ಕಾಣುತ್ತೇವೆ. ಮೊದಲಿನದು, ಬಯಸಿಯೋ ಬಯಸದೆಯೋ ಗಾಂಧೀಜಿಯ ಶಿಷ್ಯರೆಲ್ಲಾ ಪತ್ರಿಕೆಗಳೊಂದಿಗೆ ನಿಕಟ ಸಂಬಂಧ ಇರಿಸಿಕೊಳ್ಳಬೇಕಾಗಿ ಬಂದಿದ್ದು. 1920–30ರ ಆಸುಪಾಸಿನಲ್ಲಿ ಪತ್ರಿಕೆಯನ್ನು ಹೊಂದಿರದ ಅಥವಾ ಪತ್ರಿಕೆಗಳಿಗೆ ತಮ್ಮ ಲೇಖನಿಯನ್ನು ಹರಿಬಿಡದ ಕಾಂಗ್ರೆಸ್ ನಾಯಕನೇ ಇರಲಿಲ್ಲ ಎನ್ನಬಹುದು. ಅಷ್ಟರಮಟ್ಟಿಗೆ ಕಾಂಗ್ರೆಸ್

ಸದಸ್ಯರ ಮೇಲೆ ಗಾಂಧೀಜಿ ಪ್ರಭಾವ ಅಚ್ಚೊತ್ತಿತ್ತು. ಜವಹರಲಾಲ ನೆಹರೂ, ಮೌಲಾನಾ ಅಜಾದ್, ವಲ್ಲಭಾಯಿ ಪಟೇಲ್, ಆದಿಯಾಗಿ ಎಲ್ಲ ಅನುಯಾಯಿಗಳೂ ದೇಶೀಯ ಪತ್ರಿಕೆಗಳತ್ತ ಹೊರಳಿದರು. ಒಂದೋ ತಾವೇ ಪತ್ರಿಕೆಯನ್ನು ಆರಂಭಿಸಿದರು ಅಥವಾ ಪತ್ರಿಕೆಗಳಿಗೆ ಬರೆಯತೊಡಗಿದರು. ಇವರೆಲ್ಲಾ ಬರೆಯತೊಡಗಿದ್ದು ಹೆಚ್ಚಾಗಿ ಇಂಗ್ಲಿಷ್‌ನಲ್ಲಿ ಅಲ್ಲ. ದೇಶೀಯ ಭಾಷೆಗಳಲ್ಲಿ ಎಂಬುದು ಇನ್ನೂ ಮುಖ್ಯ ವಿಚಾರ. ಗಾಂಧೀಜಿ ಅವರ ಕಾರಣದಿಂದಲೇ ದೇಶದಲ್ಲಿ ದೇಶಭಾಷಾ ಪತ್ರಿಕೋದ್ಯಮ ಬೃಹತ್ತಾಗಿ ಬೆಳೆಯಿತು. ದೇಶಭಾಷಾ ಪತ್ರಿಕೆಗಳಿಗೆ ಜೀವ ಬಂತು. ದೇಶದ ಪ್ರತಿಯೊಂದು ಪ್ರಾಂತ್ಯದಲ್ಲೂ ಸ್ಥಳೀಯ ಭಾಷಾ ಪತ್ರಿಕೋದ್ಯಮ ಚುರುಕಾಗಿ ಜನರನ್ನು ಪ್ರಚೋದಿಸಲು ಬಳಕೆಯಾಗಿ, ಕಾಂಗ್ರೆಸ್ಸಿನ ಸ್ವಾತಂತ್ರ್ಯ ಹೋರಾಟ ನೆಲಮೂಲಕ್ಕೆ ತಲುಪಿತು. ದೇಶದ ಮೂಲೆ ಮೂಲೆಯಲ್ಲೂ ಪತ್ರಿಕೆಗಳ ಪ್ರಸಾರ ಹಬ್ಬಿದ್ದು ಮಾತ್ರವಲ್ಲ, ಸ್ವಾತಂತ್ರ್ಯ ಹೋರಾಟಕ್ಕೆ ಬಲಬಂತು.

ಇದರ ಪರೋಕ್ಷ ಪರಿಣಾಮವೆಂದರೆ ಬ್ರಿಟೀಷರ ಒಡೆತನದಲ್ಲಿದ್ದ ಬಹುತೇಕ ಆಂಗ್ಲ ಪತ್ರಿಕೆಗಳು ಅಂಗಡಿ ಮುಚ್ಚಬೇಕಾಗಿ ಬಂತು. ಈವರೆಗೆ ಬಿಳಿಯ ಜನ ಮಾತ್ರ ಸಂಪಾದಕರೂ ವರದಿಗಾರರೂ ಆಗುತ್ತಿದ್ದ ಬ್ರಿಟಿಷ್ ಅಧಿಪತ್ಯದ ಭಾರತೀಯ ಇಂಗ್ಲಿಷ್ ಪತ್ರಿಕೆಗಳಿಗೆ ಭಾರತೀಯ ಮುಖ ಬರುವುದು ಅನಿವಾರ್ಯವಾಯಿತು. ಈ ಪತ್ರಿಕೆಗಳು ಭಾರತೀಯರನ್ನು ಉಪಸಂಪಾದಕರು, ವರದಿಗಾರರನ್ನಾಗಿ ನೇಮಿಸಿಕೊಂಡವು. ಬಂಗಾಳದ ಇಂಗ್ಲಿಷ್ ಪತ್ರಿಕೆಗಳ ಸಂಪಾದಕರು ಗಾಂಧಿ ವಿರೋಧಮಾಡುವ ಪತ್ರಿಕೆಗಳಿಗೆ ಪ್ರಸಾರದ ಹೊಡೆತ ಬೀಳುತ್ತಿರುವುದನ್ನು ಮಾಲೀಕರ ಗಮನಕ್ಕೆ ತಂದರು. ಆಂಗ್ಲೋ ಇಂಡಿಯನ್ ಪತ್ರಿಕೆಗಳ ಬುಡ ಅಲ್ಲಾಡ ತೊಡಗಿತು. ಮೊದಲಿನದಾಗಿ ಅಲಹಾಬಾದಿನ 'ಪಯೋನೀರ್' ಪತ್ರಿಕೆ 1933ರಲ್ಲಿ ಭಾರತೀಯರ ಒಡೆತನಕ್ಕೆ ಹಸ್ತಾಂತರಗೊಂಡಿತು. 'ಇಂಗ್ಲಿಷ್‌ಮನ್' ಪತ್ರಿಕೆ ಆದಿಯಿಂದ ಭಾರತೀಯರ ವಿರುದ್ಧವಾಗಿ ಬರೆಯುತ್ತಿದ್ದುದು ನಷ್ಟವನ್ನು,

ಭರಿಸಲಾಗದೇ 'ಸ್ಟೇಟ್ಸ್‌ಮನ್' ಪತ್ರಿಕೆಯೊಡನೆ ಲೀನವಾಯಿತು. 'ಟೈಂಸ್ ಆಫ್ ಇಂಡಿಯಾ' ಮತ್ತು 'ಮದ್ರಾಸ್ ಮೇಲ್' ಪತ್ರಿಕೆಗಳು ಭಾರತೀಯರನ್ನು ನೌಕರಿಗೆ ನೇಮಿಸಿಕೊಳ್ಳತೊಡಗಿದವು. 'ಸ್ಟೇಟ್ಸ್‌ಮನ್' ಕೂಡಾ ಈ ಹಾದಿ ಹಿಡಿಯುವುದು ಅನಿವಾರ್ಯವಾಯಿತು.

ಗಾಂಧೀಜಿಯ 'ನವಜೀವನ' ವೆಂಬ ಗುಜರಾತೀ ಪತ್ರಿಕೆ ದಾಖಲೆ ಪ್ರಸಾರ ಪಡೆದರೆ ಅವರ 'ಹರಿಜನ'ವನ್ನು 16 ಭಾರತೀಯ ಭಾಷೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. ಇದನ್ನು ಅನುಸರಿಸಿ ಇತರ ಭಾರತೀಯ ಭಾಷಾ ಪತ್ರಿಕೆಗಳು ಪ್ರಚಾರ ಮತ್ತು ಪ್ರಸಾರ, ಪ್ರಭಾವಗಳಲ್ಲಿ ಇಂಗ್ಲಿಷ್ ಪತ್ರಿಕೆಗಳನ್ನು ಹಿಂದಿಕ್ಕಿ ಮುನ್ನಡೆದವು. ಗಾಂಧಿ ಪ್ರಭಾವದಿಂದ ಆರಂಭಗೊಂಡ ಈ ದೇಸೀ ಅಭಿಯಾನ ಇಂದಿಗೂ ಮುಂದುವರಿದಿದೆ ಎಂದರೆ ತಪ್ಪಲ್ಲ.

ಭಾರತೀಯ ಪತ್ರಿಕೋದ್ಯಮದ ಇತಿಹಾಸ ಬರೆದಿರುವ ಡಾ.ನಾಡಿಗ ಕೃಷ್ಣಮೂರ್ತಿ ಅವರು ರಾಜಾ ರಾಮಮೋಹನ ರಾಯ್ ಅವರನ್ನು ಭಾರತೀಯ ಭಾಷಾ ಪತ್ರಿಕೋದ್ಯಮದ ಪಿತಾಮಹ ಎಂಬುದಾಗಿ ಹೆಸರಿಸುತ್ತಾರೆ. ರಾಮಮೋಹನ ರಾಯ್ ಅವರು ಮೊದಲಿಗರಾಗಿ ದೇಶಭಾಷೆಗಳಲ್ಲಿ ಪತ್ರಿಕೆ ನಡೆಸಿದವರು ಎಂಬುದು ನಿಜ. ಅವರು ಬೆಂಗಾಳಿ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಪತ್ರಿಕೆ ನಡೆಸಿದರು. ಭಾರತೀಯ ಪತ್ರಿಕೆಗಳ ಮೇಲೆ ಈಸ್ಟ ಇಂಡಿಯಾ ಕಂಪನಿ ಕ್ರೂರ ಕಾನೂನನ್ನು ಜಾರಿಗೆ ತಂದಾಗ ಅದರ ವಿರುದ್ಧ ಇಂಗ್ಲಿಂಡಿನ ರಾಣಿಗೆ ದೂರು ನೀಡಿದರು. ಅವರು ಪತ್ರಿಕಾ ಸ್ವಾತಂತ್ರ್ಯದ ಪರವಾಗಿ ಬರೆದ ಪತ್ರವನ್ನು ಅದ್ಭುತ ದಾಖಲೆಯೆನ್ನಲಾಗಿದೆ. ಅದರಲ್ಲಿ ಬಳಸಲಾದ ಇಂಗ್ಲಿಷು ನೈಜ ಇಂಗ್ಲಿಷರಿಗೂ ಅಚ್ಚರಿಹುಟ್ಟಿಸುವಂತಿತ್ತು! ಆದರೆ ಮುಂದಿನ ದಿನಗಳಲ್ಲಿ ಇಡೀ ದೇಶದಲ್ಲಿ ಹಿಂದೀ, ಹಾಗೂ ಸ್ಥಳೀಯ ಭಾಷೆಗಳಲ್ಲಿ ಪತ್ರಿಕೆಗಳು ಬೆಳೆಯಲು ಗಾಂಧೀಜಿ ಅವರ ಪ್ರಭಾವ ಮುಖ್ಯವಾಯಿತು.



ಗಾಂಧಿ ಅಂತ್ಯದ ವಿಪರ್ಯಾಸ

ವಿವೇಕಾನಂದರಿಂದ ಪ್ರಭಾವಿತರಾಗಿ ಭಾರತಕ್ಕೆ ಬಂದು ಭಾರತಾಂಬೆಯ ಮಗಳಾಗಿ ಬೆಳೆದ ಶ್ರೀಮತಿ ಆ್ಯನಿಬೆಸೆಂಟ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು. ಭಾರತದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಅಡಿಪಾಯ ಹಾಕಿದವರು. ಅವರು ಮದ್ರಾಸಿನ ಅಡ್ಯಾರಿನಲ್ಲಿ ಆರಂಭಿಸಿದ್ದ 'ನ್ಯೂ ಇಂಡಿಯಾ' ಪತ್ರಿಕೆಯ ಕಛೇರಿಯನ್ನೇ ಪತ್ರಿಕೋದ್ಯಮ ತರಬೇತಿ ಶಾಲೆಯನ್ನಾಗಿಸಿದ್ದರು.

ಆ್ಯನಿಬೆಸೆಂಟ್ ಅವರು 1915ರಲ್ಲಿ ಮದ್ರಾಸಿನಲ್ಲಿ ಮೊದಲ ಬಾರಿಗೆ ಮೋಹನದಾಸ ಗಾಂಧಿ ಅವರನ್ನು ಭೇಟಿಮಾಡಿದ್ದನ್ನು ತಮ್ಮ

'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಹೀಗೆ ಬರೆದಿದ್ದರು: ಮೋಹನದಾಸ ಕರಮಚಂದ್ ಗಾಂಧಿ ಎನ್ನಲಾಗುವ ವಿಶಿಷ್ಟ ವ್ಯಕ್ತಿಯನ್ನು ಮೊದಲ ಬಾರಿಗೆ ಮುಖಾಮುಖಿಯಾದೆ. ಅವರು ಅಷ್ಟೇನೂ ಎತ್ತರದ ಆಳಲ್ಲ. ಆರೋಗ್ಯದಲ್ಲೂ ಬಹಳ ಗಟ್ಟಿಗರಾಗಿ ಕಾಣಲಿಲ್ಲ. ಆದರೆ ಮನೆಯಲ್ಲೇ ನೇಯ್ದ ಕಾಠೇವಾಡದ ರೈತನ ದಿರಿಸಿನಲ್ಲಿ ಬಹಳ ಸುಂದರವಾಗಿ ಕಂಡರು. ಅವರು ಸರಳವಾಗಿದ್ದರೂ ಮನಸೆಳೆಯುವಂತಿದ್ದರು. ನಾನು ಅವರ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ. ಹಾಗೂ ಅವರ ಕಣ್ಣುಗಳಲ್ಲಿ ಲವಲೇಶವೂ ಸ್ವಾರ್ಥವಿಲ್ಲದೇ ಪರಾರ್ಥಕ್ಕಾಗಿ ಬದುಕಿದ ಜೀಸಸ್ಸಿನ ಚಿತ್ರವನ್ನು ಕಂಡೆ. ಜೀಸಸ್ ಬಗ್ಗೆ ಹೇಳಲಾಗುವ ಒಂದು ಮಾತೆಂದರೆ ಅವರು ಬೇರೆಯವರನ್ನು ಬದುಕಿಸಲು ಸತತ ಪರಿಶ್ರಮಪಟ್ಟರು. ಆದರೆ ತಮ್ಮನ್ನೇ ತಾವು ರಕ್ಷಿಸಿಕೊಳ್ಳಲು ಆಗಲಿಲ್ಲ. ಈ ದೊಡ್ಡ ಮನುಷ್ಯನ ಜೀವನವೂ ಹೀಗಾಗದಿರಲಿ! ಆ್ಯನಿಬೆಸೆಂಟ್ ಅವರ ಹೇಳಿಕೆ ಮನಕಲಕುವಂತಿದೆ.

'ಅರೆ ಬೆತ್ತಲೆ ಫಕೀರ' ಎಂದು ಕರೆಸಿಕೊಂಡ ಗಾಂಧಿ ಅಡಿಯಿಂದ ಮುಡಿವರೆಗೆ ಎಲ್ಲಿಯೂ ಅನಗತ್ಯ ಕೊಬ್ಬು ಶೇಖರಣೆಯಾಗಿರದ ಸುಂದರಾಂಗ ಪುರುಷ. ಗಾಂಧಿ ಈ ದೇಶದ ಪುರುಷ ಪ್ರತಿನಿಧಿಯಾಗಿ ಕಾಣುತ್ತಾರೆಂದು ಇನ್ನೆಲ್ಲೋ ಓದಿದ ನೆನಪು. ಅವರು ತಮ್ಮ ಸರಳತೆಯಿಂದಲೇ ಗಮನಸೆಳೆಯುವ ಧೀಮಂತ. ನಾವು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗೆಲ್ಲ ಚಂದವಾಗಿ ಕಾಣಬೇಕೆಂದು ಮಾಡುವ ಸರ್ಕಸ್ಸುಗಳಿಗೆ ಲೆಕ್ಕವಿಲ್ಲ. ಈ ಚಾಳಿ ಅವರ ಅನುಯಾಯಿಗಳನ್ನೂ ಬಿಟ್ಟಿರಲಿಲ್ಲ. ಆದರೆ ಗಾಂಧೀಜಿಗೆ ಜಗತ್ತನ್ನು, ತನ್ನೆದುರಿಗೆ ಬಂದವರನ್ನು ಆವರಿಸಿಕೊಳ್ಳಲು ಯಾವುದೂ ಬೇಕಾಗಲಿಲ್ಲ!

ಜೊತೆಗೆ ಆ್ಯನಿಬೆಸೆಂಟ್ ಗಾಂಧಿ ಅವರ ಕಣ್ಣುಗಳಲ್ಲಿ ಪರಾರ್ಥಕ್ಕಾಗಿ ಜೀವತೆತ್ತ ಜೀಸಸ್ಸನ ಕಂಡೆ ಎನ್ನುತ್ತಾರೆ. ಹಾಗೆಯೇ ಗಾಂಧಿಯನ್ನು

ಜೀಸಸ್‌ಗೆ ಹೋಲಿಸುವುದ ನೋಡಿ. ಜೀಸಸ್ ತನ್ನನ್ನೇ ತಾನು ಬದುಕಿಸಿಕೊಳ್ಳಲು ಆಗಲಿಲ್ಲ, ಗಾಂಧೀಜಿ ಹಾಗಾಗದಿರಲಿ ಎಂಬ ಮಾತನ್ನು 1915ರಷ್ಟು ಹಿಂದೆಯೇ ಬೆಸೆಂಟ್ ಅವರು ಹೇಳಿದ್ದರೆಂದು ನೆನಪಿಸಿಕೊಳ್ಳಿ. ಗಾಂಧಿ ಅಹಿಂಸೆಯೇ ತಮ್ಮ ಜೀವನ ಧರ್ಮವೆಂದು ಸ್ವೀಕರಿಸಿದ್ದರು. ಜನರ ನಡುವಿನ ಹಿಂಸಾ ತಾಂಡವಗಳನ್ನು ತಪ್ಪಿಸಲು ಹಗಲಿರುಳೂ ಶ್ರಮಿಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ರಾತ್ರಿಕೂಡ ಗಾಂಧೀಜಿ ದೂರದ ಕೊಲಕೊತ್ತಾದಲ್ಲಿ ಹಿಂದೂ ಮುಸ್ಲಿಂ ನಡುವಿನ ಗಲಭೆ ತಪ್ಪಿಸಲು ಶಾಂತಿಮಂತ್ರ ಜಪಿಸುತ್ತಿದ್ದರು. ಆದರೆ ಅಹಿಂಸೆಗಾಗಿಯೇ ಜೀವತೇಯ್ದ ವ್ಯಕ್ತಿ ಹಿಂಸೆಯಲ್ಲಿ ಮೃತರಾಗಬೇಕಾಗಿ ಬಂದುದು ವಿಧಿವಿಲಾಸ! ಬಹುಶಃ ಗಾಂಧಿ ಸಹಜವಾಗಿ ಮರಣವನ್ನಪ್ಪಿದ್ದರೆ, ಯಾರಿಗೂ ವಿಷಾದವೆನಿಸುತ್ತಿರಲಿಲ್ಲ. ಅವರ ಕೊಲೆ ದೇಶದ ಚರಿತ್ರೆಯಲ್ಲಿ ಕಪ್ಪು ಚುಕ್ಕೆಯಾಗಿ ಉಳಿದುಕೊಂಡಿತು. ಆ್ಯನಿಬೆಸೆಂಟ್ 30 ವರ್ಷಗಳ ಹಿಂದೆ ಹೇಳಿದ ಮಾತು ಸತ್ಯವಾಗಿ ಬಿಟ್ಟಿತಲ್ಲ ಎಂದು ಕಾಡಿದರೆ ಆಶ್ಚರ್ಯವಿಲ್ಲ!



ಸತ್ಯ ಪ್ರಕಟಣೆಗೆ ವಿಷಾದಿಸಬೇಕಿಲ್ಲ!

ಪತ್ರಿಕೋದ್ಯಮದ ಬಗ್ಗೆ ಗಾಂಧೀಜಿ ಬರೆದಿರುವ ಮಾತುಗಳು ಹೀಗಿವೆ: 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಮೊದಲ ತಿಂಗಳಲ್ಲೇ ನನಗೆ ಅರ್ಥವಾಗಿದ್ದೆಂದರೆ ಪತ್ರಿಕೋದ್ಯಮದ ಏಕೈಕ ಗುರಿ ಸೇವೆ ಆಗಿರಬೇಕು. ಪತ್ರಿಕೆಯೆಂಬುದು ಪ್ರಬಲ ಶಕ್ತಿ ತಡೆಯೊಡ್ಡಿದ ಪ್ರವಾಹ ಭೂಗರ್ಭವನ್ನೆಲ್ಲ ಮುಳುಗಿಸಿ ಆವರಿಸುವ ಹಾಗೆ ಹಿಡಿತವಿಲ್ಲದ ಲೇಖನಿ ಧ್ವಂಸಮಾಡಬಲ್ಲದು. ಹೊರಗಿನಿಂದ ಈ ನಿಯಂತ್ರಣ ಬಂದರೆ ಅದು ನಿಯಂತ್ರಣಕ್ಕಿಂತ ಹಾನಿಕರವಾಗಿ, ವಿಷಕಾರಿಯಾಗಿ ಪರಿಣಮಿಸುತ್ತದೆ. ನಿಯಂತ್ರಣವನ್ನು ಒಳಗಿನಿಂದಲೇ ಸಾಧಿಸಿದಾಗ ಮಾತ್ರ ಅದು ಉಪಯುಕ್ತವಾಗಬಲ್ಲದು. ಈ ವಾದ

ಶರಿ ಎಂಬುದಾದರೆ ಜಗತ್ತಿನ ಎಷ್ಟು ಪತ್ರಿಕೆಗಳು ಈ ಪರೀಕ್ಷೆಯಲ್ಲಿ ತೇರ್ಗಡೆಹೊಂದಬಲ್ಲವು? ಆದರೆ ವಿಧ್ವಂಸಕ ಪತ್ರಿಕೆಗಳನ್ನು ಯಾರು ನಿಯಂತ್ರಿಸುವುದು? ಉಪಯುಕ್ತ ಮತ್ತು ಅಪಾಯಕಾರಿ ಪತ್ರಿಕೆಗಳು ಒಳಿತು ಹಾಗು ಕೆಡುಕುಗಳ ಹಾಗೇ ಜೀವನದಲ್ಲಿ ಒಟ್ಟಿಗೇ ಸಾಗುತ್ತವೆ. ಜನ ತಮ್ಮ ಆಯ್ಕೆಯನ್ನು ಮಾಡಬೇಕು (ಆತ್ಮಕತೆ ಪುಟ 211).

ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು ಸತ್ಯವಾಗಿದ್ದು ಸರ್ಕಾರದ ದುರಾಗ್ರಹಕ್ಕೆ ತುತ್ತಾದರೆ ಅಥವಾ ಯಾವುದೇ ಒಂದು ಕಾಯಿದೆಗೆ ವಿರುದ್ಧವಾಗಿದ್ದರೆ ಸಂಪಾದಕ ಏನು ಮಾಡಬೇಕು? ಸಂಪಾದಕ ಕ್ಷಮೆ ಕೋರಬೇಕಾ? ಅದು ಅಸಾಧ್ಯವೆಂದು ದೃಢವಾಗಿ ಹೇಳಬೇಕು. ನಿಜ. ಅಂಥ ವಿಷಯಗಳನ್ನು ಪ್ರಕಟಿಸಲೇ ಬೇಕೆಂಬುದಿಲ್ಲ. ಆದರೆ ಒಮ್ಮೆ ಪ್ರಕಟವಾದ ಮೇಲೆ ಸಂಪಾದಕ ಅದರ ಜವಾಬ್ದಾರಿಯನ್ನು ಹೊರಲೇಬೇಕಾಗುತ್ತದೆ' (ಇಂಡಿಯನ್ ಒಪಿನಿಯನ್ ಗುಜರಾತಿ 23/4/1919) ಗಾಂಧೀಜಿ ಅವರ ಪತ್ರಿಕೋದ್ಯಮದ ಎದ್ದು ಕಾಣುವ ಅಂಶವೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವ ನಿಯಂತ್ರಣ ಹೊಂದುವುದನ್ನು ಪರಮೋಚ್ಚ ತತ್ವವಾಗಿ ಪಾಲಿಸುವುದು. ಗಾಂಧೀಜಿ ನಮ್ಮ ಲೇಖನಿಯ ಮೇಲೆ ನಿಯಂತ್ರಣ ಬೇಕೇ ಬೇಕೆಂದು ವಾದಿಸಿದವರು. ಆದರೆ ಆ ನಿಯಂತ್ರಣ ಸರ್ಕಾರವೋ ಸಮಾಜವೋ ಹೇರುವುದಲ್ಲ. ನಮ್ಮೊಳಗಿಂದ ಬರಬೇಕು ಎಂಬ ಬಗ್ಗೆ ಅವರಿಗೆ ಸ್ಪಷ್ಟತೆಯಿತ್ತು. ಪತ್ರಿಕೆಯಲ್ಲಿ ಬೇಜವಾಬ್ದಾರಿಯ ಬರವಣಿಗೆಯನ್ನು ಅವರು ಎಂದೂ ಸಹಿಸುವುದಿಲ್ಲ. ಹಾಗಂತ ಆ ಜವಾಬ್ದಾರಿಯನ್ನು ಬೇರೆ ಯಾರ ಮೇಲೂ ಹೇರುವುದಿಲ್ಲ. ಅದು ಬರಹಗಾರನ ಒಳಗಿಂದ ಬರಬೇಕಾದುದು ಎಂದು ಅವರು ಹೇಳುತ್ತಿದ್ದರು.

ಹಾಗೆ ಒಳಗಿಂದ ಬರದ ಬರಹಗಾರನನ್ನು ಸರ್ಕಾರವಾಗಲೀ ಸಮಾಜವಾಗಲೀ ಏನು ಮಾಡಬೇಕು? ಅದಕ್ಕೆ ಕಠಿಣ ಕಾನೂನು ಗಳಿರಬೇಕು ಎಂಬುದಕ್ಕೆ ಗಾಂಧಿ ವಿರೋಧಿಯಲ್ಲ. ಆದರೆ ಒಂದು ಕಾನೂನು, ಪತ್ರಿಕೆಯ ಸ್ವಾತಂತ್ರ್ಯಕ್ಕೆ ಅಥವಾ ಜನರ ಸಾಮಾನ್ಯ ಜ್ಞಾನಕ್ಕೆ

ವಿರುದ್ಧವಾಗಿದ್ದರೆ? ಅದರ ವಿರುದ್ಧ ಸಂಪಾದಕ ಹೋರಾಡಬೇಕಾದ ಅನಿವಾರ್ಯತೆಯನ್ನು ಗಾಂಧೀಜಿ ಒಪ್ಪಿಕೊಳ್ಳುತ್ತಾರೆ. ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು ಸತ್ಯವೂ ನಿಖರವೂ, ಸಮಾಜಕ್ಕೆ ಉಪಯುಕ್ತವೂ ಆಗಿರುವಾಗ ಅದನ್ನು ಪ್ರಕಟಿಸಿದ್ದಕ್ಕೆ ಸಂಪಾದಕ ಕ್ಷಮೆ ಕೋರಬೇಕಾದ ಪ್ರಮೇಯವೇ ಇಲ್ಲ ಎಂಬುದು ಅವರ ದೃಢವಾದ ನಿಲುವು. 'ಯಂಗ್ ಇಂಡಿಯಾ'ದಲ್ಲಿ ತಾವು ಬರೆದ ಮೂರು ಸಂಪಾದಕೀಯಗಳಿಗಾಗಿ ಕೋರ್ಟಿನ ಕಟಕಟೆ ಹತ್ತ ಬೇಕಾಗಿ ಬಂದ ಗಾಂಧೀಜಿ ತಮ್ಮನ್ನು ಸಮರ್ಥಿಸಿಕೊಂಡ ಪರಿ ಅಮೋಘವಾದುದು. ತಾವು ಬರೆದುದು ದೇಶದ್ರೋಹವಾಗುವುದಾದರೆ ತಾನು ದೇಶದ್ರೋಹಿ ಎನಿಸಿಕೊಳ್ಳಲು ಹಿಂಜರಿಯುವುದಿಲ್ಲ ಎಂಬುದು ಅವರ ಉತ್ತರ.

ಇಂಥದೇ ಸಂದರ್ಭ ಇತ್ತೀಚೆಗೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಎದುರಾದುದು ನೆನಪಿದೆಯೆ? ಹಿರಿಯ ವಕೀಲ ಹಾಗೂ ಸಾಮಾಜಿಕ ಹೋರಾಟಗಾರ ಪ್ರಶಾಂತ ಭೂಷಣ್ ಅವರನ್ನು ಸ್ವತಃ ನ್ಯಾಯಾಲಯವೇ ನ್ಯಾಯಾಲಯ ನಿಂದನೆ ಕಾಯಿದೆಯಡಿಯಲ್ಲಿ ವಿಚಾರಣೆಗೊಳಪಡಿಸಿತು. ಸಾಮಾಜಿಕ ಜಾಲ ತಾಣದ ಅವರ ಟ್ವೀಟ್‌ಗಳು ನ್ಯಾಯಾಲಯ ನಿಂದನೆ ಎಂದು ಹೇಳಿ ಕ್ಷಮೆ ಕೋರಲು ಸೂಚಿಸಿತು. ಆದರೆ ಅದಕ್ಕೆ ಪ್ರಶಾಂತ್ ಭೂಷಣ್ ಜಗ್ಗಲಿಲ್ಲ. ಕ್ಷಮೆ ಕೋರಲಿಲ್ಲ ಬದಲಾಗಿ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು. ಆಗ ನ್ಯಾಯಾಲಯ ಒಂದು ರೂಪಾಯಿ ದಂಡ ವಿಧಿಸಿತು! ಅದನ್ನು ಕೊಡದಿದ್ದರೆ ಮೂರು ತಿಂಗಳು ಜೈಲು ಶಿಕ್ಷೆ ವಿಧಿಸುವುದಾಗಿ ಎಚ್ಚರಿಸಿತು. ಗಾಂಧೀಜಿ ಅವರ ನ್ಯಾಯ ನಿರ್ಣಯದ ಹಾಗೆ ಪ್ರಶಾಂತ ಭೂಷಣ್ ಅವರ ಕೇಸು ಕೂಡಾ ಚಾರಿತ್ರಿಕವೇ. ನಾವು ಬರೆದುದು (ಈಗಿನ ಕಾಲದಲ್ಲಿ ಟ್ವೀಟ್ ಮಾಡಿದ್ದು ಎನ್ನಬಹುದು) ಸತ್ಯವೆಂದು ನಮ್ಮ ಆತ್ಮ ಸಾಕ್ಷಿ ನುಡಿಯುತ್ತಿದ್ದರೆ ಅದಕ್ಕೆ ವಿಷಾದ ಪಡಬೇಕಿಲ್ಲ ಅಥವಾ ಕ್ಷಮೆ ಕೋರಬೇಕಿಲ್ಲ ಎಂಬ ಗಾಂಧೀಜಿ ಅವರ ಹೇಳಿಕೆ ಇಂದಿಗೂ ಅನ್ವಯಿಸುವ ಮಾತು.



ಅನಾಸಕ್ತಿಯ ಮಾದರಿ

'ನಾನು ಪತ್ರಿಕೋದ್ಯಮಕ್ಕೆ ಬಂದಿದ್ದು ಪತ್ರಿಕೋದ್ಯಮಕ್ಕೋಸ್ಕರವಲ್ಲ. ಬದಲಾಗಿ ನನ್ನ ಜೀವನದಲ್ಲಿ ನಿರ್ಧರಿಸಿಕೊಂಡ ಗುರಿಯನ್ನು ಸಾಧಿಸಲು ಬೇಕಾದ ಮೆಟ್ಟಲು ಎಂಬುದಾಗಿ ಭಾವಿಸಿ. ನನ್ನ ಗುರಿಯೆಂದರೆ ಜನರಿಗೆ ಮಾದರಿಯಾಗುವುದು. ಅಹಿಂಸೆ ಮತ್ತು ಸತ್ಯದ ಅವತಾರವಾಗಿರುವ ಸತ್ಯಾಗ್ರಹವನ್ನು ಪಾಲಿಸುವುದು. ನನ್ನ ನಂಬಿಕೆಗೆ ಅನುಗುಣವಾಗಿ ಬದುಕುವುದಕ್ಕಾಗಿ ನಾನು ಸಿಟ್ಟು-ಸೆಡಕಿನಿಂದ ಬರೆಯಲಿಕ್ಕಿಲ್ಲ. ಸೋಮಾರಿತನದಿಂದ ಬರೆಯಲಿಕ್ಕಿಲ್ಲ. ನನ್ನ ಅನುರಾಗದ ಕಾರಣಕ್ಕಾಗಿಯೂ ಬರೆಯುವುದಿಲ್ಲ. ವಾರದಿಂದ ವಾರಕ್ಕೆ ಬರೆಯುವಾಗ ವಿಷಯಗಳ ಆಯ್ಕೆ ಮತ್ತು ಪದಗಳ


ಬಳಸುವಿಕೆಯಲ್ಲಿ ನಾನು ವಹಿಸಬೇಕಾದ ನಿಯಂತ್ರಣ ನನ್ನ ಓದುಗರಿಗೆ ಅರ್ಥವಾಗಲಿಕ್ಕಿಲ್ಲ. ನನಗೆ ಅದೊಂದು ತರಬೇತಿ. ಇದು ನನ್ನೊಳಗೆ ನಾನು ನೋಡಿಕೊಳ್ಳಲು ಹಾಗೂ ನನ್ನ ದೌರ್ಬಲ್ಯಗಳನ್ನು ನಾನು ಅರ್ಥಮಾಡಿಕೊಳ್ಳಲು ಇದು ದಾರಿ.ಕೆಲವೊಮ್ಮೆ ನನ್ನ ಆಕರ್ಷಕ ಬರವಣಿಗೆಯಿಂದ ಏನನ್ನೋ ಮುಚ್ಚಿಕೊಳ್ಳಲು ಯತ್ನಿಸುತ್ತಿರುವೆನೇ ಎಂಬ ಅನುಮನ ಬರುತ್ತದೆ. ದೊಡ್ಡ ದೊಡ್ಡ ಪದ ಗುಚ್ಛಗಳ ಹಿಂದೆ ನನ್ನ ಸಿಟ್ಟು ಅಡಗಿಕೊಳ್ಳಲು ಪ್ರಯತ್ನಿಸುತ್ತದೆ. ಇಂಥ ಕಳೆಯನ್ನು ಕಿತ್ತುಹಾಕುವುದೊಂದು ಕಷ್ಟದಾಯಕವಾದರೂ ಖುಷಿ ನೀಡುವ ಅಗ್ನಿಪರೀಕ್ಷೆ. (ಯಂಗ್ ಇಂಡಿಯಾ ಜುಲೈ 2, 1925).

ಹೊಸ ಹೊಸ ಐಡಿಯಾಗಳನ್ನು ಕೊಡುವುದರಲ್ಲಿ ನನಗೆ ಸ್ವಂತಿಕೆಯಿದೆ. ಆದರೆ ಬರವಣಿಗೆ ಎಂಬುದು ನನಗೆ ಉಪ ಉತ್ಪಾದನೆ ಮಾತ್ರ. ನಾನು ಬರೆಯುವುದು ನನ್ನ ಭಾವನೆಗಳನ್ನು ಪಸರಿಸಲು ಮಾತ್ರ. ಪತ್ರಿಕೋದ್ಯಮ ಎನ್ನುವುದು ನನ್ನ ವೃತ್ತಿಯಲ್ಲ (ಹರಿಜನ ಆಗಸ್ಟ್ 18, 1946).

ಈಗಿನ ಕಾಲದಲ್ಲಿ ಪತ್ರಕರ್ತರ ಸೋಗಿನಲ್ಲಿ ಮೋಸ ಮಾಡುವವರನ್ನು ನೋಡುತ್ತೇವೆ. ಯಾವುದೋ ಪತ್ರಿಕೆಯ ಪ್ರತಿನಿಧಿ ಎಂಬುದಾಗಿ ಹೇಳಿಕೊಂಡು ಸರ್ಕಾರಿ ಅಧಿಕಾರಿಗಳನ್ನು ದೋಚುವ ಪ್ರವೃತ್ತಿಗಳಿವೆ. ನಮ್ಮ ದೇಶದಲ್ಲಿ ಖೋಟಾ ರೈತರೋ ಖೋಟಾ ಕಾರ್ಮಿಕರೋ ಸಿಗುವುದಿಲ್ಲ, ಆದರೆ ಖೋಟಾ ಪತ್ರಕರ್ತರು ಸಿಗುತ್ತಾರೆ.ಯಾಕೆಂದರೆ ರೈತರ ಪಾತ್ರಮಾಡಿದರೆ ಯಾರಿಗೆ ಲಾಭ? ಬದಲಾಗಿ ನಕಲಿ ಪತ್ರಕರ್ತರಾದರೆ ಅನ್ಯಾಯದಿಂದ ಹಣ ಮಾಡಬಹುದು ಎಂಬುದು ಸ್ಪಷ್ಟ. ಆದರೆ ಮಾದರಿ ಪತ್ರಕರ್ತರಾಗಿದ್ದ ಗಾಂಧೀಜಿ ತಮ್ಮನ್ನು ಪತ್ರಕರ್ತರೆಂದು ಕರೆದುಕೊಳ್ಳಲಿಲ್ಲ! ಪತ್ರಿಕಾ ಬರೆವಣಿಗೆ ತನ್ನ ಒಳಗಿನ ಭಾವನೆಗಳನ್ನು ಜನಕ್ಕೆ ತಲುಪಿಸಲಿಕ್ಕೆ ಅದು ಒಂದು ಮಾಧ್ಯಮ ಮಾತ್ರ, ಅದು ವೃತ್ತಿಯಲ್ಲ ಎಂಬುದು ಅವರ ಸ್ಪಷ್ಟ ನುಡಿ.

ಈಗ ನಾಕಕ್ಷರ ಬರೆಯಲಾಗದವರೂ ಪತ್ರಕರ್ತರೆಂದು ಬೆನ್ನು ತಟ್ಟಿಕೊಳ್ಳಲು ಹಾತೊರೆಯುವಾಗ 45 ವರ್ಷಗಳಿಗೂ ಹೆಚ್ಚು ಕಾಲ ಪತ್ರಿಕೆಯನ್ನು ತಮ್ಮ ಪ್ರಬಲ ಅಸ್ತ್ರವನ್ನಾಗಿ ಮಾಡಿಕೊಂಡಿದ್ದ

ಗಾಂಧೀಜಿ ಅವರ ಅನಾಸಕ್ತಿಯೋಗವೂ ಇಂದಿನ ವೃತ್ತಿ ನಿರತ ಪತ್ರಕರ್ತರಿಗೆ ಮಾದರಿಯಾಗಬೇಕಾದ್ದು. ಗಾಂಧೀಜಿ ಒಂದು ಕೆಲಸವನ್ನು ಒಪ್ಪಿಕೊಂಡರೆ ಅದಕ್ಕೆ ಶೇಕಡಾ ನೂರರಷ್ಟು ಶ್ರಮವನ್ನು ಧಾರೆಯೆರೆಯುತ್ತಿದ್ದರು. 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಹೊರತರುವ ಮೊದಲದಿನ ದಕ್ಷಿಣ ಆಫ್ರಿಕಾದಲ್ಲಿ ಮುದ್ರಣ ಯಂತ್ರ ಕೈಕೊಟ್ಟಿತು. ಹೇಗೋ ಪ್ರಯಾಸ ಪಟ್ಟು ಸಮಯಕ್ಕೆ ಸರಿಯಾಗಿ ಹೊರತಂದರು. ಮುಂದಿನ ದಿನಗಳಲ್ಲೂ ಅದು ಸುಖ ಪ್ರಸವವಾಗಿರಲಿಲ್ಲ. ಅದರೆ ಗಾಂಧಿ ಪಟ್ಟುಬಿಡುವವರಲ್ಲ. ಆದರೆ ಅದನ್ನು ವೃತ್ತಿ ಎಂಬುದಾಗಿ ಅವರು ಭಾವಿಸಲಿಲ್ಲ ಎಂಬುದೇ ವಿಶೇಷವಾಗಿ ಕಾಣುತ್ತದೆ. ಅಲ್ಲದೇ ಪತ್ರಿಕೋದ್ಯಮ ವೃತ್ತಿಯಾಗಬಾರದು, ಅದು ಹೊಟ್ಟೆ ಹೊರೆದುಕೊಳ್ಳುವ ಮಾರ್ಗವಾಗಬಾರದು ಎಂಬುದು ಅವರ ನಿಲುವು. ಅದಕ್ಕೆ ಅವರದೇ ಆದ ಸಮರ್ಥನೆಗಳು ಇದ್ದವು. ಅವನ್ನು ಅಲ್ಲಗಳೆಯಲಾಗದು ಎಂಬುದು ಎಷ್ಟು ನಿಜವೋ ಈಗ ಪತ್ರಿಕೋದ್ಯಮವನ್ನು ಪರಿಪೂರ್ಣ ವೃತ್ತಿಯನ್ನಾಗಿ ಸ್ವೀಕರಿಸಬೇಕು ಎಂಬುದಕ್ಕೂ ಬಲವಾದ ಕಾರಣಗಳಿವೆ. ಬಹುಶಃ ಗಾಂಧೀಜಿ ಈಗ ಬದುಕಿದ್ದರೆ ತಾವು ಪತ್ರಕರ್ತರೆಂದು ತಮ್ಮನ್ನು ಕರೆದುಕೊಳ್ಳುತ್ತಿರಲಿಲ್ಲ ಆದರೆ ಹಾಗೆ ಇತರರು ಕರೆದುಕೊಳ್ಳಬಾರದು ಎಂಬ ಆಕ್ಷೇಪ ಹೊಂದಿರುತ್ತಿರಲಿಲ್ಲ ಎನಿಸುತ್ತದೆ.



ಸರ್ವಕಾಲಕ್ಕೂ ಪ್ರಸ್ತುತ

ಪತ್ರಿಕೆಗಳಿಗೆ ಜಾಹೀರಾತು ಸ್ವೀಕರಿಸದಿರುವ ಬಗ್ಗೆ ಗಾಂಧೀಜಿ ಒಮ್ಮೆ ಹೀಗೆ ಬರೆಯುತ್ತಾರೆ: ಪತ್ರಿಕೆಗಳು ಚಂದಾದಾರರಿಗಿಂತ ಜಾಹೀರಾತುಗಳನ್ನು ನಂಬಿ ಬದುಕುವುದು ಈಗ ಜಾರಿಯಲ್ಲಿರುವ ಪದ್ಧತಿಯಾಗಿದೆ. ಅದರ ಪರಿಣಾಮವು ಶೋಚನೀಯವಾಗಿದೆ. ಕುಡಿತದ ಚಟದ ವಿರುದ್ಧ ಬರೆಯುವ ಪತ್ರಿಕೆಯೇ ಕುಡಿತವನ್ನು ಪ್ರೇರೇಪಿಸುವ ಜಾಹೀರಾತುಗಳನ್ನು ಪ್ರಕಟಿಸುತ್ತದೆ. ಒಂದೇ ಸಂಚಿಕೆಯಲ್ಲಿ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಲೇಖನ ಇರುವಂತೆಯೇ ತಂಬಾಕನ್ನು ಎಲ್ಲಿ ಕೊಳ್ಳಬಹುದು ಎಂಬ ಮಾಹಿತಿಯೂ ಇರುತ್ತದೆ! ಅಥವಾ


ಒಂದು ಪತ್ರಿಕೆಯಲ್ಲಿ ಒಂದು ಆಟದ ಬಗ್ಗೆ ನಕಾರಾತ್ಮಕ ಲೇಖನ ಇರುವ ಜೊತೆಗೆ ಅದನ್ನು ಪ್ರಚಾರಮಾಡುವ ದೊಡ್ಡ ಜಾಹೀರಾತು ಕೂಡಾ ಇರುತ್ತದೆ. ವೈದ್ಯಕೀಯಕ್ಕೆ ಸಂಬಂಧಿಸಿದ ಜಾಹೀರಾತುಗಳು ಪತ್ರಿಕೆಗಳಿಗೆ ಅತಿದೊಡ್ಡ ಆದಾಯ ಮೂಲಗಳು. ಅವು ಜನ ಸಾಮಾನ್ಯರಿಗೆ ದೊಡ್ಡ ಕಂಟಕಗಳಾಗಿವೆ, ಆಗುತ್ತಿವೆ. ಪತ್ರಿಕೆಗಳಿಂದ ಸೇವೆ ನಡೆಯುವುದನ್ನು ಶೂನ್ಯವಾಗಿಸಲು ವೈದ್ಯಕೀಯ ಜಾಹೀರಾತುಗಳೇ ಸಾಕು. ಇವುಗಳಿಂದಾಗುವ ತೊಂದರೆಗಳಿಗೆ ನಾನು ಸಾಕ್ಷಿ. ಕೆಲವರು ಜಾಹೀರಾತಿಗೆ ಮರುಳಾಗಿ ಕೆಡುಕನ್ನುಂಟು ಮಾಡುವ ಔಷಧಿಗಳನ್ನು, ಮಾತ್ರೆಗಳನ್ನು ತೆಗೆದುಕೊಳ್ಳುತ್ತಾರೆ. ಅನೇಕ ಜಾಹೀರಾತುಗಳು ಅನೈತಿಕತೆಯನ್ನು ಪ್ರೋತ್ಸಾಹಿಸುತ್ತವೆ. ಧಾರ್ಮಿಕ ಪತ್ರಿಕೆಗಳಲ್ಲೂ ಇಂಥ ಜಾಹೀರಾತುಗಳು ಪ್ರಕಟಗೊಳ್ಳುವುದನ್ನು ಕಾಣುತ್ತೇವೆ. ಈ ಪದ್ಧತಿ ನೇರವಾಗಿ ಪಶ್ಚಿಮದಿಂದ ಬಂದಿದ್ದು. ಯಾವುದೇ ಬೆಲೆತೆತ್ತಾದರೂ ಈ ದುಷ್ಟ ಪದ್ಧತಿಯನ್ನು ಹೋಗಲಾಡಿಸಬೇಕು. ಅಥವಾ ಸುಧಾರಿಸಬೇಕು.ಜಾಹೀರಾತು ಪ್ರಕಟಣೆಯಲ್ಲಿ ಸ್ವಯಂ ನಿಯಂತ್ರಣವನ್ನು ಸಾಧಿಸುವುದು ಎಲ್ಲಾ ಪತ್ರಿಕೆಗಳ ಆದ್ಯ ಕರ್ತವ್ಯ.

ಗಾಂಧೀಜಿ ಹೀಗೆ ಬರೆದಿದ್ದು 1920ರ ದಶಕದಲ್ಲಿ. ಒಂದು ಶತಮಾನದ ಬಳಿಕ ಗಾಂಧಿ ಅವರ ಮಾತುಗಳು ಇನ್ನಷ್ಟು ಪ್ರಖರ ಸತ್ಯಗಳಾಗಿ, ಸಮಕಾಲೀನ ರೋಗವಾಗಿ ಕಾಣುತ್ತವೆ. ಈಗ ಗಾಂಧಿ ಅವರ ಹೇಳಿಕೆಯೇ ನಗೆಪಾಟಲಾಗುತ್ತದೆ! ಈಗಂತೂ ಪತ್ರಿಕೆಗಳು ಕಾರ್ಪೊರೇಟ್ ವಲಯದ ಶಿಶುಗಳು. ಅವನ್ನು ನಡೆಸುವ ಉದ್ದೇಶವೂ ಹಣಕಾಸಿನ ಲಾಭಕ್ಕೆ. ಲಾಭ ತರಲಾರದ ಆದರೆ ಜನಸೇವೆ ಮಾಡುವ ಪತ್ರಿಕೆ ಯಾರಿಗೂ ಬೇಡ. ಈಗ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಜಾಹೀರಾತುಗಳಲ್ಲಿ ಅನೇಕ ವಿಧ. ನೇರವಾಗಿ ಪ್ರಕಟಗೊಳ್ಳುವ ಜಾಹೀರಾತುಗಳು ಒಂದು ಕಡೆಯಾದರೆ ಸುದ್ದಿ, ಸುದ್ದಿಚಿತ್ರಗಳ ರೂಪದಲ್ಲಿ ಜನರನ್ನು ಮೋಸಮಾಡುವ ಹಾಗೆ

ಜಾಹೀರಾತು ಪ್ರಕಟಗೊಳ್ಳುವುದು ಇನ್ನೊಂದು ರೀತಿ. ಹೀಗಾಗಿ ಯಾವುದು ಜಾಹೀರಾತು, ಯಾವುದು ಅಲ್ಲ ಎಂದು ಸುಲಭವಾಗಿ ಪತ್ತೆಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಗೆ ನಾವು ತಲುಪಿದ್ದೇವೆ.

ಈಗ ಜಾಹೀರಾತಿಲ್ಲದೇ ಪತ್ರಿಕೆ ಇಲ್ಲ. ಹಲವು ಮುಖಗಳನ್ನು ಹೊಂದಿರುವ ಜಾಹೀರಾತುಗಳನ್ನು ಒಳಗೊಂಡ ಪತ್ರಿಕೆ ನೈಜ ಸಾಮಾಜಿಕ ಶಕ್ತಿಯಾಗಿ ಉಳಿದಿರುವುದಿಲ್ಲ. ಈಗ ಜಾಹೀರಾತುದಾರರು ಪ್ರಕಟಗೊಳ್ಳುವ ಸುದ್ದಿಗಳ ಮೇಲೆ ಕೂಡಾ ಹಿಡಿತ ಸಾಧಿಸುತ್ತಿದ್ದಾರೆ. ತಮ್ಮ ಜಾಹೀರಾತುಗಳ ಪಕ್ಕದಲ್ಲಿ ಯಾವ ರೀತಿಯ ಸುದ್ದಿ ಬರಬೇಕು, ಬರಬಾರದು ಎಂದು ಅವರೇ ನಿರ್ದೇಶಿಸುತ್ತಾರೆ. ಅವರ ನಿರ್ದೇಶಕ್ಕೆ ವಿರುದ್ಧವಾಗಿ ಸುದ್ದಿಗಳನ್ನು ಪ್ರಕಟಿಸುವ ಧೈರ್ಯ ಈಗ ಯಾವ ಪತ್ರಿಕೆಗೂ ಇಲ್ಲ. ಭಾರತದ ಪತ್ರಿಕೋದ್ಯಮದ ಸಮಸ್ಯೆಗಳನ್ನು ಅಧ್ಯಯನ ಮಾಡಿ ಪರಿಹಾರ ಸೂಚಿಸಲು ರಚಿತಗೊಂಡಿದ್ದ ಎರಡನೇ ಪತ್ರಿಕಾ ಆಯೋಗ, ಪತ್ರಿಕೆಗಳಲ್ಲಿ ಸುದ್ದಿ ಹಾಗು ಜಾಹೀರಾತಿನ ಅನುಪಾತ 60:40ನ್ನು ಮೀರಬಾರದು ಎಂದು ಹೇಳಿದೆ. ಆದರೆ ಇಂದು ನಮ್ಮಲ್ಲಿ ಹೆಚ್ಚಿನ ಪತ್ರಿಕೆಗಳಲ್ಲಿ ಅದು ತಿರುಗುಮುರುಗಾಗಿದೆ. ಕೇವಲ ಜಾಹೀರಾತುಗಳೇ ಪ್ರಕಟಗೊಳ್ಳುವ ಪತ್ರಿಕೆಗಳು ಇವೆ!

ಗಾಂಧೀಜಿ ವರ್ಷದಿಂದ ವರ್ಷಕ್ಕೆ ಪ್ರಸ್ತುತವಾಗುವುದು ಹೀಗೆ. ಅವರ ಚಿಂತನೆಗಳು ಕಾಲಾತೀತವಾದವುಗಳು.ಎಲ್ಲ ಕಾಲದಲ್ಲೂ ಮಾನವ ಜನಾಂಗದ ಒಳಿತನ್ನು ಮಾತ್ರ ಬಯಸಿದವುಗಳು.



ಗಾಂಧಿ ಈಗ ಏನು ಹೇಳುತ್ತಿದ್ದರು?


ಗಾಂಧೀಜಿ ಇಂಗ್ಲೆಂಡಿಗೆ ಹೋಗುವವರೆಗೆ ಪತ್ರಿಕೆಗಳನ್ನೇ ನೋಡಿರಲಿಲ್ಲ ಎನ್ನಲಾಗಿದೆ. ಯಾಕೆಂದರೆ ಭಾರತದಲ್ಲಿ ಆಗಿನ್ನೂ ಪತ್ರಿಕೋದ್ಯಮ ಅಂಬೆಗಾಲಿಡುತ್ತಿದ್ದ ಕಾಲ. ಇಂಗ್ಲೆಂಡಿಗೆ ಹೋದ ಮೇಲೆ ಅವರು ಪತ್ರಿಕೆಗಳ ಬಗ್ಗೆ ಆಶ್ಚರ್ಯವನ್ನೂ ಕುತೂಹಲವನ್ನೂ ತಾಳುತ್ತಾರೆ. ಅಲ್ಲಿಯ 'ವೆಜಿಟೇರಿಯನ್' ಪತ್ರಿಕೆಗೆ ಪತ್ರಗಳನ್ನೂ ಲೇಖನಗಳನ್ನೂ ಬರೆಯಲು ತೊಡಗುತ್ತಾರೆ. ನಂತರ ದಕ್ಷಿಣ ಆಫ್ರಿಕೆಗೆ ಹೋದಮೇಲೆ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ವಹಿಸಿಕೊಂಡು ಅಲ್ಲಿ ಗಾಂಧಿಗಿರಿ ನಡೆಸುತ್ತಾರೆ. ತಮ್ಮ

ಅಭಿಪ್ರಾಯಗಳನ್ನು ಅಲ್ಲಿಯ ಭಾರತೀಯರ ಮಧ್ಯೆ ಪ್ರಚುರಪಡಿಸಲು ಇಂಗ್ಲಿಷ್ ಹಿಂದೀ ಗುಜರಾತೀ ಮತ್ತು ತಮಿಳು ಭಾಷೆಗಳಲ್ಲೂ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಹೊರಡಿಸುತ್ತಾರೆ. ರಾಜೀವ್ ಗೌಡ ಅವರು 'ದಿ ಹಿಂದೂ' ಪತ್ರಿಕೆಯಲ್ಲಿ 02.10.2010ರಲ್ಲಿ ಬರೆಯುವಂತೆ ಇದು ಗಾಂಧಿ ಅವರಿಗೆ ಇದ್ದ ಭಾರತೀಯ ಭಾಷಾ ಪ್ರೇಮವನ್ನು ತೋರಿಸುತ್ತದೆ. ಈಗ ಅವರು ಜೀವಿಸಿದ್ದರೆ ಭಾರತದಲ್ಲಿ ಭಾಷಾಪತ್ರಿಕೆಗಳು ಇಂಗ್ಲಿಷ್ ಪತ್ರಿಕೆಗಳನ್ನು ಮೀರಿ ಪ್ರಭಾವಯುತವಾಗಿ ಬೆಳೆಸಿರುವುದನ್ನು ಕಂಡು ಖುಷಿಪಡುತ್ತಿದ್ದರು ಎಂದು ರಾಜ್ಯಸಭಾ ಸದಸ್ಯ ರಾಜೀವ ಗೌಡ ಅವರು ಹೇಳಿರುವುದರಲ್ಲಿ ಸತ್ಯವಿದೆ.

ಈಗಿನ ಸಾಮಾಜಿಕ ಮಾಧ್ಯಮಗಳ ಆರ್ಭಟವನ್ನು ಗಾಂಧೀಜಿ ಹೇಗೆ ನೋಡುತ್ತಿದ್ದರು? ಎಂಬುದು ಕುತೂಹಲದ ಪ್ರಶ್ನೆ. ಗಾಂಧಿ ಅವರ ಇಡೀ ಜೀವನದ ಒಲವು ನಿಲುವುಗಳನ್ನು ಗಮನಿಸಿ ಹೇಳುವುದಾದರೆ ಜನಸಾಮಾನ್ಯರ ಕೈಯೊಳಗಿನ ಅಸ್ತ್ರವಾಗಿರುವ ಸಾಮಾಜಿಕ ಮಾಧ್ಯಮ ಅವರಿಗೆ ಅತ್ಯಂತ ಖುಷಿನೀಡುತ್ತಿತ್ತು. ಆದರೆ ಹೇಗೆ ಬೇಕಾದರೂ ಬಳಸಬಹುದಾದ ಈ ಮಾಧ್ಯಮದ ಮೇಲೆ ಸ್ವಯಂ ನಿಯಂತ್ರಣ ವಿಧಿಸಿಕೊಳ್ಳದಿದ್ದರೆ ಸುಳ್ಳು ಸುದ್ದಿಯನ್ನು ಹರಡುವ ಮೂಲಕ ಸಮಾಜಕ್ಕೆ ಅತ್ಯಂತ ಅಪಾಯಕಾರಿಯಾಗಬಹುದಾದ ಸಾಧ್ಯತೆಯನ್ನು ಅವರು ಒತ್ತಿ ಒತ್ತಿ ಹೇಳುತ್ತಿದ್ದರು. ಸುಳ್ಳು ಸುದ್ದಿಯು ಮಾನವತೆಗೆ ಮಾಡುವ ಅಪಮಾನ. ಸತ್ಯವೇ ಜನರಿಂದ ತಿರಸ್ಕರಿಸಲ್ಪಟ್ಟಾಗ 'ಯಂಗ್ ಇಂಡಿಯಾ' ಕೂಡಾ ಜಾಗ ಖಾಲಿ ಮಾಡಬೇಕಾಗುತ್ತದೆ ಎಂದು ಗಾಂಧಿ ಪದೇ ಪದೇ ಹೇಳುತ್ತಿದ್ದರು. ಪತ್ರಿಕಾ ಸ್ವಾತಂತ್ರ್ಯ ಎಂಬುದು ಯಾವ ದೇಶವೂ ಕಳೆದುಕೊಳ್ಳಲಾಗದ ಅನರ್ಘ್ಯ ಸಂಪತ್ತು ಎನ್ನುತ್ತಿದ್ದ ಗಾಂಧೀಜಿ, ನನ್ನ ಪ್ರಬಲ ನಂಬುಗೆಯೆಂದರೆ ಯಾವ ವ್ಯಕ್ತಿಯೂ ತನ್ನ ದೌರ್ಬಲ್ಯಗಳಿಗಾಗಿ ಅಲ್ಲದೇ ಬೇರೆ ಕಾರಣಗಳಿಗೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಾರ ಎಂದಿದ್ದರು.

ಅಂದರೆ ಒಂದು ದೇಶವಾಗಲೀ ಸಮಾಜವಾಗಲೀ ಸ್ವಾತಂತ್ರ್ಯ ಕಳೆದುಕೊಂಡರೆ ಅದಕ್ಕೆ ದೇಶ/ಸಮಾಜವೇ ಕಾರಣ. ಇದು ನಮ್ಮ ದೇಶದ ಚರಿತ್ರೆಯಲ್ಲೂ ಸ್ಪಷ್ಟವಾಗುವ ವಿಷಯ. ಭಾರತೀಯರು ತಮ್ಮ ತಮ್ಮಲ್ಲೇ ಹೊಡೆದುಕೊಂಡಿದ್ದರಿಂದ ಬ್ರಿಟೀಷರು ವ್ಯಾಪಾರಕ್ಕಾಗಿ ಬಂದವರು, ದೇಶವನ್ನು ಆಳಲು ಸಾಧ್ಯವಾಯಿತು!

ಗಾಂಧಿ ಅವರಿಗೆ ಸಾಮಾಜಿಕ ಮಾಧ್ಯಮಗಳು ಯಾಕೆ ಇಷ್ಟವಾಗುತ್ತಿದ್ದವು ಎಂದರೆ ಅವು ಜನಸಾಮಾನ್ಯರ ಮುಕ್ತ ಅಭಿವ್ಯಕ್ತಿಗೆ ವೇದಿಕೆ ಒದಗಿಸುವುದು. ಜನ ತಮಗೆ ಕಂಡಿದ್ದನ್ನೆಲ್ಲ ಬರೆಯಬಹುದು. ಇವುಗಳ ಅತಿಯನ್ನು ಕೂಡಾ ನಾವೀಗ ನೋಡುತ್ತಿದ್ದೇವೆ. ಮಾಧ್ಯಮಗಳಿಗೆ ಪ್ರಕಟಣ ಪೂರ್ವದಲ್ಲಿ ವಿಮರ್ಶೆಯೆಂಬುದು ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಸಮಾಜಿಕ ಜಾಲತಾಣಗಳ ಬರಹಗಳು ಸಾಕ್ಷಿ. ಜನರಿಂದ ಆಕ್ಷೇಪ ಬಂದಾಗ ಡಿಲೀಟ್ ಮಾಡಿ ಬುದ್ಧಿವಂತರಾಗಬಹುದು. ಆದರೆ ಒಮ್ಮೆ ಹೊರಬಂದ ವಿಷಯ ಎಲ್ಲೋ ಉಳಿದಿರುತ್ತದೆ. ಅದು ಸಮಾಜಕ್ಕೆ ಕಂಟಕಪ್ರಾಯವಾಗಿ ಪರಿಣಮಿಸಬಹುದು. ಈ ತೆರನ ಸ್ವೇಚ್ಛೆಯನ್ನು ಗಾಂಧಿ ಸಹಿಸುತ್ತಿರಲಿಲ್ಲ. ಸುಳ್ಳು ಸುದ್ದಿಗಳ ಬಗ್ಗೆ ಕೆಂಡಾಮಂಡಲವಾಗುತ್ತಿದ್ದ ಗಾಂಧೀಜಿ ಅದೇ ಕಾರಣಕ್ಕೆ ಸಾಮಾಜಿಕ ಮಾಧ್ಯಮಗಳು ಇಂದು ಸುಳ್ಳುಸುದ್ದಿಯ ಬೃಹತ್ ಉತ್ಪಾದಕರಾಗಿರುವುದನ್ನು ಖಂಡಿತಾ ಒಪ್ಪುತ್ತಿರಲಿಲ್ಲ. ಈ ಮಾಧ್ಯಮದ ಎಲ್ಲ ಸ್ವಾಗತಾರ್ಹ ಸಾಧ್ಯತೆಗಳ ನಡುವೆಯೇ ಸುಳ್ಳು ಸುದ್ದಿಯನ್ನು ಹರಡುವ ಕಾರಣದಿಂದ ಅವುಗಳನ್ನು ತಿರಸ್ಕರಿಸುವುದೇ ಲೇಸೆಂದು ಅವರು ಒತ್ತಾಯಿಸುತ್ತಿದ್ದರು. ಸಾಮಾಜಿಕ ಮಾಧ್ಯಮಗಳಿಂದ ಆಗುತ್ತಿರುವ ಒಳಿತಿಗಿಂತ ದೇಶದ್ರೋಹಿ ಬರಹಗಳಿಗೆ, ಮಾನಹಾನಿಗೆ ದುರ್ಬಳಕೆಗೊಳ್ಳುತ್ತಿರುವುದರ ವಿರುದ್ಧ ಅವರು ಉಪವಾಸ ಮಾಡುತ್ತಿದ್ದರು ಎಂದು ಧಾರಾಳವಾಗಿ ಹೇಳಬಹುದು.



ಭಾಷಾ ಕುಶಲ ಕರ್ಮಿ

"ಈ ಹತ್ತು ವರ್ಷಗಳಲ್ಲಿ (1904–1914) ನಾನು ಪೂರ್ವ ಯೋಚನೆ ಮಾಡದೇ ಬಳಸಿದ ಒಂದೇ ಒಂದು ಪದವಾಗಲೀ ಅಥವಾ ಬುದ್ಧ್ಯಾಪೂರ್ವಕವಾಗಿ ಯಾರನ್ನೋ ಮೆಚ್ಚಿಸಲು ಹಾಡಿ ಹೊಗಳಿದ, ಅತಿಶಯವಾಗಿ ಬರೆದ ಸಂದರ್ಭವಿಲ್ಲ. ನಿಜವೆಂದರೆ ನನಗೆ ಪತ್ರಿಕೋದ್ಯಮವೆಂಬುದು ಸ್ವನಿಯಂತ್ರಣದ ಪಾಠ ಹೇಳಿಕೊಟ್ಟಿತು. ಹಾಗೂ ನನ್ನ ಗೆಳೆಯರಿಗೆ ನನ್ನ ಯೋಚನೆಯ ಧಾಟಿಯನ್ನು ಮನದಟ್ಟುಮಾಡಿಕೊಟ್ಟಿತು" ಬರೆದ ಪ್ರತಿಯೊಂದು ಶಬ್ದವನ್ನೂ ಅತ್ಯಂತ ಪರಿಣಾಮಕಾರಿಯಾಗಿ ಮಾಡುವುದು ಹೇಗೆಂಬ ಬಗ್ಗೆ ಅವರ ನಿರಂತರ ಪ್ರಯತ್ನವಿತ್ತು.

ಗಾಂಧೀಜಿ ಅವರು ಅತ್ಯಂತ ಸರಳವಾಗಿ, ನೇರವಾಗಿ ಬರೆಯುತ್ತಿದ್ದರು ಎಂದು ಎಲ್ಲರಿಗೂ ಗೊತ್ತಿದೆ. ಬಹಳ ಜನರಿಗೆ ಗೊತ್ತಿರದ ವಿಷಯವೆಂದರೆ ಅವರು ಪ್ರತಿಯೊಂದು ಪದವನ್ನೂ ಅಳೆದು ಸುರಿದು ಬಳಸುತ್ತಿದ್ದರು ಎಂಬುದಾಗಿ ಅವರೇ ಹೇಳಿಕೊಂಡಿರುವುದು. ಒಬ್ಬ ಲೇಖಕರ ಪ್ರಕಾರ ಅವರ ಬರಹಗಳಲ್ಲಿ ಸಂಪಾದಿಸುವುದಾಗಲೀ ಸಂಕ್ಷೇಪಿಸುವುದಾಗಲೀ ಏನೂ ಇರಲಿಲ್ಲ. ಮತ್ತೆ ಅವರ ಅಭಿಪ್ರಾಯದಲ್ಲಿ ಎಷ್ಟು ಪ್ರಾಮಾಣಿಕತೆ ಇತ್ತು ಎಂದರೆ ಅದನ್ನು ಒಪ್ಪದಿರಲು ಸಾಧ್ಯವೇ ಇರಲಿಲ್ಲ. ಅವರ ಅಭಿಪ್ರಾಯಗಳನ್ನು ಒಪ್ಪದವರೂ ಅವರ ಅಭಿಪ್ರಾಯದ ಪ್ರಾಮಾಣಿಕತೆಯನ್ನು ಸಂಶಯಿಸುತ್ತಿರಲಿಲ್ಲ. ಹೀಗಾಗಿ ಅವರ ವಿರೋಧಿಗಳಿಗೆ ಕೂಡಾ ಅವರ ಬರವಣಿಗೆಯನ್ನು ಟೀಕಿಸಲು ಏನೂ ಇರುತ್ತಿರಲಿಲ್ಲ.

ಈ ರೀತಿ ನೀತಿಯನ್ನು ಇಂದಿನ ದಿನಮಾನದ ಮಾಧ್ಯಮ ಚಟುವಟಿಕೆಗಳಿಗೆ ಹೋಲಿಸಿದರೆ ಏನೆನ್ನಿಸುತ್ತದೆ? ಇದು ಹಿಂದಿನ ಶತಮಾನದಂತಲ್ಲ. ಧಾವಂತದ ಕಾಲ. ಟಿವಿ ವಾಹಿನಿಗಳಲ್ಲಿ ಬ್ರೇಕಿಂಗ್ ನ್ಯೂಸ್ ಸುದ್ದಿಗಳ ಕಾಲ. ಪ್ರತಿಯೊಂದು ವಾಹಿನಿಯ ಮಧ್ಯೆ ಮೊದಲು ಸುದ್ದಿ ಬಿತ್ತರಿಸುವ ಎಂಥಾ ಸ್ಪರ್ಧೆ ಇರುತ್ತದೆಯೆಂದರೆ ಅಲ್ಲಿ ಸುದ್ದಿಯನ್ನು ಸರಿಯಾಗಿ ಬರೆಯಲಿಕ್ಕೆ, ತಿದ್ದಲಿಕ್ಕೆ ಕೂಡಾ ಅವಕಾಶವಿರುವುದಿಲ್ಲ.

ಎಷ್ಟು ಕಾಗುಣಿತ ದೋಷಗಳಿದ್ದರೂ ಪರವಾಗಿಲ್ಲ, ಸುದ್ದಿಯನ್ನು ಎಲ್ಲರಿಗಿಂತ ಮೊದಲು ಕೊಡುವುದು ಮುಖ್ಯ ಎಂಬುದು ಇವತ್ತಿನ ಟಿವಿ ವಾಹಿನಿಗಳ ನೀತಿಯಿರುವಂತಿದೆ. ಹೀಗಾಗಿ ಬರುವ ಸುದ್ದಿಗಳು ಕಾಗುಣಿತ ದೋಷದಿಂದಾಗಿ ಕೆಲವೊಮ್ಮೆ ನಗೆಪಾಟಲಿಗೆ ಈಡಾಗುತ್ತವೆ. ಇಂಥ ಧಾವಂತವನ್ನು ಗಾಂಧೀಜಿ ಖಂಡಿತಾ ಒಪ್ಪುತ್ತಿರಲಿಲ್ಲ. ಏನೇ ಆಗಲಿ ಸುಳ್ಳು ಸುದ್ದಿ ಅಥವಾ ತಪ್ಪು ಮಾಹಿತಿ ನೀಡುವುದಕ್ಕಿಂತ ಪತ್ರಿಕೆ ಮುಚ್ಚುವುದು ಒಳ್ಳೇದು ಎಂಬುದು ಅವರ ದೃಢ ನಿಲುವು. 'ಗಾಂಧೀಜಿ ಸಾಹಿತಿಯಾಗಲು ಬಯಸಲಿಲ್ಲ ಆದರೆ ಅವರು

ಬರೆದಿದ್ದೆಲ್ಲ ಸಾಹಿತ್ಯವಾಗಿತ್ತು' ಎಂದು ಎಂ ವಿ ಕಾಮತ್ ಹೇಳಿದ್ದರಲ್ಲಿ ನಿಜವಿದೆ. ಅವರು ಭಾಷಾ ಶಿಲ್ಪಿ. ಭಾಷೆಯನ್ನು ಒಬ್ಬ ಕುಶಲಕರ್ಮಿಯ ಹಾಗೆ ಕೆತ್ತುತ್ತಿದ್ದರು ಅಥವಾ ಕಡೆಯುತ್ತಿದ್ದರು. ಸಣ್ಣ ಸಣ್ಣ ವಾಕ್ಯಗಳು, ಅದರಲ್ಲಿ ಸಹಜ ಹರಿವು, ಅತಿಯಾದ ಪದಪುಂಜ ಪ್ರದರ್ಶನವಿಲ್ಲ. ಗಾಂಧೀಜಿ ಬರಹಗಳು ಜಗತ್ತಿಗೆ ಮಾದರಿ. ಹೀಗಾಗಿ ಅವರು ಸರ್ವಕಾಲಕ್ಕೂ ಶ್ರೇಷ್ಠ ಪತ್ರಕರ್ತರು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈಗಿನ ಪತ್ರಕರ್ತರು ಗಾಂಧೀಜಿ ಅವರ ಬರಹದಿಂದ ಕಲಿಯುವುದು ಬಹಳಷ್ಟಿದೆ.



ಫ್ರೀಲಾನ್ಸಿಯಾಗಿ ಗಾಂಧೀಜಿ

ಗಾಂಧೀಜಿ 19ನೇ ವರ್ಷಕ್ಕೆ ಬ್ಯಾರಿಸ್ಟರ್ ಪದವಿ ಓದುವುದಕ್ಕಾಗಿ ಇಂಗ್ಲೆಂಡಿಗೆ ಹೋದರು. ಅಲ್ಲಿ ಮೊದಲ ಬಾರಿಗೆ ಪತ್ರಿಕೆಯನ್ನು ಓದಿದರು. ಅದು ಒಂದು ರೀತಿಯಲ್ಲಿ ಅವರಿಗೆ ರೋಮಾಂಚನವನ್ನುಂಟು ಮಾಡಿತು. ತಾನೂ ಪತ್ರಿಕೆಗೆ ಬರೆಯಬೇಕೆಂಬ ಆಸೆ ಅವರಿಗೆ ಹುಟ್ಟಿದ್ದು ಇಂಗ್ಲೆಂಡಿನಲ್ಲಿ. ಅಲ್ಲಿನ ವೆಜಿಟೇರಿಯನ್ ಸೊಸೈಟಿ ಹೊರತರುತ್ತಿದ್ದ 'ವೆಜಿಟೇರಿಯನ್' ಪತ್ರಿಕೆಗೆ ಫ್ರೀಲಾನ್ಸಿಯಾಗಿ ಲೇಖನಗಳನ್ನು ಬರೆಯತೊಡಗಿದರು.

ಮೂರು ವರ್ಷದ ಇಂಗ್ಲೆಂಡ್ ವಾಸದಲ್ಲಿ ಅವರು ಒಂಬತ್ತು ಲೇಖನಗಳನ್ನು 'ವೆಜಿಟೇರಿಯನ್' ಪತ್ರಿಕೆಗೆ ಬರೆದರು. ಸಂಪ್ರದಾಯಗಳು, ಹಬ್ಬಗಳು, ಆಹಾರ ಪದ್ಧತಿಗಳು ಮುಂತಾದವುಗಳ ಬಗ್ಗೆ ಅವರ ಲೇಖನಗಳಿದ್ದವು. ಇಂಗ್ಲೆಂಡಿನಿಂದ ವಾಪಸ್ಸು ಬರುವಾಗ ಅವರ ಹಡಗು ಭೀಕರ ಬಿರುಗಾಳಿಗೆ ಸಿಕ್ಕು ಆತಂಕದ ದಿನಗಳನ್ನು ಎದುರಿಸಬೇಕಾಯಿತು. ಗಾಂಧೀಜಿ ಈ ಬಿರುಗಾಳಿಯ ವರ್ಣನೆಮಾಡಿ 'ವೆಜಿಟೇರಿಯನ್' ಪತ್ರಿಕೆಗೆ ಬರೆದ ಲೇಖನ ಅವರ ಬರವಣಿಗೆಯ ಸೊಗಸುಗಾರಿಕೆಗೆ ಸಾಕ್ಷಿ ಒದಗಿಸುತ್ತದೆ.

ಬ್ಯಾರಿಸ್ಟರ್ ಆದಮೇಲೆ 1893ರ ಏಪ್ರಿಲ್‌ನಲ್ಲಿ ಅವರು ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ ಬೆಳೆಸಿದರು. ಆಗ ದಕ್ಷಿಣ ಆಫ್ರಿಕಾದ ಪರಿಸ್ಥಿತಿ ರಾಜಕೀಯವಾಗಿ ಸರಿಯಿರಲಿಲ್ಲ. ಆಗ ಅವರು ಭಾರತದಲ್ಲಿ ದಾದಾಭಾಯಿ ನವರೋಜಿ ಅವರು ನಡೆಸುತ್ತಿದ್ದ 'ಇಂಡಿಯಾ' ಪತ್ರಿಕೆಗೆ ದಕ್ಷಿಣ ಆಫ್ರಿಕಾದ ಬಾತ್ಮೀದಾರರಾಗಿ ನಿಯತವಾಗಿ ಅಲ್ಲಿಂದ ವರದಿಗಳನ್ನು ಕಳಿಸುತ್ತಿದ್ದರು. ಇದು ಅವರ ಎರಡನೇ ಪತ್ರಿಕೋದ್ಯಮ ಅನುಭವ. ಬೊಯೆರ್ ಯುದ್ಧದ ಸಂದರ್ಭದಲ್ಲಿ ಅವರು ಯುದ್ಧ ಬಾತ್ಮೀದಾರರಾಗಿ ಬದಲಾದರು! ಯುದ್ಧ ಭೂಮಿಯಿಂದ ವರದಿಮಾಡಿದ್ದೊಂದೇ ಅಲ್ಲ, ಅಲ್ಲಿ ಗಾಯಗೊಂಡ ಸೈನಿಕರಿಗೆ ಭಾರತೀಯ ಸ್ವಯಂ ಸೇವಕರ ಪಡೆಯನ್ನು ಕರೆದುಕೊಂಡು ಹೋಗಿ ಶುಶ್ರೂಷೆ ಮಾಡುತ್ತಿದ್ದರು. ಬಹುಶಃ ವರದಿಗಾರಿಕೆಗೆ ಸಂಬಂಧಪಡದ ಮಾನವೀಯ ಮುಖವಿದು. ಇದು ಯಾರ ಗಮನಕ್ಕೂ ಬಂದಂತಿಲ್ಲ. ಗಾಂಧಿ ಮೂಲತಃ ಮಾನವೀಯ ಅನುಕಂಪ ಉಳ್ಳವರಾಗಿದ್ದರಿಂದ ಈ ಸೇವೆಯಲ್ಲಿ ತೊಡಗಿಸಿಕೊಂಡರು.

ಗಾಂಧೀಜಿ ತನ್ನ ಮೊದಲ ಬರೆವಣಿಗೆ ಮಾಡಿದ ವೆಜಿಟೇರಿಯನ್ ಪತ್ರಿಕೆಗೆ ಭಾರತೀಯ ಸಸ್ಯಾಹಾರದ ಬಗ್ಗೆ ಸರಣಿ ಲೇಖನಗಳನ್ನು ಬರೆದರು. ಮೊದಲ ಲೇಖನದಲ್ಲಿ ಭಾರತೀಯ ಜಾತಿ ವ್ಯವಸ್ಥೆಯ ಬಗ್ಗೆ

ಪರಿಚಯವಿತ್ತು. ನಂತರದ ದಿನಗಳಲ್ಲಿ ಹೇಗೆ ಭಾರತೀಯ ಸಸ್ಯಾಹಾರ ಯುರೋಪಿಯನ್ ಮಾದರಿಗಿಂತ ಭಿನ್ನ ಎಂಬ ಬಗ್ಗೆ ಲೇಖನವಿತ್ತು. ಅದರಲ್ಲಿ ಇಂಗ್ಲಿಷರಿಗಿಂತ ಭಿನ್ನವಾಗಿ ಭಾರತೀಯರು ಪ್ರತಿಯೊಂದು ಪದಾರ್ಥವನ್ನೂ ಪ್ರತ್ಯೇಕವಾಗಿ ತೆಗೆದಿಟ್ಟುಕೊಳ್ಳುವುದಿಲ್ಲ. ಅವರು ಎಲ್ಲವನ್ನೂ ಮಿಕ್ಸ್ ಮಾಡುತ್ತಾರೆ. ಉದಾಹರಣೆಗೆ ಭಾರತೀಯರು ಬೇಯಿಸಿದ ತರಕಾರಿಯನ್ನು ಹಾಗೇ ತಿನ್ನಲು ಇಷ್ಟಪಡುವುದಿಲ್ಲ, ಬದಲಾಗಿ ಅದಕ್ಕೆ ಕಾಳುಮೆಣಸು, ಉಪ್ಪು, ಲವಂಗ, ದಾಲ್ಚಿನಿ, ಅರಿಶಿಣ, ಸಾಸಿವೆ ಕಾಳಿನ ಒಗ್ಗರಣೆಯನ್ನು ಹಾಕಿಯೇ ತಿನ್ನುವುದು. ಭಾರತೀಯ ಆಹಾರ ಬಹಳ ಶ್ರೀಮಂತವಾದುದು ಆದರೆ ಹಣ್ಣುಗಳನ್ನು ತಿನ್ನುವುದರಲ್ಲಿ ಮಾತ್ರ ಭಾರತೀಯರು ಬಹಳ ಕಂಜೂಸು. ಈ ಯಾವ ಭಕ್ಷ್ಯಗಳಲ್ಲೂ ಹಣ್ಣುಗಳಿರುತ್ತಿರಲಿಲ್ಲ' ಎಂದು ಬರೆಯುತ್ತಾರೆ.

ಭಾರತದಲ್ಲಿ ಕುಡಿತದ ದುಶ್ಚಟದ ಬಗ್ಗೆ ಬರೆಯುತ್ತಾ ಅದು ಮಾನವ ಕುಲದ ವೈರಿ, ನಾಗರೀಕತೆಗೆ ತಟ್ಟಿದ ಶಾಪ, ಬ್ರಿಟಿಷ್ ಆಡಳಿತದ ಅತೀ ಕ್ರೂರ ಕೊಡುಗೆ ಎನ್ನುತ್ತಾರೆ. ನೆನಪಿಡಿ, ಇವನ್ನು ಅವರು ಬರೆಯುವುದು ಇನ್ನೂ ಪತ್ರಿಕೋದ್ಯಮಕ್ಕೆ ಕಾಲಿಡುವ ಪೂರ್ವದಲ್ಲೇ. ಅಂದರೆ ಆರಂಭದಲ್ಲೇ ಗಾಂಧೀಜಿ ದೊಡ್ಡ ಪತ್ರಕರ್ತರಾಗುವ ಲಕ್ಷಣ ತೋರಿದ್ದರು ಎಂದರೆ ತಪ್ಪಲ್ಲ.



ಸುದ್ದಿಯಾಗಲು ಬಯಸದ ಗಾಂಧಿ

ಗಾಂಧಿ ಅವರ ಜೊತೆ ಪ್ರಯಾಣ ಮಾಡಿ ಅವರಿಗೆ ಪತ್ರಿಕೋದ್ಯಮದ ಶಿಷ್ಯನಂತೆ ಕೆಲಸ ಮಾಡಿದ ಸೈಲೇನ್ ಚಟರ್ಜಿ ಒಂದು ಕುತೂಹಲದಾಯಕ ಘಟನೆಯನ್ನು ನಿರೂಪಿಸುತ್ತಾರೆ.

ಸಪ್ಟೆಂಬರ್ 1947ರಲ್ಲಿ ಗಾಂಧಿ ದೆಹಲಿಗೆ ಭೇಟಿ ಕೊಟ್ಟರು. ಆಗ ಅವರು ಡಾ.ಝಾಕೀರ್ ಹುಸೇನ್ ಸ್ಥಾಪಿಸಿದ್ದ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಶೈಕ್ಷಣಿಕ ಸಂಸ್ಥೆಗೆ ಭೇಟಿ ನೀಡಿದರು. ಅವರು ಕಾರಿಂದ ಇಳಿಯುವಾಗ ಕಾರಿನ ಬಾಗಿಲು ಹಾಗೂ ಕಾರಿನ ದೇಹದ ನಡುವೆ ಅವರ ಬೆರಳುಗಳು ಸಿಕ್ಕಿ ಎರಡು ಬೆರಳುಗಳು ನುಜ್ಜುಗುಜ್ಜಾದವು. ರಕ್ತ

ಸೋರುತ್ತಿತ್ತು, ಜಾಮಿಯಾದವರು ವೈದ್ಯರನ್ನು ಕರೆತರಲು ಓಡಿದರು. ಆದರೆ ಗಾಂಧೀಜಿ ಬೇಡವೆಂದರು. ಹಾಗೂ ಒಂದು ಲೋಟ ನೀರು ಹಾಗೂ ಬಟ್ಟೆಯ ತುಂಡು ತರಲು ಹೇಳಿದರು. ತಣ್ಣೀರಿನಲ್ಲಿ ತಮ್ಮ ಬೆರಳುಗಳನ್ನು ಅದ್ದಿ ಇಟ್ಟುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ರಕ್ತ ಹರಿಯುವುದು ನಿಂತಿತು. ಬಟ್ಟೆಯನ್ನು ತೆಗೆದುಕೊಂಡು ಬೆರಳುಗಳಿಗೆ ತಾವೇ ಬ್ಯಾಂಡೇಜು ಮಾಡಿಕೊಂಡರು. ಕಾರ್ಯಕ್ರಮದ ಸಮಯವಾದಾಗ ನೇರವಾಗಿ ಕಾರ್ಯಕ್ರಮದ ವೇದಿಕೆಗೆ ನಡೆದುಬಿಟ್ಟರು. ಅವರ ಜೊತೆಯೇ ಇದ್ದ ನಾನು 'ತಮಗೆ ತಾವೇ ವೈದ್ಯರಾದ ಗಾಂಧಿ' ಎಂಬ ಶೀರ್ಷಿಕೆಯಡಿ ನಡೆದ ಘಟನೆಯನ್ನು ವರದಿಯಾಗಿ ಬರೆದು ಸುದ್ದಿ ಸಂಸ್ಥೆಗೆ ಕಳುಹಿಸಲು ಸಿದ್ಧವಾಗಿದ್ದೆ. ನಾನು ಏನು ಬರೆದಿದ್ದೇನೆಂದು ಗಾಂಧೀಜಿ ಓದಿದರು. ಚೆನ್ನಾಗಿ ಬರೆದಿದ್ದೀಯಾ ಎಂದು ಬೆನ್ನು ತಟ್ಟಿದರು. ಆದರೆ ಇದನ್ನು ಪ್ರಕಟಣೆಗೆ ಕೊಡಬೇಡ ಎಂದರು. ಈ ಸುದ್ದಿ ಪ್ರಕಟಗೊಂಡರೆ ನೂರಾರು ಜನ ಓದಿ ನನಗೆ ಬರೆಯುತ್ತಾರೆ. ಟೆಲಿಗ್ರಾಂಗಳನ್ನು ಕಳುಹಿಸುತ್ತಾರೆ. ಇದು ಜನಸಾಮಾನ್ಯರ ಬದುಕಿನ ಅನಗತ್ಯ ಹೊರೆಯಾಗುವ ಜೊತೆಗೆ ಅವರೆಲ್ಲರಿಗೂ ಉತ್ತರಿಸುವ ಹೊಣೆಯನ್ನು ನನ್ನ ಮೇಲೆ ಹೊರಿಸುತ್ತದೆ. ಅದಕ್ಕಾಗಿ ಬೇಡ ಎಂದರು ಎಂದು ಸಯಲೇನ್ ಚಕ್ರವರ್ತಿ ಅವರು 'ಹಿಂದೂಸ್ತಾನ ಟೈಂಸ್' ಗೆ ಬರೆದ ಲೇಖನದಲ್ಲಿ ನೆನೆಸಿಕೊಳ್ಳುತ್ತಾರೆ.

ಇಂದಿನ ಪ್ರಚಾರ ಪ್ರಿಯ ರಾಜಕಾರಣಿಗಳೊಂದಿಗೆ ನಿಷ್ಠುರವಾದಿ ಗಾಂಧಿ ಅವರನ್ನು ಹೋಲಿಸಲಾಗದು. ಇಂದಿನ ಮಂತ್ರಿ ಮಹೋದಯರು, ರಾಜಕಾರಣಿಗಳು ಸರ್ಕಾರಿ ಸವಲತ್ತುಗಳನ್ನು ವಿತರಿಸುವಾಗಲೂ ತಮ್ಮ ಜೇಬಿಂದ ತೆಗೆದು ಕೊಟ್ಟಂತೆ ಪ್ರಚಾರ ಬಯಸುವುದನ್ನು ಕಾಣುತ್ತೇವೆ. ರಾತ್ರಿ ತಿಂದದ್ದು ಹೆಚ್ಚಾಗಿ ರಾಜಕಾರಣಿ ಬೆಳಿಗ್ಗೆ ವಾಂತಿ ಮಾಡಿಕೊಂಡರೂ ಅದು ಅಂತಾರಾಷ್ಟ್ರೀಯ ಸುದ್ದಿಯಾಗಬೇಕೆಂದು ಬಯಸುತ್ತಾರೆ. ಛಾಯಾಚಿತ್ರ ಸಮೇತ

ವರದಿ ಹಾಕಿಸಿಕೊಳ್ಳಲು ಹಾತೊರೆಯುತ್ತಾರೆ. ರಾಜಕಾರಣಿಗಳಿಂದ ಬೈಟ್ ತೆಗೆದುಕೊಳ್ಳುವ ವಾಹಿನಿಯ ವರದಿಗಾರ ಬೇಡವೆಂದರೂ ಅವನ ಜೇಬಿಗೆ ನೋಟುಗಳ ಕಂತೆ ಬಂದು ಬೀಳುತ್ತದೆ. (ಅಪವಾದಗಳಿರಬಹುದು) ಅಧಿಕಾರಸ್ಥರು ದೋಸೆ ತಿಂದರೂ, ಇಡ್ಲಿ ತಿಂದರೂ ಸುದ್ದಿಯಾಗುತ್ತದೆ.ಇದರಲ್ಲಿ ಸಾರ್ವಜನಿಕ ಮುಖ ಕಾಣುವ ವರದಿಗಾರರು ಹಾಗೂ ತಿನ್ನುವುದರಲ್ಲೂ ಸುದ್ದಿಮಾಡಲು ಬಯಸುವ ನಾಯಕರು ಸಮಾನ ತಪ್ಪಿತಸ್ಥರು. ಬದಲಾಗಿ ಗಾಂಧೀಜಿ ತಮ್ಮ ಬೆರಳಿಗೆ ಗಾಯವಾಗಿದ್ದು ವರದಿಯಾಗದಂತೆ ತಡೆದ ಘಟನೆಯನ್ನು ಹಾಗೂ ಅವರು ನೀಡುವ ಕಾರಣವನ್ನು ಗಮನಿಸಿ. ಜನರಿಗೆ ಅನಗತ್ಯ ಖರ್ಚಾಗಬಾರದೆಂಬ ದೂರದೃಷ್ಟಿ ಗಾಂಧಿಯಂಥ ನಿರಾಸಕ್ತಿ ಯೋಗಿಗೆ ಮಾತ್ರ ಸಾಧ್ಯ.



ಬೀಭತ್ಸ ಪತ್ರಿಕೆಗಳು

'ಪ್ರಜಾಪ್ರಭುತ್ವ ಕೆಲಸ ಮಾಡುವಂತಾಗಲು ಏನು ಬೇಕು ಎಂದರೆ ಕೇವಲ ವಾಸ್ತವಾಂಶಗಳಲ್ಲ. ಆದರೆ ಸೂಕ್ತವಾದ ಶಿಕ್ಷಣ ಬೇಕು. ಪತ್ರಿಕೋದ್ಯಮದ ನೈಜ ಕರ್ತವ್ಯವೆಂದರೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು, ಅವರ ತಲೆಯನ್ನು ಬೇಕಾದ ಮತ್ತು ಬೇಡವಾದ ಮಾಹಿತಿಗಳಿಂದ ತುಂಬಿಸುವುದಲ್ಲ. ಅದಕ್ಕೆ ಒಬ್ಬ ಪತ್ರಕರ್ತನಿಗೆ ಯಾವುದನ್ನು, ಯಾವಾಗ ವರದಿ ಮಾಡಬೇಕು ಎಂಬ ನಿಷ್ಕರ್ಷೆಯ ಯೋಗ್ಯತೆ ಇರಬೇಕು. ಪತ್ರಿಕೆಯನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಕರೆಯುತ್ತಾರೆ. ಇದು ಒಂದು ಶಕ್ತಿಯುತ ಆಯುಧ ಎಂಬುದು ನಿಜ. ಆದರೆ ಈ ಶಕ್ತಿಯನ್ನು ದುರ್ಬಳಕೆ ಮಾಡುವುದು ಅಪರಾಧ' ಎನ್ನುತ್ತಾರೆ ಗಾಂಧೀಜಿ.

ಮೇ 28, 1931 ರಂದು 'ಯಂಗ್ ಇಂಡಿಯಾ'ದ ಸಂಪಾದಕೀಯದಲ್ಲಿ ಗಾಂಧೀಜಿ ಬರೆಯುತ್ತಾರೆ: "ನನ್ನೆದುರಿಗೆ ಭಯಂಕರ ವಿಷಯಗಳನ್ನು ಹೊಂದಿರುವ ಪತ್ರಿಕೆಗಳ ಪ್ರತಿಗಳಿವೆ. ಅಲ್ಲಿ ಕೋಮುವಾದ ಪ್ರಚೋದಿಸುವ, ಸುಳ್ಳು ಸುದ್ದಿಗಳನ್ನು ಹರಡುವ, ರಾಜಕೀಯ ಹಿಂಸೆಯನ್ನೂ ಕೊಲೆಗಳನ್ನು ಪ್ರೋತ್ಸಾಹಿಸುವ ಹುನ್ನಾರಗಳಿವೆ. ಇಂಥ ಪತ್ರಿಕೆಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಕಷ್ಟವಲ್ಲ. ಆದರೆ ಇವೆಲ್ಲ ತಾತ್ಪೂರ್ತಿಕ ಕ್ರಮಗಳಾಗಿರುತ್ತವೆ. ಇವು ಬರಹವನ್ನು ಖಂಡಿಸುತ್ತವೆ. ಬರೆದವರನ್ನು ದಂಡಿಸುತ್ತವೆ. ಆದರೆ ಬರೆಯುವವರ ಮನೋಭಾವವನ್ನು ಬದಲುಮಾಡುವುದಿಲ್ಲ". ಸ್ವಯಂ ನಿಯಂತ್ರಣವೇ ಇದಕ್ಕೆ ಮದ್ದು ಎಂಬುದು ಅವರ ಅಭಿಮತವಾಗಿತ್ತು.ಇವತ್ತಿನ ಪತ್ರಿಕೆಗಳಲ್ಲಿ ಹಾಗೂ ಟಿವಿ ವಾಹಿನಿಗಳಲ್ಲಿ ಬರುವ ಭೀಭತ್ಸ ವರದಿಗಳನ್ನು ನೋಡಿದ್ದರೆ ಗಾಂಧೀಜಿ ಏನು ಹೇಳುತ್ತಿದ್ದರು? ಏನೂ ಹೇಳುತ್ತಿರಲಿಲ್ಲ ಎನಿಸುತ್ತದೆ. ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು ಎಂಬುದೇ ಅವರನ್ನು ಸರಿಯಾಗಿ ಅರ್ಥೈಸುವ ರೀತಿ.

ಗಾಂಧೀಜಿಗೆ ಪತ್ರಿಕೆಗಳು ಮಾಡುವ ತಪ್ಪುಗಳ ವಿರುದ್ಧ ಸರ್ಕಾರ ತೆಗೆದುಕೊಳ್ಳುವ ನಿಯಂತ್ರಣ ಕ್ರಮಗಳ ಬಗ್ಗೆ ಒಪ್ಪಿಗೆ ಇರಲಿಲ್ಲ ಎಂಬುದನ್ನು ಗಮನಿಸಬೇಕು. ಬಹುಶಃ ಬೆರಳು ಕೊಟ್ಟರೆ ಹಸ್ತ ನುಂಗುವ ಸರ್ಕಾರಗಳ ಕುಯುಕ್ತಿ ಅವರಿಗೆ ಗೊತ್ತಿತ್ತು. ಅದಕ್ಕೇ ನಿಯಂತ್ರಣ ಹೊರಗಿನಿಂದ ಹೇರಲ್ಪಡುವ ಬದಲು ಒಳಗಿನಿಂದ ಬರಬೇಕೆಂಬುದು ಅವರ ಆಶಯವಾಗಿತ್ತು. ಸಂಪಾದಕರುಗಳು ಜವಾಬ್ದಾರಿಯಿಂದ ವರ್ತಿಸಬೇಕು. ಕರ್ತವ್ಯ ಎಂಬಂತೆ ಪತ್ರಿಕಾ ಸೇವೆಯನ್ನು ಕೈಗೊಳ್ಳಬೇಕು. ಪತ್ರಿಕೋದ್ಯಮ ನಡೆಯ ಬೇಕಾದುದೇ ಈ ರೀತಿಯಲ್ಲಿ ಎಂಬುದಾಗಿ ಅವರು ಹೇಳುತ್ತಿದ್ದರು. ಇಷ್ಟಾಗಿ ಕ್ರೈಮ್ ವರದಿಗಳೇ ಸುದ್ದಿಯ ಸಂಚಿಕೆಗಳಾಗುವುದನ್ನು ಅವರು ಒಪ್ಪುತ್ತಿದ್ದರೇ? ಎಂಬ ಪ್ರಶ್ನೆ ಉದ್ಭವಿಸಬಾರದು. ಕ್ರೈಮ್ ಕಾರ್ಯಕ್ರಮಗಳು ನಾವೆಷ್ಟು ಗಾಂಧಿ ಪ್ರಣೀತ ಪತ್ರಿಕೋದ್ಯಮದಿಂದ ದೂರ ಬಂದಿದ್ದೇವೆ ಎಂದು ಹೇಳಲು ಕನ್ನಡಿ ಹಿಡಿಯುತ್ತವೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?



ಅವರಿಗೆ ಅವರೇ ಸಾಟಿ

ಗಾಂಧೀಜಿ ಅವರ ವೃತ್ತಿಯಾವುದು? ಈ ಪ್ರಶ್ನೆಗೆ ದೊರೆಯುವ ಉತ್ತರಗಳು ಕುತೂಹಲಕರವಾಗಿವೆ. ಗಾಂಧೀ ಸ್ವತಹ ಕೋರ್ಟಿನ ದಾಖಲೆಗಳಲ್ಲಿ ತಮ್ಮ ವೃತ್ತಿ ಕೃಷಿ ಮತ್ತು ನೂಲುವುದು ಎಂದು ದಾಖಲಿಸುತ್ತಾರೆ! ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಕೃಷಿ ಮಾಡಿದ ಅನುಭವವಿರುವುದಾಗಿ ತಮ್ಮ ಆತ್ಮಕತೆಯಲ್ಲಿ ದಾಖಲಿಸಿದ್ದಾರೆ. ನೂಲುವುದು ಅವರ ಜೀವನದ ವ್ರತವಾಗಿತ್ತು. ಚರಕ ಹಿಡಿದು ನೂಲುವುದು ತಮ್ಮ ವೃತ್ತಿಯೆಂಬುದಾಗಿ ಗಾಂಧೀಜಿ ಕರೆದುಕೊಂಡಿರುವುದರಲ್ಲಿ ಇನ್ನೊಂದು ಕಾರಣವಿರುವುದಾಗಿ

ಗಾಂಧೀಜಿ ಅವರ ಮೊಮ್ಮೊಗ ರಾಜಮೋಹನ ಗಾಂಧೀ ಹೇಳುತ್ತಾರೆ. ಅದೆಂದರೆ, ನೂಲುವವರನ್ನು ಗುಜರಾತಿನಲ್ಲಿ ಅಸ್ಪ್ರಶ್ಯರನ್ನಾಗಿ ನೋಡುತ್ತಾರೆ, ಅಸ್ಪ್ರಶ್ಯತೆಯನ್ನು ಹೋಗಲಾಡಿಸಲು ಗಾಂಧಿ ತಮ್ಮನ್ನು ಅವರ ಜೊತೆ ಗುರುತಿಸಿಕೊಂಡಿರಬೇಕೆಂದು ರಾಹಮೋಹನ ಗಾಂಧೀ ವಾದಿಸುತ್ತಾರೆ.

ಗಾಂಧೀಜಿ ತಮ್ಮನ್ನು ವೃತ್ತಿನಿರತ ಪತ್ರಕರ್ತನೆಂದು ಕರೆದುಕೊಳ್ಳದಿರುವುದು ಅಚ್ಚರಿಯೆನಿಸುತ್ತದೆ. ವಿಶೇಷವೆಂದರೆ ಅವರು ಜೀವನದಲ್ಲಿ ಅತಿ ಹೆಚ್ಚು ಕಾಲ ತಪಸ್ಸಿನಂತೆ ಕೈಗೊಂಡ ವೃತ್ತಿಯಿದ್ದರೆ ಅದು ಪತ್ರಿಕೋದ್ಯಮವೇ. 1903 ರಿಂದ 1948ರಲ್ಲಿ ಹುತಾತ್ಮರಾಗುವವರೆಗೂ ಅಂದರೆ ಸುಮರು 45 ವರ್ಷ ಗಾಂಧೀ ಪತ್ರಿಕೆಗೆ ಬರೆಯುವುದರಲ್ಲಿ ನಿರತರಾಗಿದ್ದರು. ಜೈಲಲ್ಲಿ ಇದ್ದಾಗಲೂ, ರೈಲಿನಲ್ಲಿ ಮೂರನೇ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುವಾಗಲೂ ವೃತ್ತಿಪರ ಬರಹಗಾರರಂತೆ ಬರೆದರು. ಪತ್ರಿಕೆಗೆ ಸಮಯಕ್ಕೆ ಸರಿಯಾಗಿ ಬರೆದು ಕೊಡುವ ಬದ್ಧತೆಗೆ ಒಂದಿನಿತೂ ಲೋಪವಾಗದಂತೆ ನೋಡಿಕೊಂಡರು.

ಗಾಂಧೀಜಿ ಅವರ ಕಾಲದಲ್ಲಿ ಪತ್ರಿಕೋದ್ಯಮವೇ ಇಂದಿನ ಕಾಲದ ವೃತ್ತಿಪರತೆಯನ್ನು ತಲುಪಿರಲಿಲ್ಲ. ಅಂದು ಅಲ್ಲಿ ಕೆಲಸ ಮಾಡುವ ಹೆಚ್ಚಿನವರಿಗೆ ಸೇವೆಯಾಗಿತ್ತೇ ವಿನಾ 'ಹೊಟ್ಟೆ ತುಂಬಿಸುವ ವೃತ್ತಿಯಾಗಿರಲಿಲ್ಲ. ಪತ್ರಿಕೆಗೆ ಬಂಡವಾಳ ಹೂಡಿದವರಿಗೂ ಅದು ದೊಡ್ಡ ಮೊತ್ತದ ಹಣ ತರುವ ಉದ್ಯಮವಾಗಿ ಕಂಡಿರಲಿಲ್ಲ. ಇಷ್ಟಾಗಿಯೂ ಬದ್ಧತೆ, ಬರೆವಣಿಗೆ, ಪತ್ರಿಕೆ ಮಾಡಬೇಕಾದ ಕೆಲಸದ ಕುರಿತು ಸ್ಪಷ್ಟತೆ, ಮುಂತಾದ ದೃಷ್ಟಿಗಳಿಂದ ಗಾಂಧೀಜಿ ಸರ್ವ ಕಾಲಕ್ಕೂ ಮಾದರಿ ಎನಿಸುವ ಪತ್ರಕರ್ತರೆನಿಸಿಕೊಳುತ್ತಾರೆ. ಹಿರಿಯ ಪತ್ರಕರ್ತರು ಅನೇಕರು ಅವರನ್ನು ಜಗತ್ತಿನ ಶ್ರೇಷ್ಠ ಪತ್ರಕರ್ತರೆಂದು ಕರೆದಿದ್ದಾರೆ. ಇದರಲ್ಲಿ ಅತಿಶಯವೇನೂ ಇಲ್ಲ.

ಆದರೆ ಒಂದು ಶತಮಾನದ ಬಳಿಕ ಪತ್ರಿಕೋದ್ಯಮವು ದುಡ್ಡು ಬಿತ್ತಿ ದುಡ್ಡು ಬೆಳೆಯುವ ಉದ್ಯಮವಾಗಿರುವ ಈ ಸಂದರ್ಭದಲ್ಲಿ ಗಾಂಧೀಜಿ ಪತ್ರಕರ್ತರೇ ಅಲ್ಲ, ಅವರ ತತ್ವಗಳನ್ನು ನೆಚ್ಚಿಕೊಂಡು ಈ ಕಾಲದಲ್ಲಿ ಪತ್ರಿಕೆ ನಡೆಸುವುದು ಸಾಧ್ಯವೇ ಇಲ್ಲ ಮುಂತಾದ ಆಕ್ಷೇಪಗಳು ಕೇಳಿಬರುತ್ತಿವೆ. ಅವರನ್ನು ಕೇವಲವಾಗಿ ಕಾಣುವ ಪ್ರಯತ್ನಗಳೂ ನಡೆದಿವೆ. ಇಂದಿನ ದಿನದ ಪತ್ರಿಕೋದ್ಯಮದ ಧಾವಂತಕ್ಕೆ, ಸತ್ಯಾಸತ್ಯತೆಯನ್ನು ಪರೀಕ್ಷಿಸದೇ ಸುದ್ದಿಯನ್ನು ಪ್ರಕಟಿಸಬೇಕಾದ ಕೆಟ್ಟ ಸ್ಪರ್ಧೆಯ ಸ್ಥಿತಿಗೆ ಗಾಂಧೀಜಿ ಒಪ್ಪುತ್ತಿರಲಿಲ್ಲ ಎಂಬುದು ನಿಜ. ಅದು ಜಗತ್ತಿನ ನಷ್ಟವೇ ವಿನಾ ಇದರಿಂದ ಗಾಂಧೀಜಿ ಸಣ್ಣವರಾಗುವುದಿಲ್ಲ. ಕಾಲಕಾಲಕ್ಕೆ ಬರೆಯುವ ಬದ್ಧತೆಯಲ್ಲಿ ಸತ್ಯವನ್ನು ಪ್ರಮಾಣೀಕರಿಸಿಕೊಂಡು ಬರೆಯುವ ನೀತಿಗೆ ಅವರು ಬಳಸುವ ಅತ್ಯಂತ ಸರಳ (ಇನ್ನೂ ಸರಳವಾಗುವುದು ಸಾಧ್ಯವೇ ಇಲ್ಲ!) ಪದಗಳಿವೆ. ಸ್ಪಷ್ಟತೆಗೆ ಎಲ್ಲ ಕಾಲಕ್ಕೂ ಗಾಂಧೀಜಿಯವರಿಗೆ ಅವರೇ ಸಾಟಿ ಎಂಬುದರಲ್ಲಿ ಎರಡು ಮಾತಿಲ್ಲ. ಜಗತ್ತಿನಲ್ಲಿ ಅವರಿಗೆ ಹೋಲಿಸಬಹುದಾದ ಇನ್ನೊಬ್ಬ ನಿಷ್ಠುರ ಪತ್ರಕರ್ತ ಹುಟ್ಟಿ ಬರಲಿಲ್ಲ.



ಪ್ರಾಮಾಣಿಕತೆಯೇ ಅವರ ಶಕ್ತಿ

ಬರಹಗಾರರಾಗಿ ಗಾಂಧಿ ಅವರು ಯಾಕೆ ವಿಭಿನ್ನರಾಗುತ್ತಾರೆ, ಜಗತ್ತಿನಲ್ಲೇ ಇನ್ನೊಬ್ಬರು ಹೋಲಿಕೆ ಇಲ್ಲದವರಾಗಿ ಕಾಣುತ್ತಾರೆ ಎಂಬುದಕ್ಕೆ ಸಮರ್ಥನೆಯಾಗಿ ಅವರ ಮೂರು ಹೇಳಿಕೆಗಳನ್ನು ಗಮನಿಸಬಹುದೇನೋ.

1) I write not a letter without deep conviction.
2) I am of the opinion that it is better not to publish a report at all, if it has not been found possible to verify.
3) The columns of Young India are open to all who have any grievence against non cooperation movement.

'ಆಳವಾದ ಬದ್ಧತೆಯಿಲ್ಲದೇ ನಾನು ಒಂದು ಪದವನ್ನೂ ಬರೆಯುವುದಿಲ್ಲ'. ಈ ವಾಕ್ಯದ ಸರಳತೆಯನ್ನು ನೋಡಿ. ಇನ್ನೂ ಕಡಿಮೆ ಪದಗಳಲ್ಲಿ ಇದನ್ನು ಬರೆಯಲು ಸಾಧ್ಯವಿರಲಿಕ್ಕಿಲ್ಲ. ಎರಡನೆಯದಾಗಿ ಪ್ರತಿಯೊಂದು ಪದ ಬಳಕೆಯ ಮೇಲೆ ಬರಹಗಾರನ ಹಿಡಿತವನ್ನೂ ಪ್ರೀತಿಯನ್ನೂ ನೋಡಿ. 'ಹೇಳುವುದು ವೇದಾಂತ, ತಿನ್ನುವುದು ಬದನೆಕಾಯಿ' ಎಂಬಂಥ ಪರಿಸ್ಥಿತಿಗೆ ಗಾಂಧಿ ತಲುಪಲಿಲ್ಲ. 'ನನ್ನ ಜೀವನವೇ ನನ್ನ ಸಂದೇಶ' ಎಂಬ ಅವರ ಮಾತಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಈಗಿನ ಕಾಲಕ್ಕೆ ಅಸಮರ್ಥನೀಯವಾಗಿ ಕಾಣುವ ಜಿಗುಟು ಸ್ವಭಾವ-ಅದರಿಂದಾಗಿಯೇ ಗಾಂಧಿ ನಾವು ಎಲ್ಲರಿಗಿಂತ ಭಿನ್ನವಾದುದು. ತಾವು ತಪ್ಪು ಮಾಡಿದಾಗಲೂ ಗಾಂಧೀಜಿ ಮುಚ್ಚಿಡುವುದಿಲ್ಲ. ಒಮ್ಮೆ ಹಾಲು ಕುಡಿಯುವುದನ್ನು ತ್ಯಜಿಸುವ ಗಾಂಧಿ, ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಆಡಿನ ಹಾಲನ್ನು ಕುಡಿಯುವುದಕ್ಕೆ ತೊಡಗುತ್ತಾರೆ. ಇದು ತಮ್ಮ ಜೀವನದ ಸೋಲೆಂದು ಅವರು ಘಂಟಾಘೋಷವಾಗಿ ಹೇಳಿಕೊಂಡಿದ್ದಾರೆ. ಈ ಪ್ರಾಮಾಣಿಕತೆಯಿಂದಾಗಿಯೇ ಅವರ ಹೇಳಿಕೆಗೆ ಬೆಲೆ ಬರುತ್ತಿತ್ತು.

ಎರಡನೆಯ ಹೇಳಿಕೆ, ಸತ್ಯಾಸತ್ಯತೆಯನ್ನು ಪರೀಕ್ಷಿಸಿ ದೃಢಪಡಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅಂಥ ವರದಿ ಪ್ರಕಟವಾಗುವುದಕ್ಕಿಂತ ಪ್ರಕಟಗೊಳ್ಳದಿರುವುದೇ ಲೇಸು ಎಂಬ ಹೇಳಿಕೆ. ಅವರ ಪತ್ರಿಕೆಗಳಲ್ಲಿ ಇದನ್ನೇ ಆಚರಣೆಗೆ ತಂದಿದ್ದರು. ಈ ಧೈರ್ಯ ಇಂದಿನ ವರದಿಗಾರರಿಗೆ ಯಾ ಪತ್ರಕರ್ತರಿಗೆ ಇಲ್ಲವಾಗಿ ಗಾಂಧೀಜಿ ಪತ್ರಕರ್ತರೇ ಅಲ್ಲ ಎಂಬ ಮಾತುಗಳು ಕೇಳಿಬರಲು ಕಾರಣವಾಗಿರಬಹುದು. ಒಕ್ಕಣ್ಣ ರಾಜ್ಯದಲ್ಲಿ ಎರಡು ಕಣ್ಣಿರುವುದು ತಪ್ಪುತಾನೆ? ಇಂದಿನ ಬ್ರೇಕಿಂಗ್ ನ್ಯೂಸ್‌ಗಳನ್ನು ನೋಡಿ. ಅವು ಎಲ್ಲವೂ ಸತ್ಯಾಸತ್ಯತೆ ಪರೀಕ್ಷೆಯಾಗದೇ ಪ್ರಕಟಗೊಂಡ ಸರಕುಗಳು. ಯಾಕೆಂದರೆ ಪರೀಕ್ಷಿಸುವಷ್ಟು ಸಮಯವಾಗಲೀ ತಾಳ್ಮೆಯಾಗಲೀ ಯಾರಿಗೂ ಇಲ್ಲ. ಮೊದಲು ಪ್ರಕಟಗೊಳ್ಳಲಿ, ನೋಡೋಣ, ಆಮೇಲೆ ಸುಳ್ಳಾದರೆ ವಾಪಸ್ಸು ಪಡೆದರಾಯ್ತು ಎಂಬುದು ಇಂದಿನ ನೀತಿ.

ಒಂದೊಮ್ಮೆ ವಾಹಿನಿಯೊಂದರಲ್ಲಿ ಬೆಳಿಗ್ಗೆ ಬಂದ ಸುದ್ದಿ, 'ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭೀಕರ ಅಪಘಾತ – ಹತ್ತು ಸಾವು' ಎಂದು. ಇದು ಮಧ್ಯಾಹ್ನವಾಗುವಾಗ ಐದು ಸಾವು ಎಂದು ಆಯ್ತು. ಸಂಜೆಯ ಹೊತ್ತಿಗೆ ಎರಡು ಸಾವು ಎಂದಾಯ್ತು. ಆಮೇಲೆ ಸುದ್ದಿಯೇ ಮರೆಯಾಯ್ತು!.

ಗಾಂಧೀಜಿ ಇಂಥ ಪತ್ರಿಕೋದ್ಯಮವನ್ನು ಕನಸಿನಲ್ಲೂ ಒಪ್ಪುತ್ತಿರಲಿಲ್ಲ. ಅವರು ಎಂದೂ ದಿನ ಪತ್ರಿಕೋದ್ಯಮಕ್ಕೆ ಇಳಿದವರಲ್ಲ ಮತ್ತು ಕ್ರೈಮ್ ಸುದ್ದಿಗಳನ್ನು ಪ್ರಕಟಿಸುವ ಸಂದರ್ಭ ಅವರಿಗೆ ಬರಲೇ ಇಲ್ಲ. ಜೊತೆಗೆ ಇಂಥ ಸುಳ್ಳುವರದಿಗಳ ವಿರುದ್ಧ ಸತ್ಯಾಗ್ರಹ ನಡೆಸುತ್ತಿದ್ದರು ಎಂದು ಖಂಡಿತವಾಗಿ ಹೇಳಬಹುದು. ಯಾರಿಗೇ ಆಗಲೀ ಅಸಹಕಾರ ಚಳುವಳಿ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೆ 'ಯಂಗ್ ಇಂಡಿಯಾ' ಪತ್ರಿಕೆ ಅವರ ಅಭಿಪ್ರಾಯಕ್ಕೆ ಮುಕ್ತ ವೇದಿಕೆ ಎಂಬ ಹೇಳಿಕೆ ನಿರಾಸಕ್ತಿ ಯೋಗದ ಒಂದು ಭಾಗ! ತಮ್ಮ ಪತ್ರಿಕೆಯಲ್ಲಿ ತಪ್ಪುಗಳು ಪ್ರಕಟಗೊಂಡರೆ ಅವುಗಳ ವಿರುದ್ಧ ಪ್ರತಿಭಟಿಸಲು ಜನರು ಸಂಘಟಿತರಾಗಬೇಕೆಂದು ಕರೆ ನೀಡಿದ ಮಹಾತ್ಮರವರು!



ಗಾಂಧಿಗಿರಿ ನಡೆಯುವುದಿಲ್ಲ!

ಲೋಕಮಾನ್ಯ ಟಿಳಕರು ನಿಧನರಾದಾಗ ಗಾಂಧೀಜಿ ಬರೆದ ನಿಧನ ಲೇಖನವು ಅನೇಕ ಕಾರಣಗಳಿಂದ ಚಾರಿತ್ರಿಕವಾದುದು. 'ಗಂಡಸರ ನಡುವಿನ ಮಹಾ ದೈತ್ಯ ಮಲಗಿದ್ದಾನೆ. ಸಿಂಹದ ಧ್ವನಿ ಉಡುಗಿದೆ. ದೇಶಭಕ್ತಿ ಎಂಬುದು ಅವರಿಗೆ ಸಹಜವಾದುದಾಗಿತ್ತು.

ದೇಶಪ್ರೇಮಕ್ಕಿಂತ ಮಿಗಿಲಾದ ಪ್ರೇಮ ಅವರಿಗೆ ಗೊತ್ತಿರಲಿಲ್ಲ. ಅವರ ಧೈರ್ಯ ಯಾವತ್ತೂ ಅವರಿಗೆ ಕೈಕೊಡಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಉತ್ಸಾಹ ಅಪರಿಮಿತವಾಗಿತ್ತು. ಅದು ಯಾರನ್ನೂ ಕಾಯುತ್ತಿರಲಿಲ್ಲ. ಯಾರಿಗೂ ಬಿಟ್ಟುಕೊಡುತ್ತಿರಲಿಲ್ಲ.

ಅಂಥ ವ್ಯಕ್ತಿ ನಿಧನರಾದರೆಂದು ಹೇಳುವುದು ಅವರಿಗೆ ಮಾಡುವ ಅವಮಾನ. ಅವರ ಕಾರ್ಯಗಳು ನಮ್ಮೊಳಗೆ ಸದಾ ಕಾಲಕ್ಕೂ ಇರುತ್ತವೆ. ಭಾರತಕ್ಕಿರುವುದು ಏಕೈಕ ಲೋಕಮಾನ್ಯ. ನಾವು ಅವರ ಧೈರ್ಯ, ಸರಳತೆ, ದೇಶಪ್ರೇಮ ಸರ್ವರಿಗೂ ಸಹಕಾರಿಯಾದ ಮನೋಭಾವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಶಾಶ್ವತವಾದ ಸ್ಮಾರಕ ಕಟ್ಟೋಣ' ಟಿಳಕರ ಬಗ್ಗೆ ಇದಕ್ಕಿಂತ ಸರಳ ಸುಂದರವಾಗಿ ಹೇಗೆ ಬರೆಯುವುದು?

ಗಾಂಧೀಜಿ ಅವರ ವಿಶೇಷವೆಂದರೆ ಅವರಿಗೆ ಯಾವ ಭಿಡೆಯೂ ಇಲ್ಲ. ಸ್ವತಃ, ಬೀಗರಾದ ರಾಜಾಜಿ ಅವರನ್ನು ಗಾಂಧೀಜಿ ಬಿಡಲಿಲ್ಲ. ಅವರ ಜೊತೆಗಿನ ಭಿನ್ನಾಭಿಪ್ರಾಯಗಳನ್ನು ನೇರವಾಗಿ ಪತ್ರಿಕೆಯಲ್ಲೇ ವ್ಯಕ್ತಪಡಿಸುತ್ತಿದ್ದರು. ಇಷ್ಟಾಗಿ ರಾಜಾಜಿ ಅವರ ಬಗ್ಗೆ ಒಂದಿನಿತೂ ಪ್ರೀತಿ ಕಡಿಮೆಯಾಗಲಿಲ್ಲ. ಈ ಜಗಳದಿಂದ ನಮ್ಮ ಬಾಂಧವ್ಯಕ್ಕೆ ಎಂದೂ ಚ್ಯುತಿ ಬರಲಿಲ್ಲ ಎಂಬುದಾಗಿ ಗಾಂಧಿ ಹೇಳುತ್ತಾರೆ. ಹಾಗೆಯೇ ಪಂಡಿತ ಮದನಮೋಹನ ಮಾಳವೀಯ ಅವರೊಡನೆಯೂ ಗಾಂಧೀಯವರಿಗೆ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದವು. ಹರಿಜನ ಪತ್ರಿಕೆಯ ಅಂಕಣಗಳಲ್ಲಿ ಬಿರುಸಿನ ವಾಗ್ವಾದಗಳು ನಡೆದವು. ಆದರೂ ಪರಸ್ಪರರ ಮೇಲಿನ ವಿಶ್ವಾಸಕ್ಕೆ, ಬಾಂಧವ್ಯಕ್ಕೆ, ಗೌರವಕ್ಕೆ ಚ್ಯುತಿ ಬರಲಿಲ್ಲ. ಭಿನ್ನಾಭಿಪ್ರಾಯ ಬೇರೆ, ಪ್ರೀತಿ ಬೇರೆ ಎಂಬ ವಿಭಾಗೀಕರಣ ಕೂಡಾ ಇಂದಿನ ಕಾಲದಲ್ಲಿ ಅಪರೂಪವೆನಿಸಿಕೊಳ್ಳುವುದು.

ರಿಪಬ್ಲಿಕ್ ಟಿವಿ ಸುಷಾಂತ್ ಸಿಂಗ್ ರಜಪೂತನ ಸಾವಿನ ತನಿಖೆಯಲ್ಲಿ ವಹಿಸಿದ ಅತ್ಯಾಸಕ್ತಿಯ ಹಿಂದೆ ಅರ್ನಬ್ ಗೋಸ್ವಾಮಿಯವರಿಗೆ ಮುಂಬೈ ಪೊಲೀಸರ ಮೇಲೆ ಹಾಗೂ ಅಲ್ಲಿಯ 'ಅಗಡಿ ಸರ್ಕಾರ'ದ ಗೃಹಸಚಿವರ ಮೇಲೆ ಇದ್ದ ಮುನಿಸು ಕಾರಣವೆಂಬುದು ಯಾರಿಗೂ ಅರ್ಥವಾಗುವಂತದ್ದು. ಮಾಧ್ಯಮಗಳೇ ನ್ಯಾಯಾಲಯದಂತೆ

ಕಾರ್ಯ ನಿರ್ವಹಿಸಿದ ಕೆಟ್ಟ ಉದಾಹರಣೆ ಇದು. (ಮೀಡಿಯಾ ಟ್ರಯಲ್) ಈಗ ಮಾಧ್ಯಮಗಳು ತೆಗೆದುಕೊಳ್ಳುವ ಉಪಕ್ರಮಗಳಿಗೆ ಯಾವುದೋ ಹಿನ್ನೆಲೆ, ಇನ್ಯಾವುದೋ ಸ್ವಾರ್ಥ ಕಾರಣವಾಗಿರುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗುವ ವಿಚಾರ. ಈಗ ಮಾಧ್ಯಮಗಳು ಸ್ವಾರ್ಥ ಪ್ರೇರಿತವಾಗಿವೆ. ಲಾಭದ ಸಾಧ್ಯತೆಯೇ ಅವರು ಬೆಂಬತ್ತಿ ಮಾಡುವ ವರದಿಗಳ ಹಿಂದಿನ ಪ್ರೇರಣೆಯಾಗಿರುತ್ತದೆ ಎಂಬ ಅನುಮಾನವಿದೆ.

ಗಾಂಧೀಜಿ ತಮ್ಮ ತತ್ವಕ್ಕೆ ಭಂಗ ಬಂದಾಗಲೆಲ್ಲ ಪತ್ರಿಕೆಗಳನ್ನು ನಿಲ್ಲಿಸಿ ಬಿಡುತ್ತಿದ್ದರು. ಅಂಥ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಕೋಟಿ ಕೋಟಿ ಬಂಡವಾಳ ಹೂಡಿ, ನೂರಾರು ಜನರ ಸಂಸಾರಗಳನ್ನು ಪೊರೆಯುವ ಪತ್ರಿಕೆಗಳಿಗೂ ಟಿವಿ ಚಾನಲ್ಲುಗಳಿಗೂ ಸಾಧ್ಯವಾಗುವುದಿಲ್ಲ. ಪತ್ರಿಕೆಗಳನ್ನು ನಿಲ್ಲಿಸಿಬಿಡುವುದು ಒಂದು ರೀತಿ ಪಲಾಯನವಾದವೂ ಅನಿಸೀತು! ಹಾಗೆ ನೋಡಿದರೆ ಗಾಂಧೀಜಿ ಅವರ ಪತ್ರಿಕೆಗಳು ನಡೆಯುತ್ತಿದ್ದುದು ಸ್ವಯಂ ಸೇವಕರಿಂದ ಎಂಬುದನ್ನು ಮರೆಯಬಾರದು. ಮೇಲಾಗಿ ಸ್ವಾತಂತ್ರ್ಯ ಹೋರಾಟವೆಂಬ ಮಹಾಯಜ್ಞದಲ್ಲಿ ಪಾಲ್ಗೊಂಡವರಿಗೆ ಬೇರೆ ಯಾವುದೂ ಮುಖ್ಯವಾಗಿರಲಿಲ್ಲ. ಆದರೆ ಸ್ವತಂತ್ರ ಭಾರತದಲ್ಲಿ ಗಾಂಧಿಗಿರಿ ಪತ್ರಿಕೋದ್ಯಮದಲ್ಲಿ ನಡೆಯಲಿಕ್ಕಿಲ್ಲ.



ಪ್ರಸಾರ ಕಡಿಮೆ–ಪ್ರಭಾವಕ್ಕೆ ಮಿತಿಯಿಲ್ಲ!

ಗುಜರಾತೀ ಪತ್ರಿಕೆ 'ಹಿಂದೂಸ್ಥಾನ್' ಎಂಬುದಕ್ಕೆ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ವಾಪಸ್ಸು ಬಂದ ಹೊಸತರಲ್ಲಿ ಹೀಗೆ ಬರೆದಿದ್ದರು: ನನ್ನ ದೃಷ್ಟಿಯಲ್ಲಿ ಜೀವನೋಪಾಯಕ್ಕಾಗಿ ಪತ್ರಿಕೆಯನ್ನು ಬಳಸುವುದು ತಪ್ಪು. ಸಮಾಜದಲ್ಲಿ ಕೆಲವು ಕ್ಷೇತ್ರಗಳಿವೆ. ಅವುಗಳ ಪ್ರಭಾವ ಸಾರ್ವಜನಿಕ ಜೀವನದ ಮೇಲೆ ಮಹತ್ತರವಾಗಿರುತ್ತದೆ. ಅಂಥ ಕ್ಷೇತ್ರವನ್ನು ಜೀವನೋಪಾಯಕ್ಕಾಗಿ ಗಳಿಸುವುದಕ್ಕೆ ಬಳಸಿಕೊಂಡರೆ ಆ ಕ್ಷೇತ್ರದ ಪ್ರಾಥಮಿಕ ಉದ್ದೇಶವೇ ಸೋಲುತ್ತದೆ. ಅಲ್ಲದೇ ಪತ್ರಿಕೆಯೊಂದನ್ನು ಲಾಭಮಾಡಲು ಬಳಸುವ ದಾರಿಯಾದಾಗ ಅನಾಚಾರಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆಗಳಿರುತ್ತವೆ. ಇಂಥ ದುಷ್ಕೃತ್ಯಗಳು

ಪತ್ರಿಕೋದ್ಯಮದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವುದನ್ನು ಪತ್ರಿಕೋದ್ಯಮ ಬಲ್ಲವರಿಗೆ ಸಾಧಿಸಿ ತೋರಿಸುವ ಅಗತ್ಯವಿಲ್ಲ.

ಪತ್ರಿಕೆಗಳು ಮುಖ್ಯವಾಗಿ ಇರುವುದು ಜನರಲ್ಲಿ ಅರಿವು ಮೂಡಿಸಲಿಕ್ಕೆ. ಸಮಕಾಲೀನ ಚರಿತ್ರೆಯನ್ನು ಜನರು ಅರ್ಥ ಮಾಡಿಕೊಳ್ಳುವುದು ಪತ್ರಿಕೆಗಳ ಮೂಲಕ. ಇದು ಸಣ್ಣ ಜವಾಬ್ದಾರಿಯ ಕೆಲಸವಲ್ಲ. ನಿಜವೆಂದರೆ ಈ ಕಾರಣದಿಂದಲೇ ಕೆಲವುಸಾರಿ ಪತ್ರಿಕೆಗಳನ್ನು ನಂಬುವುದು ಕಷ್ಟವಾಗುತ್ತದೆ. ಆಗಾಗ ಪತ್ರಿಕೆಗಳಲ್ಲಿ ವರದಿಯಾಗುವುದಕ್ಕೂ ವಾಸ್ತವಕ್ಕೂ ಅಜಗಜಾಂತರವಿರುತ್ತದೆ.

ಇಡೀ ಜಗತ್ತು ಮಾಧ್ಯಮ ಸಂತೆಯಲ್ಲಿ ಕಳೆದುಹೋಗಿರುವ ಈ ಹೊತ್ತಿನಲ್ಲಿ ಗಾಂಧೀಜಿಯ ಕಾಲದ ಪತ್ರಿಕೋದ್ಯಮ ವಿಶೇಷವಾಗಿ ಕಾಣುತ್ತದೆ. ಆಗ ಹೆಚ್ಚು ಪತ್ರಿಕೆಗಳಿರಲಿಲ್ಲ. ಅವುಗಳ ಪ್ರಸಾರವೂ ಹೆಚ್ಚಾಗಿ ಇರಲಿಲ್ಲ. ಹೆಚ್ಚಿನ ಪತ್ರಿಕೆಗಳು ನೂರರ ಗುಣಕಗಳಲ್ಲಿ ಪ್ರಸಾರ ಹೊಂದಿದ್ದರೆ ಗಾಂಧೀಜಿ ಅವರ 'ಯಂಗ್ ಇಂಡಿಯಾ', 'ನವಜೀವನ' ಮತ್ತು 'ಹರಿಜನ' ಪತ್ರಿಕೆಗಳು ಸಾವಿರಗಳ ಗುಣಕಗಳಲ್ಲಿ ಪ್ರಸಾರ ಹೊಂದಿದ್ದವು. ಅವು ತಮ್ಮ ಕಾಲ ಮೇಲೆ ತಾವು ನಿಲ್ಲದಿದ್ದರೆ ಬದುಕಿರಬೇಕಾಗಿ ಇಲ್ಲ ಎಂಬುದು ಗಾಂದಿ ಅವರ ದೃಢ ನಿಲುವು. ಜಾಹೀರಾತನ್ನು ಪ್ರಕಟಿಸದೆಯೇ ಈ ಪತ್ರಿಕೆಗಳು ತಮ್ಮ ಕಾಲ ಮೇಲೆ ತಾವು ನಿಂತಿದ್ದವು. ಅವುಗಳಿಂದ ಬರುವ ಲಾಭವನ್ನು ಗಾಂಧೀಜಿ ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ. ಚಂದಾದಾರರಿಗೆ ಬೇರೆ ರೂಪದಲ್ಲಿ ಲಾಭಾಂಶವನ್ನು ವಿತರಿಸುತ್ತಿದ್ದರು. ಅಥವಾ ಕಷ್ಟದಲ್ಲಿರುವ ಪತ್ರಿಕೆಗಳನ್ನು ಉಳಿಸಲು ತಮ್ಮ ಪತ್ರಿಕೆಯ ಲಾಭಾಂಶವನ್ನು ದಾನ ಮಾಡಿದ ಉದಾಹರಣೆಗಳಿದ್ದವು. ಇವೆಲ್ಲಾ ಈಗಿನ ಕಾಲದ ಲಾಭವೇ ಉದ್ದೇಶವಾದ ಪತ್ರಿಕೋದ್ಯಮ ಅರಗಿಸಿಕೊಳ್ಳದ ಸಂಗತಿಗಳು.

ಗಾಂಧೀಜಿಯ ಪತ್ರಿಕೆಗಳ ಪ್ರಸಾರ ಈಗಿನ ಪತ್ರಿಕೆಗಳಿಗೆ ಹೋಲಿಸಿದರೆ ಕಡಿಮೆಯಾಗಿ ಕಂಡರೂ ಅವುಗಳ ಪ್ರಭಾವ

ಕಡಿಮೆಯಲ್ಲ ಎಂಬುದನ್ನು ಗಮನಿಸಬೇಕು. ಇಂದು ಲಕ್ಷಗಳಲ್ಲಿ ಮಾರಾಟವಾಗುವ ಪತ್ರಿಕೆಗಳಿಗೆ ಕೂಡಾ ಗಾಂಧೀಜಿ ಅವರ ಹಾಗೆ ಜನರ ನಾಡಿಮಿಡಿತವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಅಲ್ಲದೇ ಗಾಂಧೀಜಿ ನೀಡುವ ಒಂದು ಕರೆಗೆ ದೇಶವೇ ಓಗುಡುತ್ತಿತ್ತು. ಅಸಹಕಾರ ಚಳುವಳಿ, ದೇಶಬಿಟ್ಟು ತೊಲಗಿ ಚಳುವಳಿ, ದಂಡಿ ಸತ್ಯಾಗ್ರಹ, ಇವುಗಳಿಗೆಲ್ಲ ಅಸಾಮಾನ್ಯ ಜನಬೆಂಬಲ ವ್ಯಕ್ತವಾಗಿದ್ದು, ಇಡೀ ದೇಶದ ಮೂಲೆ ಮೂಲೆಗಳಲ್ಲಿ ಸತ್ಯಾಗ್ರಹದ ಬಿಸಿ ಹರಡಿದ್ದು ಪತ್ರಿಕೆಗಳ ಮೂಲಕ. ಸರ್ಕಾರ ಪತ್ರಿಕೆಗಳ ಬಾಯಿ ಮುಚ್ಚಿಸಿದಾಗ ಗಾಂಧೀಜಿ ಮುದ್ರಿತ ಪತ್ರಿಕೆಗಳನ್ನು ನಿಲ್ಲಿಸಿ ಕೈಬರಹದ ಪತ್ರಿಕೆ ನಡೆಸಿದರು. ಬಾಯಿಂದ ಬಾಯಿಗೆ ಸುದ್ದಿ ಹರಡುವುದೇ ಶ್ರೇಷ್ಠ ಮಾರ್ಗವೆಂದು, ಪತ್ರಿಕೋದ್ಯಮವನ್ನು ಸ್ವತಂತ್ರಗೊಳಿಸುವ ವಿಧಾನವೆಂದೂ ವಾದಿಸಿದರು. ಗಾಂಧಿ ಮುಟ್ಟಿದ ಹಾಗೆ ನಾವೇಕೆ ಈಗ ಜನರನ್ನು ಮುಟ್ಟಲು – ತಟ್ಟಲು ಸಾಧ್ಯವಾಗುತ್ತಿಲ್ಲ, ಪತ್ರಿಕೆಗಳವರು ಯೋಚಿಸಬೇಕು.



ಅರ್ಥವಾದಷ್ಟೂ ಪ್ರಶ್ನೆ ಹುಟ್ಟಿಸುತ್ತಾರೆ!

ಮಾತು ಬೆಳ್ಳಿ, ಮೌನ ಬಂಗಾರ ಎನ್ನುತ್ತಾರಲ್ಲ, ಹಾಗೆ, ಗಾಂಧಿ ಅವರ ಬರವಣಿಗೆಯಲ್ಲೂ ಮೌನ ಬಂಗಾರವಾಗುವುದನ್ನು ಕಾಣಬಹುದು. ಎಷ್ಟೋ ಸಾರಿ ಎಲ್ಲ ಪತ್ರಿಕೆಗಳಲ್ಲೂ ಬರುವ ಸುದ್ದಿಗಳನ್ನು ಬೇಕಂತಲೇ ಗಾಂಧಿ ಅವರ ಪತ್ರಿಕೆಗಳು ಪ್ರಕಟಿಸುತ್ತಿರಲಿಲ್ಲ. ಬೇರೆ ಪತ್ರಿಕೆಗಳಲ್ಲಿ ಪ್ರಮುಖ ಸಂಪಾದಕೀಯಗಳಾಗಿ ಪ್ರಕಟಗೊಂಡ ವಿಷಯಗಳು ಗಾಂಧಿ ಅವರ ಪತ್ರಿಕೆಗಳಲ್ಲಿ ಚರ್ಚೆಗೊಳ್ಳುತ್ತಿರಲಿಲ್ಲ. ಅವರ ದೃಷ್ಟಿಯೇ ಬೇರೆ. ಯಾವುದು ಮುಖ್ಯವೆಂದು ನಿರ್ಧರಿಸುವ ಮಾನದಂಡವೇ ಭಿನ್ನವಾಗಿತ್ತು. ಉದಾಹರಣೆಗೆ, ಲಾರ್ಡ್ ಇರ್ವಿನ್‌ರವರು ಭಾರತದ ವೈಸ್‌ರಾಯ್ ಆಗಿ ಏಪ್ರಿಲ್ 26, 1926ರಂದು ಅಧಿಕಾರ

ವಹಿಸಿಕೊಂಡಾಗ ಅವರನ್ನು ಹಾಡಿ ಹೊಗಳಿದ ಪತ್ರಿಕೆಗಳಿದ್ದವು. ಗಾಂಧೀಜಿ 'ಯಂಗ್ ಇಂಡಿಯಾ'ದಲ್ಲಿ ಅದರ ಪ್ರಸ್ತಾಪವನ್ನೇ ಮಾಡಲಿಲ್ಲ. ಬದಲಾಗಿ ಆಗ ಗಾಂಧೀಜಿ ನಾಯಿಗಳ ಕಗ್ಗೊಲೆಗಳ ಬಗ್ಗೆ ಬರೆಯುವುದರಲ್ಲಿ ತೊಡಗಿಸಿಕೊಂಡಿದ್ದರು! ಈ ಉದ್ದೇಶಪೂರ್ವಕ ಮೌನ ಗಾಂಧೀಜಿ ಅವರ ಜಾಣ್ಮೆಯೆಂಬುದಾಗಿಯೂ, ರಾಜಕೀಯ ಪ್ರೌಢಿಮೆಯನ್ನು ತೋರಿದ ಪ್ರಕರಣವೆಂದೂ ಭಾವಿಸಲಾಗಿದೆ. ಯಾಕೆಂದರೆ ಭಾರತದ ವೈಸ್‌ರಾಯ್‌ಗಳಿಗೆ ಗಾಂಧಿ ಅವರ ಪ್ರತಿಯೊಂದು ನಡೆಯೂ ಮಹತ್ವಪೂರ್ಣವಾಗಿತ್ತು. ಅದಕ್ಕೇ ವೈಸ್‌ರಾಯ್ ಆಗಿದ್ದ ಲಾರ್ಡ್ ಲಿನ್‌ಲಿಥ್‌ಗೋ ಅವರು ಒಮ್ಮೆ ಹೇಳಿದ್ದರು. ಭಾರತದಲ್ಲಿ ಗಾಂಧಿಯವರೇ ಅತಿ ದೊಡ್ಡ ವಿಷಯ. (Gandhi is the biggest thing in India) ಎಂಬುದಾಗಿ!

ವರದಿಗಾರರು ಒಂದು ಉಪದ್ರವ ಎಂಬುದಾಗಿ ಗಾಂಧೀಜಿ 'ಯಂಗ್ ಇಂಡಿಯಾ'ದ 1929ರ ಆಗಸ್ಟ 22ರ ಸಂಚಿಕೆಯಲ್ಲಿ ಆಗಿನ ಕಾಲದ ವರದಿಗಾರರನ್ನು ಝಾಡಿಸುತ್ತಾರೆ. ಅವರಿಗೆ ಸಿಟ್ಟು ತರಿಸಿದ್ದು ಕೆಲವು ಪತ್ರಿಕೆಗಳಲ್ಲಿ ಗಾಂಧೀಜಿಯವರಿಗೆ ಆರೋಗ್ಯ ಸರಿಯಿಲ್ಲವೆಂದೂ ಅವರ ತೂಕ 80 ಪೌಂಡುಗಳಿಗೆ ಇಳಿದಿದೆ ಎಂದೂ, ಅವರು ಸುಸ್ತಾಗಿ ಪ್ರಜ್ಞೆ ತಪ್ಪಿದ್ದರೆಂದೂ ಬರೆದಿದ್ದುದು. (ಇತ್ತೀಚೆಗೆ ಪ್ರಣಾವ್ ಮುಖರ್ಜಿ ಅವರು ನಿಧನರಾಗುವ ಎಷ್ಟೋ ದಿನ ಮೊದಲೇ ಅವರು ನಿಧನರಾದರೆಂದು ವಾಹಿನಿಗಳು ಬ್ರೇಕಿಂಗ ನ್ಯೂಸ್ ಕೊಟ್ಟಿರಲಿಲ್ಲವೇ?) ಇವೆಲ್ಲಾ ಶುದ್ಧ ಸುಳ್ಳು ಎಂಬುದಾಗಿ ಗಾಂಧೀಜಿ ಆಕ್ಷೇಪಿಸಿದರು. ಗಾಂಧಿ 'ಹರಿಜನ' ಪತ್ರಿಕೆಯನ್ನು ನಡೆಸಿದ್ದು ಸಮಾಜ ಸುಧಾರಣೆಗಾಗಿ. ಆ ಪತ್ರಿಕೆಯಲ್ಲಿ ರಾಜಕೀಯ ನುಸುಳಬಾರದೆಂಬುದು ಅವರ ಆಶಯ. ಹೀಗಾಗಿ ಮುಖ್ಯವಾದ ರಾಜಕೀಯ ಸುದ್ದಿಗಳು ಕೂಡಾ ಹರಿಜನ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರಲಿಲ್ಲ. ಕಾಂಗ್ರೆಸ್ಸಿನ ಸುದ್ದಿಗೆ 'ಹರಿಜನ'ದಲ್ಲಿ ಜಾಗವಿರಲಿಲ್ಲ. ಬದಲಾಗಿ ಹಳ್ಳಿಯ ಸ್ವಚ್ಛತೆ, ಸತ್ವಯುತ ಆಹಾರ, ಕಸ

ನಿರ್ವಹಣೆ, ಗ್ರಾಮೀಣ ಪುನರುತ್ಥಾನ, ತಾಜಾ ತರಕಾರಿಗಳ ಮಹತ್ವ ಮುಂತಾದ ಬರಹಗಳಿರುತ್ತಿದ್ದವು! ಗಾಂಧೀಜಿ ಸುದ್ದಿ ಪತ್ರಿಕೆಗೂ ಅಭಿಪ್ರಾಯ ಪತ್ರಿಕೆಗೂ ಸ್ಪಷ್ಟ ವ್ಯತ್ಯಾಸ ಗುರುತಿಸಿದ್ದರು ಹಾಗೂ ಹರಿಜನವನ್ನು 'ವ್ಯೂಸ್ ಪೇಪರ್' ಎಂಬುದಾಗಿ ಕರೆದಿದ್ದರು.

'ಈ ಪತ್ರಿಕೆಯನ್ನು ಜನರು ಮನರಂಜನೆಗಾಗಿ ಕೊಳ್ಳುವುದಿಲ್ಲ. ಬದಲಾಗಿ ಪಾಠವಾಗಿ ಸ್ವೀಕರಿಸುತ್ತಾರೆ. ಅಹಿಂಸೆಯ ಕುರಿತು ನಿಜಕ್ಕೂ ಪಾಠಮಾಡಿಸಿಕೊಳ್ಳುತಾರೆ' ಎಂದಿದ್ದರು. ಇವನ್ನೆಲ್ಲಾ ನೋಡುವಾಗ ಅರ್ಥವಾಗುವ ಸತ್ಯವೆಂದರೆ 'ನನ್ನ ಜೀವನವೇ ನನ್ನ ಸಂದೇಶ' ಎಂದವನ ಜೀವನವನ್ನು ಕೆದಕಿದಷ್ಟೂ ಹೊಸ ಹೊಸ ಸಂಗತಿಗಳು ಹೊಳೆಯುತ್ತವೆ. ಗಾಂಧೀಜಿಯ ಬಗ್ಗೆ ಓದಿದಷ್ಟೂ ಅವರು ಪ್ರಸ್ತುತರಾಗುತ್ತಾ ಹಾಗೂ ಈಗಿನ ಕಾಲದ ಪತ್ರಿಕೋದ್ಯಮಕ್ಕೆ ದೂರವಾಗುತ್ತಾ ಹೋಗುತ್ತಾರೆ. ಅವರು ವ್ಯಕ್ತರಾದಷ್ಟೂ ಅವ್ಯಕ್ತರಾಗುತ್ತಾರೆ. ಹತ್ತಿರ ಬಂದರೆಂದು ನಾವು ಖುಷಿಪಟ್ಟಷ್ಟೂ ದೂರ ಹೋಗುತ್ತಾರೆ! ಎಲ್ಲಕ್ಕಿಂತ ಮುಖ್ಯವಾಗಿ ಅವರೊಳಗಿದ್ದ ಮಹಾತ್ಮಾ ಹಾಗೂ ಪತ್ರಕರ್ತ ಅನುದಿನವೂ ಹೊಸದಾಗಿ ಕಾಣುತ್ತಾರೆ.

ಲೇಖಕರ ಪರಿಚಯ



ಡಾ. ನಿರಂಜನ ವಾನಳ್ಳಿ ಉತ್ತರ ಕನ್ನಡ ಜಿಲ್ಲೆಯ ವಾನಳ್ಳಿ ಮೂಲದವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ. ಪತ್ರಿಕೋದ್ಯಮದಲ್ಲಿ ಎಂ.ಎ. ಪಿಎಚ್.ಡಿ. ಪಡೆದಿದ್ದಾರೆ. ಉಜಿರೆಯ ಶ್ರೀ ಧರ್ಮಸ್ಥಳ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಅಧ್ಯಾಪಕರಾಗಿ ಕೆಲಸ ಆರಂಭ. ಆರು ವರ್ಷಗಳ ಬಳಿಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ವಿಭಾಗಕ್ಕೆ ಸೇರ್ಪಡೆ. ಒಟ್ಟು 32 ವರ್ಷಗಳ ಪತ್ರಿಕೋದ್ಯಮ ಪಾಠಮಾಡಿದ ಅನುಭವ.

ಒಮಾನ್ ದೇಶದಲ್ಲಿ ಪತ್ರಿಕೋದ್ಯಮ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ತಜಕಿಸ್ತಾನದಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕರಾಗಿ ಹದಿನೈದು ತಿಂಗಳು ಕಾರ್ಯನಿರ್ವಹಿಸಿದ್ದಾರೆ. ಅದಕ್ಕೂ ಮೊದಲು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಸಚಿವರಾಗಿ ಹಾಗೂ ಮೈಸೂರು ವಿವಿಯ ಎಲೆಕ್ಟ್ರಾನಿಕ್ ಮಲ್ಟಿಮೀಡಿಯಾ ರಿಸರ್ಚ್ ಸೆಂಟರ್ (ಇಎಂಆರ್‌ಸಿ) ಮತ್ತು ಸಾಮರ್ಥ್ಯಾಭಿವೃದ್ಧಿ ಕೇಂದ್ರದ ನಿರ್ದೇಶಕರಾಗಿಯೂ ಅನುಭವ ಹೊಂದಿದ್ದಾರೆ.

ಈವರೆಗೆ 35 ಪುಸ್ತಕಗಳನ್ನು ಬರೆದಿರುವ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕೃಷ್ಣಾನಂದ ಕಾಮತ್ ಪುರಸ್ಕಾರ, ಶಿವಮೊಗ್ಗ ಕರ್ನಾಟಕ ಸಂಘದ ಪುರಸ್ಕಾರ, ಎಚ್ಚೆಸ್ಕೆ ಅಂಕಣ ಪ್ರಶಸ್ತಿ, ಅಮರವಾಣಿ ಪ್ರಶಸ್ತಿ ಮುಂತಾದ ಹಲವು ಗೌರವಗಳು ಸಂದಿವೆ. 2016ರಲ್ಲಿ ಭಾರತ ಸರ್ಕಾರದ ಪಂಚಾಯತ್ ರಾಜ್ ಇಲಾಖೆ ಏರ್ಪಡಿಸಿದ್ದ ಕಿರುಚಿತ್ರ ಸ್ಪರ್ಧೆಯಲ್ಲಿ ವಾನಳ್ಳಿ ಅವರು ಬರೆದು ನಿರ್ದೇಶಿಸಿದ 'ಲೈಲಾ ಗೋಲ್ಡ್' ಚಿತ್ರ ರಾಷ್ಟ್ರೀಯ ಪುರಸ್ಕಾರ ಪಡೆಯಿತು. ಈವರೆಗೆ 600ಕ್ಕೂ ಹೆಚ್ಚು ನುಡಿಚಿತ್ರಗಳನ್ನು ಬರೆದಿರುವ ವಾನಳ್ಳಿ ಅವರು ಅನೇಕ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇದೀಗ ಯೂಟ್ಯೂಬ್‌ನಲ್ಲಿ ಇವರ 'ಫ್ರೀಲಾನ್ಸಿಯ ಕಥೆಗಳು' ಮಾಲಿಕೆ ಜನಪ್ರಿಯವಾಗಿದೆ. ವ್ಯಕ್ತಿತ್ವ ತರಬೇತಿದಾರರಾಗಿ ಚಂದನ ವಾಹಿನಿಯಲ್ಲಿ ಎರಡು ಬಾರಿ ಇವರ ಸಂದರ್ಶನ ಪ್ರಸಾರವಾಗಿವೆ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ ಪ್ರಯಾಣಿಕರ ಶೋಷಣೆಯ ವಿರುದ್ಧ ಸತ್ಯಾಗ್ರಹ ಮಾಡುವ ಬೆದರಿಕೆ	1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ ಮೇಲೆ ಪ್ರಯೋಗಿಸಲಾಗುವ "ಏಷಿಯಾಟಿಕ್ ಆರ್ಡಿನನ್ಸ್ ವಿರುದ್ಧ ಚಳುವಳಿ	1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906

ಇಂಗ್ಲೆಂಡಿಗೆ ಪ್ರಯಾಣ 1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ
ನೋಂದಾವಣೆ (ಕರಾಳ ಕಾನೂನು) ವಿರುದ್ಧ
ಸತ್ಯಾಗ್ರಹ 1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ
ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ 1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ
ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ
ಹೋರಾಟ ಪರಿಶೀಲನೆ 1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್
ಫಾರ್ಮ್ ಸ್ಥಾಪನೆ 1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ 1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ 1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ
ಆಶ್ರಮ ಸ್ಥಾಪನೆ 1915
ಸಬರಮತಿ ಆಶ್ರಮ ಸ್ಥಾಪನೆ 1917
ಫೆಬ್ರವರಿ ಅಹಮದಾಬಾದ್ ಮಿಲ್
ಕೂಲಿಗಾರರ ಪರ ಹೋರಾಟ, ಮೂರು ದಿನ
ಉಪವಾಸ ಸತ್ಯಾಗ್ರಹ, ಭಾರತದಲ್ಲಿ ಇದೇ
ಮೊದಲ ಉಪವಾಸ
ಖೇಡಾದಲ್ಲಿ ಕರನಿರಾಕರಣೆ ಚಳುವಳಿ 1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ
ವಿರೋಧಿಸಿ ಏಪ್ರಿಲ್ 13–14ರಂದು ಉಪವಾಸ 1919
ಯಂಗ್ ಇಂಡಿಯಾ ಮತ್ತು
ನವಜೀವನ ಪತ್ರಿಕೆಗಳ ಆರಂಭ 1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ 1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು
ಖಾದಿ ಪ್ರಚಾರ ಆರಂಭ 1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ
ಉಪವಾಸ, ಯಂಗ್ ಇಂಡಿಯಾ
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ 1922

ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ಡೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು	
ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು	
ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಶಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30-1-1948
ರಾಜ್‌ಘಾಟದಲ್ಲಿ ದಹನ	31-1-1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧಿ	5–00
3.	ರಾಮನಾಮ	6–00
4.	ಗಾಂಧಿ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧಿ ತಾತ	22–00
12.	ದೇವನಗರಿಯಲ್ಲಿ ಗಾಂಧಿ ಧ್ವನಿ	2–00
13.	ನಮ್ಮ ಗಾಂಧಿ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧಿ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧಿ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00

27.	ಗಾಂಧಿ ಮತ್ತು ಕರ್ನಾಟಕ	200-00
28.	ಸತ್ಯ	38-00
29.	ವಿದ್ಯಾರ್ಥಿಗಳಿಗಾಗಿ	30-00
30.	ಸರ್ವೋದಯ	30-00
31.	ಖಾದಿ ಗ್ರಾಮೋದ್ಯೋಗ	58-00
32.	ನನ್ನ ಬಾಲ್ಯದ ನೆನಪುಗಳು	52-00
33.	ಗ್ರಾಮರಾಜ್ಯ ಆಡಳಿತ	5-00
34.	ನನ್ನ ಕನಸಿನ ಸ್ವರಾಜ್ಯ	42-00
35.	ಹಾಸ್ಯ ಮತ್ತು ಗಾಂಧಿ	44-00
36.	ನನ್ನ ಆದರ್ಶಗ್ರಾಮ	5-00
37.	ಮಹಾತ್ಮ ಗಾಂಧಿ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48-00
38.	ಸತ್ಯಾಗ್ರಹಿ	40-00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
40.	ಗಾಂಧೀಜಿ ಅವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
42.	ಸತ್ಯಾಗ್ರಹ	5-00
43.	ಹಿಂದ್ ಸ್ವರಾಜ್	5-00
44.	ಆರೋಗ್ಯ	5-00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
46.	ಬಹುರೂಪಿ ಗಾಂಧಿ	35-00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
48.	ಕೃತಯುಗಿ ವಿನೋಬಾ ಭಾವೆ	15-00
49.	ಮೋಹನ ತರಂಗ	40-00
50.	ನಮ್ಮ ಗಾಂಧಿ ತಾತ	22-00
51.	ಗೀತಾ ಪ್ರವಚನ	80-00
52.	ಜೆ.ಪಿ. ಜೀವನ ಹಾದಿ	45-00

53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧಿ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧಿ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58
67.	Nayi Talim	58.00
68.	Temple & Mosque	10.00
69.	Rastrapita Mahatma Gandhi	25.00
70.	Swarajya of My Dreams	5.00
71.	Gandhi My Grand Father	5.00
72.	Grand Pa Gandhi	5.00
73.	Relevance of Gandhi	20.00
74.	Vinoba Sage of the Age	20.00
75.	Kasturba	33.00
76.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

• ಬೆಂಗಳೂರು	ದಿ. 08-05-1915
• ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
• ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
• ಕಾಸರಗೋಡು	ದಿ. 19-08-1920
• ಮಂಗಳೂರು	ದಿ. 20-08-1920
• ಬೆಂಗಳೂರು	ದಿ. 21-08-1920
• ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
• ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
• ಧಾರವಾಡ	ದಿ. 10-11-1920
• ಹುಬ್ಬಳ್ಳಿ, ಗದಗ	ದಿ. 11-11-1920
• ಸಾಂಗಲಿ	ದಿ. 12-11-1920
• ಬಾಗಲಕೋಟೆ	ದಿ. 27-05-1921
• ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
• ಬಳ್ಳಾರಿ	ದಿ. 30-09-1921
• ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
• ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
• ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ
• ಬೆಳಗಾವಿ	ದಿ. 01-04-1927 ದಿ. 18-04-1027 ರಿಂದ ದಿ. 19-04-1927ರವರೆಗೆ
• ಬೆಂಗಳೂರು	ದಿ. 06-06-1927 ರಿಂದ

	ದಿ. 13-07-1927 ರವರೆಗೆ
• ತುಮಕೂರು	ದಿ. 14-07-1927
• ತುಮಕೂರು, ಮಧುಗಿರಿ	ದಿ. 15-07-1927
• ತುಮಕೂರು	ದಿ. 16-07-1927
• ಬೆಂಗಳೂರು	ದಿ. 17-07-1927
• ಬೆಂಗಳೂರು	ದಿ. 18-07-1927
• ಮೈಸೂರು	ದಿ.19-07-1927 ರಿಂದ ದಿ. 21-07-1927 ರವರೆಗೆ
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
• ಮೈಸೂರು	ದಿ. 23-07-1927
• ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
• ಕ್ಲೊಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
• ಬೆಂಗಳೂರು	ದಿ. 01-08-1927
• ಅರಸೀಕರೆ, ಹಾಸನ	ದಿ. 02-08-1927
• ಹಾಸನ	ದಿ. 03-08-1927
• ಹಾಸನ, ಹೊಳೆನರಸೀಪುರ	ದಿ. 04-08-1927
• ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
• ದಾವಣಗೆರೆ	ದಿ. 12-08-1927
• ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
• ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
• ಆಯ್ಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
• ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
• ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18-08-1927

● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು ಅರಸೀಕೆರೆ	ದಿ. 20-08-1927
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
● ಪೊನ್ನಂಪೇಟೆ, ಹುದಿಕೇರಿ	ದಿ. 22-02-1934
● ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ, ಗುಂಡುಕಟ್ಟೆ	ದಿ. 23-02-1934
● ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ ವಿಠಲಗಬ್ಬ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ, ಮಂಗಳೂರು	ದಿ. 24-02-1934
● ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934

● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934
● ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934
● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಪತ್ರಿಕೆಗಳು ಜನರಲ್ಲಿ ಸ್ವರಾಜ್ಯ, ಸ್ವಾತಂತ್ರ್ಯ, ದೇಶಪ್ರೇಮ, ಏಕತೆ ಮತ್ತು ರಾಷ್ಟ್ರೀಯತೆಯನ್ನು ಬೆಳೆಸುವ ಸಾಧನವಾಗಿ ಪ್ರಯೋಗಿಸಿ ಯಶಸ್ಸು ಕಂಡವರು ಕರಮಚಂದ ಗಾಂಧಿ ಅಪರಾಗಿದ್ದಾರೆ. ಖ್ಯಾತ ಪತ್ರಕರ್ತ ವಿ.ಎನ್. ನಾರಾಯಣನ್ ಅವರು "ಒಬ್ಬ ಪತ್ರಕರ್ತನಾಗಿ ಗಾಂಧಿ ಪತ್ರಿಕೋದ್ಯಮದ ಪಾಠ ಮಾಡಬಹುದಿತ್ತು. ಅವರೊಬ್ಬ ಪರಿಣಾಮಕಾರಿ ಸಂವಹನಕಾರ. ಅವರ ನೇರ, ದಿಟ್ಟ ಬರಹಗಳು ಕೋಟ್ಯಾಂತರ ದೇಶವಾಸಿಗಳಿಗೆ ತಲುಪುತ್ತಿತ್ತು. ದೇಶದಲ್ಲಿ ಸಾಕ್ಷರತೆ ಇರಲಿಲ್ಲ. ಆದರೂ ಗಾಂಧಿ ಬರೆದಿದ್ದು, ಇಡೀ ದೇಶಕ್ಕೆ ಗೊತ್ತಾಗುತ್ತಿತ್ತು" ಎಂದಿದ್ದಾರೆ.

ಡಾ. ವೂಡೇ ಪಿ. ಕೃಷ್ಣ

ಪತ್ರಿಕಾ ಮಾಧ್ಯಮವನ್ನು ಜನಸಾಮಾನ್ಯರಲ್ಲಿ ಸ್ವದೇಶಿಯುತೆ, ರಾಷ್ಟ್ರೀಯತೆಯನ್ನು ಒಡಮೂಡಿಸಲು ಗಾಂಧೀಜಿ ಅವರು ಪ್ರಯೋಗಿಸಿದ ಬಗೆಯನ್ನು "ಗಾಂಧಿಯೊಳಗಿನ ಪತ್ರಕರ್ತ" ಕೃತಿ ಬಹುವಿಧದಲ್ಲಿ ಅನಾವರಣಗೊಳಿಸುತ್ತದೆ.

ಇಂದಿರಾ ಕೃಷ್ಣಪ್ಪ

ಗಾಂಧಿಯನ್ನು ಜಗತ್ತಿನ ಶ್ರೇಷ್ಠ ಪರ್ತಕರ್ತ ಎನ್ನುವವರಿದ್ದಾರೆ! ಅವರು ಪತ್ರಕರ್ತರೇ ಅಲ್ಲ ಅನ್ನುವವರೂ ಇದ್ದಾರೆ! ಗಾಂಧಿ ಪತ್ರಿಕೆಗಳಲ್ಲಿ ಪ್ರತಿಪಾದಿಸಿದ ಮೌಲ್ಯಗಳು ಎಲ್ಲಕಾಲಕ್ಕೂ ಪ್ರಸ್ತುತ ಎನ್ನುವವರಿದ್ದಾರೆ! ಈಗಿನ ಕಾಲಕ್ಕೆ ಅವರ ಮೌಲ್ಯಗಳನ್ನು ನೆಚ್ಚಿಕೊಂಡರೆ ಪತ್ರಿಕೆ ಮುಚ್ಚಬೇಕಾಗುತ್ತದೆ ಅನ್ನವವರೂ ಇದ್ದಾರೆ! ಇಂದಿನ ಕನ್ನಡಕ ಹಾಕಿಕೊಂಡು ಅಂದಿನ ಗಾಂಧಿಯ ಪತ್ರಿಕೋದ್ಯಮವನ್ನು ನೋಡಿದರೆ ಹೇಗೆ ಕಾಣುತ್ತದೆ? ಕುತೂಹಲಕಾರಿ ಉತ್ತರಗಳಿಗಾಗಿ ಈ ಪುಸ್ತಕ ಓದಿ.

ಡಾ. ನಿರಂಜನ ವಾನಳ್ಳಿ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು
ISBN NO : 978-81-942226-8-2